ವಿಶ್ವಾಸ ಮೂಡತಕ್ಕಂಥ ರೀತಿಯಲ್ಲಿ ನಾನು ಹೋಗಬೇಕು, ನಾನು ಹೋಗುತ್ತಿದ್ದೇನೆ, ಕೆಲಸ ನಡೆಯುತ್ತಿದೆ, ಪತ್ರಿಕೆಗಳಲ್ಲಿ ದೊಡ್ಡದಾಗಿ ಬಂದರೂ ಯಾವ ತರಹದ ಮಾತಿಗೂ ತಾವು ಓಗೊಡತಕ್ಕದ್ದಲ್ಲ ಸರ್ಕಾರ ಎಲ್ಲಾ ತರಹದ ವ್ಯವಸ್ಥೆ ಮಾಡುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಅದಕ್ಕೆ ಮೊನ್ನೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಸದನ ಸಮಿತಿ ಅಲ್ಲಿಗೆ ಕಳುಹಿಸಿ ನಂತರ ನೀವು ಹೋಗಿ ಎಂದು ಕೇಳಿದೆ. ಅದಕ್ಕೆ ಅವರು ಒಪ್ಪಲಿಲ್ಲ, ನೀವು ವೆಂಕಟಮ್ಮನಳ್ಳಿಗೆ ಹೋದರೂ ಅಡ್ಡಿಯಿಲ್ಲ ಚಾಮರಾಜನಗರಕ್ಕೆ ಹೋಗಬೇಡಿ... ಅಯ್ಯೋ ಹಿಂದೆ ನಾವು ಎಲ್ಲಾ ಕೇಳಿದ್ದೇನೆ, ಅದರಿಂದ ಹೋಗಬೇಡಿ. ಅವರು ಸ್ವಲ್ಪ ದಿವಸ ಮುಂದುವರಿಯಲಿ ಎಂಬುದೇ ನಮ್ಮ ಇಚ್ಛೆ.

ಶ್ರೀ ವಾಟಾಳ್ ನಾಗರಾಜ್ : ಏಕೆ ಆಕ್ಷೇಪ ಮಾಡುತ್ತೀರಿ? ಅಲ್ಲಿಗೆ ಏಕೆ ಹೋಗಬಾರದು? ಇದು ನನಗೆ ಅರ್ಥವಾಗಲಿಲ್ಲ, ನೀವು ಅದನ್ನು ಹೇಳಬೇಕು, ಸರಕಾರ ಉಳಿಯಲು ಅದರ ಬಗ್ಗೆ ನನ್ನದೇನೂ ಇಲ್ಲ, ಆದರೆ ಚಾಮರಾಜನಗರಕ್ಕೆ ಬಂದರೆ ಸರ್ಕಾರ ಹೋಗುತ್ತದೆ ಎಂದರೆ ಅಂಥ ಅನಾಗರೀಕವಾದಂಥ ಮೂಢನಂಬಿಕೆಗಳ ಬಗ್ಗೆ ಚರ್ಚಿಸುವುದೇ ಅತ್ಯಂತ ಅಪಾಯಕಾರಿ ಬೆಳವಣಿಗೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಏನು ಏನು ನಡೆಯುತ್ತಿದೆ ಎಂದು ಕೆಲವು ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಒಂದು ಕೋಟಾ ನೋಟು, ನಮ್ಮ ಭಾಗದಲ್ಲಿ ಇದು ಅವ್ಯಾಯುತವಾಗಿ ನಡೆಯುತ್ತಿದೆ, ಇದು ಬಹಳಷ್ಟು ಜಾಸ್ತಿಯಾಗಿದೆ, ನಮ್ಮಲ್ಲಿ ಒರಿಜಿನಲ್ ನೋಟು ಹಿಡಿದುಕೊಂಡು ಹೋಗುವವರಿಗೂ ಹೆದರಿಕೆ ಶುರುವಾಗಿದೆ. ಒಂದು ನೋಟು ಸಿಕ್ಕರೂ ಹಿಡಿದು ಒಳಗೆ ಹಾಕುವ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ಜಾಸ್ತಿ ಕ್ರಮ ತೆಗೆದುಕೊಳ್ಳಬೇಕು, ಬೆಂಗಳೂರು ಹಾಗೂ ಸುತ್ತಮುತ್ತ ನಡೆಯುವಂಥ ರೌಡಿಗಳ ಕಾಳಜಿ, ಇಲ್ಲಿ ಒಂದು ಅವರವರೊಳಗೆ ಯುದ್ಧವೇ ಶುರುವಾಗಿದೆ. ನಮಗೆ ಅವರಲ್ಲಿ ಯಾರು ಹೋದರು ಯಾರು ಹೋಗಲಿಲ್ಲ ಎಂದು ಬೇಸರದ ಸಂಗತಿಯಲ್ಲ, ಆದರೆ, ವಾತಾವರಣ ಹಾಳಾಗುತ್ತಿದೆ. ಮತ್ತೆ ಜನರಲ್ಲಿ ಭಯದ ವಾತಾವರಣ ಉಂಟಾಗುತ್ತಿದೆ. ಇದನ್ನು ನಿಲ್ಲಿಸತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕು. ಹಿಂದೆ ನಮ್ಮ ಭಾಗದಲ್ಲಿ ಸ್ಮಗ್‌ಲಿಂಗ್ ಹೆಚ್ಚಾಗಿತ್ತು, ಆ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಇಂಪೋರ್ಟೆಡ್ ಐಟಂಗಳನ್ನು ಫ್ರೀಯಾಗಿ ತರುವುದಕ್ಕೆ ಅವಕಾಶ ಕೊಟ್ಟಾಗ ಸ್ಮಗ್‌ಲಿಂಗ್ ನಡೆಯತಕ್ಕಂಥದು ನಿಂತು ಹೋಯಿತು. ಅನಂತರ ದಿನಗಳಲ್ಲಿ ಹವಾಲ ಪ್ರಾರಂಭವಾಯಿತು. ಇದು ಪ್ರಾರಂಭವಾದಾಗ ಡಾಲರನ್ನು ಫ್ರೀಯಾಗಿ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಟ್ಟರು. ಅನಂತರ ಹವಾಲ ವ್ಯವಹಾರ ಕೂಡ ನಿಂತುಹೋಯಿತು. ಇವತ್ತಿನ ದಿವಸ ಚಿಟ್ ಫಂಡ್, ರಿಯಲ್ ಎಸ್ಟೇಟ್ ವ್ಯವಹಾರ

ಪ್ರಾರಂಭವಾಗಿವೆ. ಇವತ್ತಿನ ದಿವಸ ಹವಾಲ ಮತ್ತು ಸ್ಮಗಲಿಂಗ್ ನಿಲ್ಲಿಸುವುದಕ್ಕೆ ಸಾಧ್ಯವಾಗಿರುವುದರಿಂದ ಇವುಗಳನ್ನು ನಿಲ್ಲಿಸುವುದಕ್ಕೆ ನಿಮಗೆ ಇಚ್ಛಾಶಕ್ತಿ ಇದ್ದರೆ ಇದಕ್ಕೊಂದು ಬೇರೆ ರೀತಿಯ ಕಾನೂನು ತಂದರೆ ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಇವತ್ತಿನ ದಿವಸ ಮಟ್ಕಾ ದಂಧೆ ನಿಲ್ಲದೇ ಹೋದರೆ ಗ್ರಾಮೀಣ ಪ್ರದೇಶ ಸರ್ವ ನಾಶವಾಗುತ್ತದೆ. ಇದನ್ನು ನಿಲ್ಲಿಸುತ್ತೇನೆಂದು ಮಾನ್ಯ ಸಚಿವರಾದ ಶ್ರೀ ಬಸವರಾಜ್ ಹೊರಟ್ಟಿಯವರು ಹೇಳಿರತಕ್ಕಂಥ ಹೇಳಿಕೆಯನ್ನು ನಾನು ಕೇಳಿದ್ದೇನೆ. ಇದನ್ನು ಮೊದಲು ನಿಲ್ಲಿಸತಕ್ಕಂಥ ವ್ಯವಸ್ಥೆಯನ್ನು ಪೊಲೀಸಿನವರು ಮಾಡಬೇಕಾಗುತ್ತದೆ. ಇದನ್ನು ಬಚ್ಚಿಟ್ಟುಕೊಂಡು ಮಾಡತಕ್ಕಂಥ ದಂಧೆ. ಎಲ್ಲಿ ನಡೆಯುತ್ತಿದೆ ಎಂಬುದು ಪೊಲೀಸ್‌ನವರಿಗೆ ಮತ್ತು ಎಲ್ಲ ಇಲಾಖೆಯ ಅಧಿಕಾರಿಗಳಿಗೆ ಗೊತ್ತಿದೆ. ಇವರಿಗೇನು ಗೊತ್ತಿಲ್ಲದ ರೀತಿಯಲ್ಲಿ ಮಟ್ಕಾ ಮತ್ತು ಇಲ್ಲಿಸಿಟ್ ಲಿಕ್ಕರ್ ಬಿಸಿನೆಸ್ ನಡೆಯುತ್ತಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಪೊಲೀಸ್ ಆಫೀಸರ್ ಹತ್ತಿರ ಇರತಕ್ಕಂಥ ಪೆಂಡಿಂಗ್ ಫೈಲ್ಸ್ ಬಗ್ಗೆ ಅವರು ತೆಗೆದುಕೊಂಡಿರತಕ್ಕಂಥ ಕ್ರಮಗಳ ಬಗ್ಗೆ ಮತ್ತು ಪೊಲೀಸ್ ಅಧಿಕಾರಿಗಳನ್ನು ಪೋಸ್ಟಿಂಗ್ ಮಾಡತಕ್ಕಂಥವರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಿದ್ದೇವೆ. ನಮಗೆ ಯಾವ ಅಧಿಕಾರಿ ಬೇಡ ಎನ್ನತಕ್ಕಂಥವರನ್ನು ಮಾತ್ರ ನಾವು ಹೇಳುತ್ತೇನೆ. ಆದರೆ, ಒಳ್ಳೆಯ ಅಧಿಕಾರಿಗಳನ್ನು ಪೋಸ್ಟಿಂಗ್ ಮಾಡಬೇಕಾಗುತ್ತದೆ. ಏಕೆಂದರೆ, ಅವರು ಏನೇ ತಪ್ಪು ಮಾಡಿದರೆ ನಾವು ಅವರನ್ನು ಕೇಳಬಹುದು ಅಥವಾ ಸರ್ಕಾರದವರನ್ನು ಕೇಳಬಹುದು. ಆದ್ದರಿಂದ, ಈ ಒಂದು ವ್ಯವಸ್ಥೆಯನ್ನು ತಾವು ತರಬೇಕೆಂದು ಕೇಳಿಕೊಳ್ಳುತ್ತೇನೆ. ಮೊನ್ನೆ ದಿವಸ ಅಫೀಮು ಬೆಳೆಯುವುದರ ಬಗ್ಗೆ ನಾನು ಗಮನ ಸೆಳೆಯುವ ಸೂಚನೆಗೆ ಒಂದು ಪತ್ರವನ್ನು ಕೊಟ್ಟಿದ್ದೆ. ಅಫೀಮು ಬೆಳಯತಕ್ಕಂಥದು ಕಾನೂನು ಬಾಹಿರ ಎಂದು ಹೇಳಿದರೂ ಕೂಡ ಅದಕ್ಕೆ ಸರ್ಕಾರ ಪರ್ಮಿಷನ್ ಕೊಡಲಿಕ್ಕೆ ಒತ್ತಾಯವನ್ನು ಮಾಡುತ್ತೇವೆಂದು ಮಾನ್ಯ ತೋಟಗಾರಿಕೆ ಇಲಾಖೆಯ ಸಚಿವರು ಮತ್ತು ಕೃಷಿ ಇಲಾಖೆಯ ಸಚಿವರು ಹೇಳಿದ್ದಾರೆ. ಆದ್ದರಿಂದ, ಇದು ಎಷ್ಟರಮಟ್ಟಿಗೆ ಸರಿ ಎನ್ನತಕ್ಕಂಥದು ತಿಳಿಯಬೇಕು. ಏಕೆಂದರೆ ಇವುಗಳೆಲ್ಲವನ್ನು ಹಿಡಿಯುವುದಕ್ಕೋಸ್ಕರ ಇವತ್ತಿನ ದಿವಸ ನಮ್ಮಲ್ಲಿ ನಾರ್ಕೋಟಿಕ್ ಡಿವಿಜನ್ ಇದೆ. ಆದರೆ, ಸರ್ಕಾರ ಇದಕ್ಕೆ ಒಪ್ಪಿಗೆ ಕೊಟ್ಟರೆ ಅಂಡರ್‌ವರ್ಲ್ಡ್ ಎನ್ನತಕ್ಕಂಥ ಹೊಸ ವ್ಯವಸ್ಥೆ ಪ್ರಾರಂಭವಾಗುತ್ತದೆ. ಆದ್ದರಿಂದ, ಇದರ ಬಗ್ಗೆ ನಾವು ಜಾಗೃತರಾಗಿರಬೇಕಾಗುತ್ತದೆ. ಇವತ್ತಿನ ದಿವಸ ನಮ್ಮಲ್ಲಿ ನಾರ್ಕೋಟಿಕ್ ಡಿವಿಜನ್ ಇರತಕ್ಕಂಥದ್ದೆ, ಇಂಥವುಗಳನ್ನು ಹಿಡಿದು ಸಂಬಂಧಪಟ್ಟವರ ಮೇಲೆ ಕೇಸ್ ಹಾಕುವುದಕ್ಕೆ ಇದೆ. ಆದ್ದರಿಂದ, ನಾವು ಇದಕ್ಕೆ ಪರ್ಮಿಷನ್ ಕೊಡತಕ್ಕಂಥದು ಎಷ್ಟು ಸರಿ ಎನ್ನತಕ್ಕಂಥದು ನನಗೆ ಗೊತ್ತಿಲ್ಲ, ಇದರ ಬಗ್ಗೆ ಇಬ್ಬರು ಮಾನ್ಯ ಸಚಿವರು ಹೇಳಿರುವುದರಿಂದ ಇದರ

ಬಗ್ಗೆ ಇಲ್ಲಿ ಚರ್ಚೆಯಾಗಬೇಕಾಗಿದೆ. ಒಬ್ಬ ಒಳ್ಳೆಯ ಅಧಿಕಾರಿ ಉತ್ತಮವಾದ ಕೆಲಸ ಮಾಡುತ್ತಿರುವಾಗ ಆತನ ಬಾಯಿಯನ್ನು ಮುಚ್ಚಿಸುವುದಕ್ಕೋಸ್ಕರ ಆತನ ಮೇಲೊಂದು ಲೋಕಾಯುಕ್ತಕ್ಕೆ ಅರ್ಜಿ ಹಾಕತಕ್ಕಂಥ ಕೆಲಸ ನಡೆಯುತ್ತಿದೆ. ಆದರೆ, ಈ ಅರ್ಜಿ ಅಲ್ಲಿ ತನಿಖೆ ಆಗದೇ ಅವರು ಇದನ್ನು ಹಾಗೆಯೇ ಇಟ್ಟುಕೊಂಡು ಸುಮ್ಮನೆ ಕುಳಿತುಕೊಂಡು ಬಿಡುತ್ತಾರೆ. ತಕ್ಷಣವೇ ಇಂಥ ಅರ್ಜಿಗಳ ಬಗ್ಗೆ ತನಿಖೆ ಮಾಡಿದರೆ ಸರಿ ತಪ್ಪುಗಳ ಬಗ್ಗೆ ಸಂಬಂಧಪಟ್ಟವರಿಗೆ ಧೈರ್ಯ ಬರುತ್ತದೆ. ಯಾವರೀತಿಯಾಗಿ ತನಿಖೆ ಮಾಡಬೇಕೆಂದು ನಾನು ಲೋಕಾಯುಕ್ತವನ್ನು ಕೇಳುವುದಿಲ್ಲ. ಆದರೆ, ತನಿಖೆ ತಕ್ಷಣ ಆಗಬೇಕು. ಇಲ್ಲದಿದ್ದರೆ ಏನಾಗುತ್ತದೆಂದರೆ, ಸಂಬಂಧಪಟ್ಟವರು ಒಳ್ಳೆಯ ಅಧಿಕಾರಿಗಳಾಗಿದ್ದರೆ ಆತ ಯಾವುದೇ ಒಂದು ಒಳ್ಳೆಯ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಆಗದೆ ಇರತಕ್ಕಂಥ ಪರಿಸ್ಥಿತಿಗೆ ಆತನನ್ನು ತರತಕ್ಕಂಥದು ಸರಿಯಲ್ಲ. ಮತ್ತೆ ಶಾಸನ ಸಭೆ ಹಾಗೂ ಲೋಕಸಭೆ ಸದಸ್ಯರುಗಳು ಆಸ್ತಿಯ ವಿವರಣೆಯನ್ನು ಲೋಕಾಯುಕ್ತರವರಿಗೆ ಫೈಲ್ ಮಾಡುತ್ತೇನೆ. ಚುನಾವಣೆ ಸಂದರ್ಭದಲ್ಲಿ ರಿಟರ್ನಿಂಗ್ ಆಫೀಸರ್‌ರವರಿಗೆ ಈ ವಿವರಣೆಯನ್ನು ಕೊಡುತ್ತೇನೆ. ಶಾಸಕರು ಪ್ರತಿ ವರ್ಷ ಆಸ್ತಿಯ ವಿವರಣೆಯನ್ನು ಲೋಕಾಯುಕ್ತರವರಿಗೆ ಕೊಡುತ್ತೇನೆ. ಇದರ ಬಗ್ಗೆ ಒಂದು ವರ್ಷ ತನಿಖೆ ಮಾಡಿದರೆ ನನಗೆ ನಿಜವಾಗಿಯೂ ಕೂಡ ಸಂತೋಷವಾಗುತ್ತದೆ. ನಮ್ಮ ಆಸ್ತಿಗಳ ವಿವರ ಇಷ್ಟಿಷ್ಟು ಇದೆ ಎಂದು ಮಾಹಿತಿ ಕೊಟ್ಟರೆ ಮುಗಿಯಿತು. That is the end of it.ಆದರೆ, ನಾವು ಕೊಟ್ಟಿರತಕ್ಕಂಥ ಮಾಹಿತಿ ಸರಿ ಇದೆಯೋ ಅಥವಾ ಇಲ್ಲವೋ ಎನ್ನುವಂಥದ್ದು ಮತ್ತು ಆಸ್ತಿಯ ಬೆಲೆ ನಾವು ಕೊಟ್ಟಿರತಕ್ಕಂಥ ಲೆಕ್ಕಕ್ಕೆ ಸರಿಯಾಗಿದೆಯೋ ಎನ್ನತಕ್ಕಂಥದರ ಬಗ್ಗೆ ಏನು ತನಿಖೆ ಮಾಡುವುದಿಲ್ಲ. ಯಾರಾದರೂ ಪಾಪದವರು ಇದ್ದರೆ ಅವರ ಮೇಲೆ ಕೇಸ್ ಹಾಕಿ ಕ್ರಮ ತೆಗೆದುಕೊಳ್ಳುವಂಥದು ಇವತ್ತಿನದಿವಸ ನಡೆಯುತ್ತಿದೆ. ಆದರೆ, ಇದು ಮೊದಲು ನಮ್ಮಿಂದ ಪ್ರಾರಂಭವಾಗಬೇಕು. ಅಂದರೆ, ನಾವು ಕೊಟ್ಟಿರತಕ್ಕಂತ ರಿಟರ್ನ್‌ನಿನ ಬಗ್ಗೆ ಲೋಕಾಯುಕ್ತರವರು ತನಿಖೆ ಮಾಡಬೇಕು. ಮತ್ತೆ ನಾವು ಏನು ಆಸ್ತಿಗಳ ವಿವರಣೆ ಕೊಟ್ಟಿದ್ದೇನೆ ಅದಕ್ಕೆ ಮಾರುಕಟ್ಟೆ ಧಾರಣೆ ಸರಿಯಾಗಿದೆಯೇ ಎಂಬುದು ಮತ್ತು ನಮ್ಮ ಸೋರ್ಸ್ ಆಫ್ ಇನ್‌ಕಂ ಅಂದರೆ ನಾವು ಯಾವ ಆದಾಯದ ಮೂಲದಿಂದ ಅದನ್ನು ಖರೀದಿ ಮಾಡಿದ್ದೇವೆ ಎನ್ನತಕ್ಕಂಥದರ ಬಗ್ಗೆ ತನಿಖೆ ಮಾಡಬೇಕು. ಆದ್ದರಿಂದ, ಈಗ ಇರತಕ್ಕಂಥ ವ್ಯವಸ್ಥೆ ಸ್ವಲ್ಪ ಬದಲಾವಣೆ ಆಗಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊನ್ನೆದಿವಸ ಆದಿ ಉಡುಪಿಯಲ್ಲಿ ನಡೆದಂಥ ಕೋಮು ಗಲಭೆಗಳ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಶೂನ್ಯವೇಳೆಯಲ್ಲಿ ಈಗಾಗಲೇ ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಆದರೆ, ಅದನ್ನು ಪುನಃ ಇಲ್ಲಿ ಮತ್ತೆ ಪ್ರಸ್ತಾಪ ಮಾಡುತ್ತೇನೆ. ಆದರೆ, ಮತ್ತೊಮ್ಮೆ ಇದನ್ನು ಕೇಳುವುದಕ್ಕೆ ಇಷ್ಟಪಡುವುದಿಲ್ಲ. Man dragged nacked on the street

ಎಂದು ಪಿರಿಯಾಪಟ್ಟಣದಲ್ಲಿ ನಡೆದಂಥ ಘಟನೆ ಬಗ್ಗೆ ಏನು ಬರೆದಿದ್ದಾರೆಂದರೆ, A man with hands and legs tied was reportedly dragged through the village who are on some money issue at chellur in Piriyapatna today reminding of a similar incident at Adi-Udupi.

ಎಂದು ಬರೆದಿದ್ದಾರೆ. ಆದಿ ಉಡುಪಿಯಲ್ಲಿ ಎರಡು ಕೋಮಿನ ಜನರಿದ್ದರಿಂದ ಅದು ಕೋಮುಗಲಭೆಗೆ ತಿರುಗಿತು. ಆದರೆ, ಇದರಲ್ಲಿ ಒಂದೇ ಕೋಮಿನವರಿದ್ದರಿಂದ ಇದರ ಬಗ್ಗೆ ಪತ್ರಿಕೆ ಬಿಟ್ಟು ಬೇರೆ ಎಲ್ಲಿಯೂ ಚರ್ಚೆಯಾಗಲಿಲ್ಲ, ಆದ್ದರಿಂದ, ಈ ವಾತಾವರಣ ಯಾವ ರೀತಿಯಾಗಿದೆ ಎನ್ನತಕ್ಕಂಥದರ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಗೃಹ ಇಲಾಖೆಯನ್ನು ತಮ್ಮಲ್ಲಿಟ್ಟುಕೊಂಡಿರುವುದರಿಂದ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನತಕ್ಕಂಥ ಉತ್ತರವನ್ನು ಅವರು ಹೇಳಬೇಕಾಗುತ್ತದೆ. ಮೊನ್ನೆದಿನ ಈ ಪ್ರಶ್ನೆಯನ್ನು ಕೇಳಿದ್ದೇನೆ. ಈಗ ಮತ್ತೊಮ್ಮೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಕೇಳಬೇಕು. ಅದೇನೆಂದರೆ, ಒಬ್ಬ ವ್ಯಕ್ತಿಯ ಕೈ ಕಾಲನ್ನು ಕಟ್ಟಿ ಹಾಕಿ ಆತನ ಬಟ್ಟೆಯನ್ನು ಬಿಚ್ಚಿ ರಸ್ತೆಯಲ್ಲಿ ಮೆರವಣಿಗೆ ಮಾಡಿರತಕ್ಕಂಥದು ನೋಡಿದರೆ ಸಹ ಇದು ನಾಗರೀಕ ಸಮಾಜವೇ ಅಥವಾ ಇಲ್ಲವೇ ಎನ್ನತಕ್ಕಂಥದು ನಮಗೆ ಗೊತ್ತಾಗಬೇಕಾಗುತ್ತದೆ. ನಾಗರಿಕ ಸಮಾಜದಲ್ಲಿ ಈ ರೀತಿಯಾದ ಪರಿಸ್ಥಿತಿ ಉಂಟಾದರೆ, ಅಂದರೆ, ಮೊನ್ನೆದಿವಸ ಒಬ್ಬ ವ್ಯಕ್ತಿಗೆ ಆಗಿದೆ, ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿಲ್ಲ, ಈಗ ಎರಡನೇ ವ್ಯಕ್ತಿಗೆ ಆಗಿದೆ ಇದರಬಗ್ಗೆಯೂ ಕೂಡ ಸರ್ಕಾರ ಏನು ಕ್ರಮ ತೆಗೆದುಕೊಂಡಿಲ್ಲವೆಂದು ಇದೇ ರೀತಿಯ ಘಟನೆ ನಡೆಯುತಕ್ಕಂಥದು ಒಂದು ರೀತಿ ಪರಿಪಾಠವಾಗುವಂಥ ಪರಿಸ್ಥಿತಿ ನಿರ್ಮಾಣ ಆಗಬಹುದೆಂದು ನನ್ನ ಅಭಿಪ್ರಾಯ ಆಗಿದೆ. ಇದರ ಬಗ್ಗೆ ಆ ಭಾಗದಲ್ಲಿರತಕ್ಕಂಥ ಪೊಲೀಸ್ ಅಧಿಕಾರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆಂದು ಮತ್ತು ಈ ಘಟನೆ ನಡೆಯುವಾಗ ಪೊಲೀಸ್ ಅಧಿಕಾರಿಗಳು ಏನು ಮಾಡುತ್ತಿದ್ದರೆಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಈ ಸದನಕ್ಕೆ ಉತ್ತರ ನೀಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಆರೋಗ್ಯ ಇಲಾಖೆಗೆ ಬಜೆಟ್‌ನಲ್ಲಿಟ್ಟಿರತಕ್ಕಂಥ ಅನುದಾನ ಬಹಳ ಕಡಿಮೆಯಾಯಿತ್ತೆಂಬುದು ನನ್ನ ಅಭಿಪ್ರಾಯ.

ಅಧ್ಯಕ್ಷರು : ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ತಾವು ಬೇಗ ಮುಗಿಸಬೇಕು.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಆರೋಗ್ಯ ಇಲಾಖೆಯ ಬಗ್ಗೆ

ನಾನು ಈಗಾಗಲೇ ಹೇಳಿದ್ದೇನೆ. ಆಂಬುಲೆನ್ಸ್ ತೆಗೆದುಕೊಳ್ಳುವುದಕ್ಕೆ ೮ ಕೋಟಿ ರೂಪಾಯಿ ಮತ್ತು ಸ್ಕ್ಯಾನಿಂಗ್ ಮೆಷಿನ್ ತೆಗೆದುಕೊಳ್ಳುವುದಕ್ಕೆ ಇಂತಿಷ್ಟು ಹಣ ಕೊಡುತ್ತೇವೆಂದು ಹೇಳತಕ್ಕಂಥದು ಅಲ್ಲ. It should be need base ಇದಕ್ಕೆ ಇಷ್ಟು ಅಗತ್ಯತೆ ಇದೆ. ಆದ್ದರಿಂದ ಈಗ ಇಷ್ಟು ಹಣ ಮಾತ್ರ ಕೊಟ್ಟಿದ್ದೇವೆ. ಮತ್ತೆ ಹೆಚ್ಚು ಹಣ ಬೇಕಾದರೆ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಅರ್ಥ ಸಚಿವರು ಹೇಳಬೇಕಾಗಿತ್ತು. ನಮ್ಮಲ್ಲಿ ಕರ್ನಾಟಕ ಆಂಟಿಬಯಾಟಿಕ್ಸ್ ಎನ್ನತಕ್ಕಂಥದು ಇದೆ. ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಶೇರ್ಸ್ ಇದೆ. ಇದರಿಂದ ಖರೀದಿಗಳನ್ನು ಮಾಡುವುದನ್ನೆ ಈಗ ಬಿಟ್ಟಿದ್ದಾರೆ. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಇದರಿಂದ ಖರೀದಿ ಮಾಡಬೇಕಾದರೆ ಟೆಂಡರನ್ನು ಕರೆಯಬೇಕಾಗಿಲ್ಲ. ಈ ಒಂದು ಕಾರಣದಿಂದ ಇವರಿಂದ ಖರೀದಿ ಮಾಡುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ಈ ರೀತಿ ಏಕೆ ಆಗಿದೆ ಎನ್ನತಕ್ಕಂಥದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಬೇಡಿಕೆಯ ಮೇಲೆ ಚರ್ಚೆಯಾಗುವಂಥ ಸಂದರ್ಭದಲ್ಲಿ ಎಲ್ಲಾ ಮಂತ್ರಿಗಳು ಇಲ್ಲದಿದ್ದರೆ ನಮಗೆ ಸರಿಯಾದ ಉತ್ತರ ಸಿಗುತ್ತಿತ್ತು ಎಂದು ನಾನು ಈಗಾಗಲೇ ಹೇಳಿದ್ದೇನೆ. ಔಷಧಿಗಳನ್ನು ಎಲ್ಲಾ ಜಿಲ್ಲೆಗಳಿಗೆ ಒಂದೇ ಸಲ ಖರೀದಿ ಮಾಡಿ ಕಳುಹಿಸಿಕೊಡುವುದಕ್ಕಿಂತ ಯಾವ್ಯಾವ ಜಿಲ್ಲೆಗೆ ಯಾವ್ಯಾವ ಔಷಧಿ ಬೇಕೆಂಬ ಬೇಡಿಕೆಯನ್ನು ತರಿಸಿಕೊಂಡು ಆ ಪ್ರಕಾರ ಔಷಧಿ ಖರೀದಿ ಮಾಡಿ ಕಳುಹಿಸತಕ್ಕಂಥದು ಸರಿಯಾದ ವ್ಯವಸ್ಥೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿಂದ ಒಂದೇ ಸಾರಿ ಖರೀದಿ ಮಾಡಿ ಕಳುಹಿಸತಕ್ಕಂಥದು ಸರಿಯಲ್ಲ. ಏಕೆಂದರೆ, ಬಜೆಟ್ ಅಲೋಕೇಷನ್ ಇವರಿಗೆ ಕೊಡುವುದರಿಂದ ಇವರು ಖರೀದಿ ಮಾಡಿ ಅವರಿಗೆ ಬೇಡವಾದ ಔಷಧಿಗಳನ್ನು ಅಲ್ಲಿಗೆ ಕಳುಹಿಸುತ್ತಿದ್ದಾರೆ. ಆದ್ದರಿಂದ, ಈ ಒಂದು ವ್ಯವಸ್ಥೆ ತಪ್ಪೆಂದು ಹೇಳುತ್ತೇನೆ. ಮತ್ತೆ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಉಳುಮೆ ಮಾಡುವುದಕ್ಕೆ ಭೂಮಿ ಇದೆ. ಆದರೆ ನೀರಿಲ್ಲ. ಇವತ್ತಿನ ದಿವಸವು ವ್ಯವಸಾಯಕ್ಕೆ ಮತ್ತು ಕುಡಿಯುವ ನೀರಿಗೂ ಕೂಡ ಸಾಕಷ್ಟು ಕೊರತೆ ಇದೆ. ಇವತ್ತಿನ ದಿವಸ ಭೂಮಿಯ ಅಡಿಯಲ್ಲಿರತಕ್ಕಂಥ ಅಂತರ್ಜಲ ಕೂಡ ಕೆಳಕ್ಕೆ ಹೋಗುತ್ತಿದೆ. ಇದರಿಂದ ರೈತನ ಪರಿಸ್ಥಿತಿ ಕೂಡ ಚಿಂತಾಜನಕವಾಗುತ್ತಿದೆ. ಇವತ್ತಿನ ದಿವಸ ನಾವು ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೋಸ್ಕರ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಆದರೆ, ಸಣ್ಣ ನೀರಾವರಿಗೆ ಕೇವಲ ೪೫೧ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಕಳೆದ ಬಾರಿಗಿಂತ ಈ ಸಾರಿ ೧೫೧ ಕೋಟಿ ರೂಪಾಯಿ ಜಾಸ್ತಿ ಕೊಟ್ಟಿದ್ದಾರೆ. ಇವತ್ತಿನ ದಿವಸ ನಬಾರ್ಡ್ ಯೋಜನೆಗಳನ್ನು ಫುಲ್‌ಫಿಲ್ ಮಾಡುವುದಕ್ಕೆ ಮೊದಲು ನಾವು ಹಣ ಕೊಡಬೇಕಾಗುತ್ತದೆ. ಆನಂತರ ಇದಕ್ಕೆ ನಬಾರ್ಡ್‌ನವರು ಹಣ ಕೊಡುತ್ತಾರೆ. ಆದ್ದರಿಂದ, ತಾವು ಈಗ ಕೊಟ್ಟಿರತಕ್ಕಂಥ ಹಣ

ಇದಕ್ಕೆ ಮಾತ್ರ ಸಾಕಾಗುತ್ತದೆ. ಆದರೆ, ಸಂಪೂರ್ಣ ನೀರಾವರಿ ಯೋಜನೆಗೆ ಈ ಹಣ ಸಾಕಾಗುವುದಿಲ್ಲ. ಇವತ್ತಿನ ದಿವಸ ಕೆರೆಯಲ್ಲಿ ತುಂಬಿರುವ ಹೂಳನ್ನು ತೆಗೆಯಬೇಕಾಗುತ್ತದೆ. ನಮ್ಮ ಕರಾವಳಿ ಭಾಗದಲ್ಲಿ ಉಪ್ಪುನೀರಿನ ತಡೆಯುವುದಕ್ಕೆ ಅಣೆಕಟ್ಟುಗಳನ್ನು ನಿರ್ಮಾಣ ಮಾಡುವುದಕ್ಕೆ ಕೇವಲ ೨೦೦ ಕೋಟಿ ರೂಪಾಯಿ ಬೇಕಾಗುತ್ತದೆ. ಇದರಿಂದ ಇಡೀ ಕರಾವಳಿಯಲ್ಲಿರುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಬಹುದಾಗಿತ್ತು. ಆದರೆ, ಇದಕ್ಕೆ ಹೆಚ್ಚಿನ ಹಣ ಇಟ್ಟಿಲ್ಲ. ನದಿ ಜೋಡಣೆ ಮಾಡುವುದರ ಬಗ್ಗೆ ಮಾಜಿ ಶಾಸಕರೊಬ್ಬರು ಒಂದು ಪುಸ್ತಕವನ್ನು ಬರೆದಿದ್ದಾರೆ. ಸಕಲೇಶಪುರದಿಂದ ಈ ಭಾಗಕ್ಕೆ ನೀರನ್ನು ತರತಕ್ಕಂಥದನ್ನು ನಾನು ಇವತ್ತಿನ ಪತ್ರಿಕೆಯಲ್ಲಿ ಓದಿದ್ದೇನೆ. ಇವತ್ತಿನ ದಿವಸ ನಮ್ಮ ಭಾಗದಲ್ಲಿಯೇ ನೀರಿಲ್ಲ. ಮೊನ್ನೆ ದಿವಸ ಕುಡಿಯುವ ನೀರಿನ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದೇನೆ. ಮಲೆನಾಡು ಪ್ರದೇಶದಲ್ಲಿ ಸರಿಯಾಗಿ ಮಳೆ ಬಂದರೆ ಮಾತ್ರ ನಮ್ಮ ಭಾಗದಲ್ಲಿ ಹೆಚ್ಚು ನೀರು ಸಿಗುತ್ತದೆ. ಆದರೆ, ನಮ್ಮ ಭಾಗದಲ್ಲಿ ನದಿಯ ಜೋಡಣೆ ಮಾಡಿ ಅಲ್ಲಿನ ನೀರಿನ ವ್ಯವಸ್ಥೆಯನ್ನು ಸರಿಯಾಗಿ ಮಾಡುವ ಆಲೋಚನೆಯನ್ನು ಬಿಟ್ಟು ಆ ಭಾಗಕ್ಕೆ ಹೋಗುವ ನೀರನ್ನು ಈ ಕಡೆ ತಿರುಗಿಸುವುದಕ್ಕೆ ಪ್ರಯತ್ನ ಮಾಡಿದರೆ ಹೇಗಾಗುತ್ತದೆಂದರೆ, ನಮ್ಮ ಭಾಗದಲ್ಲಿ ಬಂದಂಥ ಮಳೆಯ ನೀರು ಸಮುದ್ರಕ್ಕೆ ಮತ್ತು ಮಲೆನಾಡು ಪ್ರದೇಶದಿಂದ ಬರತಕ್ಕಂಥ ನೀರನ್ನು ಈ ಭಾಗಕ್ಕೆ ಕೊಡುವುದರ ಬಗ್ಗೆ ಸರಿಯೇ? ಡಿ.ಎಂ.ನಂಜುಂಡಪ್ಪನವರ ವರದಿಯ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಅವರು ಕೊಟ್ಟಿರತಕ್ಕಂಥ ವರದಿಯ ಪುಸ್ತಕವನ್ನು ನಾನು ಬಹಳಷ್ಟು ಸಾರಿ ಓದಿದ್ದೇನೆ. ಇದರ ಬಗ್ಗೆ ಅವರು ಎಲ್ಲಿಯೂ ಚರ್ಚೆ ಅಥವಾ ವಿಶ್ಲೇಷಣೆ ಮಾಡಿಲ್ಲ.

ಓದಿದ್ದು ಏಕೆಂದರೆ, ಇದೊಂದು ವಿವಿಧ ವ್ಯಾಖ್ಯಾನ, ಪ್ರತಿಯೊಂದು ಶಬ್ದದಲ್ಲಿ ನಂಜುಂಡಪ್ಪನವರ ವರದಿಯಲ್ಲಿ ಎಲ್ಲಿಯೂ ಯಾವ ಭಾಗಕ್ಕೆ ಏನನ್ನು ಕೊಡಬೇಡಿ ಎಂದು ಹೇಳಿರುವುದಿಲ್ಲ. ಅವರು ಹೇಳಿರುವಂತೆ ಇಂತಿಂಥ ಕಡೆಗಳಲ್ಲಿ ಇಂಥದ್ದು ಕಡಿಮೆ ಇದೆ, ಅದಕ್ಕೆ ವ್ಯವಸ್ಥೆ ಮಾಡಿ ಎಂದು ಹೇಳಿದ್ದಾರೆ. ಕೆಲವೊಂದು ನಮ್ಮ ಭಾಗಕ್ಕೂ ಹೇಳಿದ್ದಾರೆ. ಅವರು ಗೋಡಂಬಿಗೆ ಉತ್ತೇಜನವನ್ನು ಕೊಡಲಿಕ್ಕೆ ಹೇಳಿದ್ದಾರೆ, ಅದರ ಬಗ್ಗೆ ಬಜೆಟ್‌ನಲ್ಲಿ ಏನು ಹೇಳಿರುವುದಿಲ್ಲ. ಸೀಮೆಎಣ್ಣೆ ಸಬ್ಸಿಡಿಯನ್ನು ಮೀನುಗಾರಿಕೆಗೆ ಒದಗಿಸಿ ಎಂದು ಹೇಳಿದ್ದಾರೆ, ಅದರ ಬಗ್ಗೆ ಯಾರೂ ಮಾತನಾಡಿಲ್ಲ. ಕೋಲ್ಡ್‌ಸ್ಟೋರೇಜ್ ಚೈನ್ ಮೀನುಗಾರರಿಗೆ ಮಾಡಿ ಎಂದು ಹೇಳಿದ್ದಾರೆ, ಅದರ ಬಗ್ಗೆ ಯಾರೂ ಚರ್ಚೆಯನ್ನು ಮಾಡಿಲ್ಲ, ನೀರು ಸಂಗ್ರಹಣೆ ಬಗ್ಗೆ ಹೇಳಿದ್ದಾರೆ, ಬೇಕಾದರೆ ಆ ಪುಸ್ತಕದ ಪೇಜ್ ನಂಬರ್ ಹೇಳುತ್ತೇನೆ. ಉಡುಪಿ ಜಿಲ್ಲೆಯಲ್ಲಿ ಈಗ ಒಂದೇ ಒಂದು ಕೈಗಾರಿಗೆ ಇಲ್ಲ, ಇದ್ದದ್ದು

ಒಂದು ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಇಂದು ಅದು ಕೂಡ ನಿಂತು ಹೋಗಿದೆ. ಅಲ್ಲಿ ರೈತರಿಗೂ ದುಡ್ಡು ಕೊಟ್ಟಿಲ್ಲ, ಕಾರ್ಮಿಕರಿಗೂ ದುಡ್ಡು ಕೊಟ್ಟಿಲ್ಲ, ಸಹಕಾರ ಸಂಸ್ಥೆಗಳವರು ಆ ಸಕ್ಕರೆ ಕಾರ್ಖಾನೆಯನ್ನು ನಡೆಸಲಿಕ್ಕೆ ಏನು ಸಹಾಯವನ್ನು ಮಾಡಿದ್ದರು, ಅವರಿಗೆ ದುಡ್ಡನ್ನು ಕೊಡಲಿಲ್ಲ, ಅದಕ್ಕೆ ಏನೊಂದು ಮಾತನಾಡಿಲ್ಲ. ಕೇವಲ ಒಂದು ಭಾಗಕ್ಕೆ ಮಾತ್ರ, ನಾನು ಮತ್ತೆ ಪುನಃ ಉಚ್ಛಾರವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಉತ್ತರ ಕರ್ನಾಟಕಕ್ಕೆ ಹೆಚ್ಚು ಅನುದಾನವನ್ನು ಕೊಡಬೇಡಿ ಎಂದು ನಾನು ಎಲ್ಲೂ ಹೇಳುವುದಿಲ್ಲ, ಆದರೆ ನಮ್ಮ ಭಾಗಕ್ಕೆ ಎಲ್ಲ ಭಾಗಕ್ಕೆ ಹಣವನ್ನು ಕೊಟ್ಟಂತೆ ಕೊಟ್ಟು, ಉತ್ತರ ಕರ್ನಾಟಕಕ್ಕೆ ಸ್ವಲ್ಪ ಜಾಸ್ತಿ ಹಣವನ್ನು ಕೊಡಿ. ಇದು ಏನಾಗುತ್ತದೆ, ಇನ್ನೊಂದು ದಿವಸ ಬರಬಹುದು. ಮೇಲ್ಮನೆಯಲ್ಲಿ ಮಾನ್ಯ ಡಾ:ವಿ.ಎಸ್. ಆಚಾರ್ಯರವರು ಒಂದು ಮಾತನ್ನು ಹೇಳಿದ್ದಾರೆ. ಪ್ರತ್ಯೇಕ ರಾಜ್ಯವನ್ನು ಕೇಳಬೇಕಾದ ಪರಿಸ್ಥಿತಿ ನಿರ್ಮಾಣವಾಗಬಹುದು, ಪ್ರತ್ಯೇಕತೆಯ ಕೂಗು, ನಾನು ಅದರ ಬಗ್ಗೆ ಹೋಗುವುದಿಲ್ಲ, ನಾನು ಏನು ಹೇಳುತ್ತೇನೆಂದರೆ, ನಮಗೆ ಹೆಚ್ಚು ಅನುದಾನವನ್ನು ಕೊಡಿ ಎಂದು ಜನತೆ ಹೋರಾಟ ಮಾಡುವಂಥ ದಿನಗಳು ಬರಬಹುದೆಂದು ಹೇಳುತ್ತೇನೆ. ಏಕೆಂದರೆ, ನಮ್ಮ ಭಾಗ ಸಹ ಉತ್ತರ ಕರ್ನಾಟಕದ ಪರಿಸ್ಥಿತಿ ಮುಟ್ಟಿದಾಗ ಇದ್ದಂಥ ಪರಿಸ್ಥಿತಿ ನಾವು ಶಾಸಕರಾಗಿದ್ದಾಗ ಹಾಳಾಯಿತು ಎಂದು ಜನ ನಮ್ಮನ್ನು ದೂಷಣೆ ಮಾಡುತ್ತಾರೆ, ಅದಕ್ಕೋಸ್ಕರ ಸರಿಯಾದ ವ್ಯವಸ್ಥೆಯನ್ನು ಮಾಡಬೇಕು. ನಮಗೆ ಸರಿಯಾದ ಅನುದಾನವನ್ನು ಕೊಡಬೇಕೆಂದು ಹೇಳುತ್ತೇನೆ. ಮೇಜರ್ ಇರಿಗೇಶನ್‌ಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ, ಅದರ ೧:೩ ಭಾಗ ಗ್ರ್ಯಾಂಟನ್ನು ಮೈನರ್ ಇರಿಗೇಶನ್‌ಗೆ ಕೊಡಬೇಕಾಗುತ್ತದೆ. ಅದನ್ನು ಕೊಡುತ್ತಿಲ್ಲ, ಅದಕ್ಕೆ ನಿಗಮಗಳನ್ನು ಮಾಡಿ ಅದರಿಂದ ಸಾಲವನ್ನು ಪಡೆದು, ಬಾಂಡ್ ಮುಖಾಂತರ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಹಾಗಾದರೆ ಸಣ್ಣ ನೀರಾವರಿಗೆ ಒಂದು ನಿಗಮವನ್ನು ಮಾಡಿ, ಇದಕ್ಕೆ ಬಾಂಡ್ ಮೂಲಕ ಹಣವನ್ನು ಸಂಗ್ರಹಣೆ ಮಾಡುವ ವ್ಯವಸ್ಥೆಯನ್ನು ಸಣ್ಣ ನೀರಾವರಿ ಇಲಾಖೆಗೆ ಕೊಡಿ. ಆಗ ಅದಕ್ಕೆ ಹೆಚ್ಚು ಅನುದಾನ ಸಿಗಲಿಕ್ಕೆ ಸಾಧ್ಯವಾಗುತ್ತದೆ. ನಬಾರ್ಡ್ ಮತ್ತು ವಿಶ್ವಬ್ಯಾಂಕ್ ಯೋಜನೆಗಳಿಗೆ ಏನು ಹಣವನ್ನು ತರುತ್ತೇವೆ, ಅದರಲ್ಲಿ ಸಣ್ಣ ನೀರಾವರಿ ಯೋಜನೆಗಳಿಗೆ ಜಾಸ್ತಿ ಹಣವನ್ನು ಕೊಡಿ. ಅದನ್ನು ಮಾಡಿದಾಗ ಮಾತ್ರ, ಹೂಳೆತ್ತುವ ಕೆಲಸವಾಗುತ್ತದೆ. ಕುಡಿಯುವ ನೀರಿನ ವ್ಯವಸ್ಥೆ ಆಗುತ್ತದೆ. ನಾನು ಎರಡು ಮಾತನ್ನು ಹೇಳುತ್ತೇನೆ. ಸಣ್ಣ ನೀರಾವರಿಗೆ ಒಂದು ನಿಗಮ, ಇನ್ನೊಂದು, ಗ್ರಾಮೀಣ ಪ್ರದೇಶಕ್ಕೆ ಕುಡಿಯುವ ನೀರಿಗೆ ಒಂದು ನಿಗಮ. ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಸಿವಿರೇಜ್ ಬೋರ್ಡ್ ಹೇಗಿದೆ, ಅದೇ ರೀತಿ ಗ್ರಾಮೀಣ ರೂರಲ್ ವಾಟರ್ ಸಪ್ಲೈ ಸಿವಿರೇಜ್ ಬೋರ್ಡ್

ಮಾಡಿದಾಗ ಮಾತ್ರ ಈ ಎಲ್ಲ ಸಮಸ್ಯೆಗಳನ್ನು ಶಾಶ್ವತವಾಗಿ ಪರಿಹಾರವನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಗ್ರಾಮೀಣ ಅಭಿವೃದ್ಧಿಯಲ್ಲಿ ಈಗ ಕಳೆದ ಒಂದು ವರ್ಷದಿಂದ ಆಶ್ರಯ ಮನೆಗಳನ್ನು ಕೊಟ್ಟಿಲ್ಲ, ಅದಕ್ಕೆ ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಶನ್‌ನಿಂದ ಹಣವನ್ನು ಕೊಡುತ್ತಾರೆ. ಆದರೆ ಬಡ್ಡಿ ಬಹಳ ಜಾಸ್ತಿಯಾಯಿತು ಎಂದು ಕಳೆದ ಭಾರಿ ಈ ಸದನದಲ್ಲಿ ಚರ್ಚೆಯನ್ನು ಮಾಡಿದ್ದೇವೆ. ಬಡ್ಡಿಯನ್ನು ಕಡಿಮೆ ಮಾಡುವ ವ್ಯವಸ್ಥೆಯಾಗಬೇಕು ಅಥವಾ ಬಹಳ ಹಿಂದೆ ತೆಗೆದುಕೊಂಡವರಿಗೆ, ಕೃಷಿಕರಿಗೆ ಯಾವ ರೀತಿಯಲ್ಲಿ ಒಂದು ಸಲ ಬಡ್ಡಿಯನ್ನು ಮನ್ನಾ ಮಾಡಿ ಹಣವನ್ನು ಕಟ್ಟುವುದಕ್ಕೆ ಅವರಿಗೆ ಸಹಾಯವನ್ನು ಮಾಡುತ್ತೇವೆ, ಅವರಿಗೆ ಇಲ್ಲಿ ಒಂದು ಅವಕಾಶವನ್ನು ಮಾಡಿಕೊಡಬೇಕು. ಇವರೆಲ್ಲ ಕೃಷಿ ಕೂಲಿ ಕಾರ್ಮಿಕರು, ಅವರಿಗೆ ಒಂದು ಸಹಾಯವನ್ನು ಮಾಡುವ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ. ಪಿಡಬ್ಲ್ಯೂಡಿ ಇಲಾಖೆಗೆ ಅನುದಾನ ಇದೆ. ಆದರೆ ಗ್ರಾಮೀಣ ರಸ್ತೆಗಳ ದುರಸ್ತಿಗೆ ಇದಕ್ಕೆ ನಮ್ಮ ಸ್ನೇಹಿತರು ಅಡ್ಜರ್ನ್‌ಮೆಂಟ್ ಮೋಷನ್ ತರುವುದಕ್ಕೆ ಅವಕಾಶವಿಲ್ಲದಿದ್ದರೂ ಕೂಡ ಮಾನ್ಯ ಅಧ್ಯಕ್ಷರೆ, ತಾವು ಅದಕ್ಕೆ ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಗ್ರಾಮೀಣ ರಸ್ತೆಗಳು ಬಹಳ ಹದಗೆಟ್ಟಿವೆ, ಹಾಳಾಗಿರುತ್ತವೆ. ಅದಕ್ಕೆ ಪ್ರತ್ಯೇಕವಾದ ಅನುದಾನವನ್ನು ಬರೀ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ, ಕರಾವಳಿ ಎನ್ನುವ ಬೇಧಭಾವವನ್ನು ಬಿಟ್ಟು ಎಷ್ಟು ದೂರದ ಕಿ.ಮಿ. ರಸ್ತೆ ಇದೆ, ಆ ಭಾಗದಲ್ಲಿ ಕ್ಲೈಮ್ಯಾಟಿಕ್ ಕಂಡಿಷನ್ ಹೇಗಿದೆ, ಎಷ್ಟು ಜನಸಂಖ್ಯೆ ಇದೆ, ಈ ಆಧಾರದ ಮೇಲೆ ಹಣವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಮಲೆನಾಡು, ಹೈದ್ರಾಬಾದ್-ಕರ್ನಾಟಕ ಅದರಲ್ಲಿಯೂ ಅವರಿಗೆ ಜಾಸ್ತಿ. ನಾನು ಏನು ಹೇಳುತ್ತೇನೆಂದರೆ, ಇವೆಲ್ಲವುಗಳನ್ನು ತೆಗೆದು ಶಾಸಕರಿಗೆ ಹೆಚ್ಚು ಅನುದಾನವನ್ನು ಕೊಡಿ, ಶಾಸಕರುಗಳು ಇದನ್ನು ಮಾಡಲಿ. ಈ ಹಳೆಯ ಸಾಲವನ್ನು ಕೊಡಲಿಕ್ಕೆ ಮಾತ್ರ ನೀವು ಬೋರ್ಡ್‌ಗಳಿಗೆ ಹಣವನ್ನು ಕೊಡುವುದಾದರೆ, ದಯವಿಟ್ಟು ಆ ಬೋರ್ಡಿನ ಮೇನ್‌ಟೇನೆನ್ಸ್ ಏನಿದೆ, ಅದನ್ನು ಕ್ಲೋಸ್ ಮಾಡಿ. ಏಕೆಂದರೆ, ಹಿಂದೆ ಅದರ ಬಗ್ಗೆ ಕಮಿಟಿಯವರು ರೆಕ್ಮೆಂಡ್ ಮಾಡಿದ್ದಾರೆ. ಬೋರ್ಡ್ ಅಂತ ಕಾರ್ಪೋರೇಷನ್‌ನನ್ನು ಮುಚ್ಚಲಿಕ್ಕೆ ಅದನ್ನು ಮಾಡಬೇಕೆಂದು ಹೇಳುತ್ತೇನೆ. ಕರಾವಳಿ ಜಿಲ್ಲೆಗಳಿಗೆ, ಉಪ್ಪು ನೀರಿನ ಅಣೆಕಟ್ಟುಗಳನ್ನು ಮಾಡಲಿಕ್ಕೆ ೧೫೦-೨೦೦ ಕೋಟಿ ರೂ.ಗಳನ್ನು ಕೊಟ್ಟರೆ ಇಡಿ, ಕಾಸರಗೋಡಿನಿಂದ ಹಿಡಿದು ಗೋವಾದ ಬಾರ್ಡರ್‌ವರೆಗೆ ಎಲ್ಲಾ ಕಡೆ ಉಪ್ಪುನೀರಿನ ಅಣೆಕಟ್ಟುಗಳನ್ನು ಹಾಕಿ ನಿಮ್ಮ ಮೇಜರ್ ಇರಿಗೇಶನ್ ಯಾವುದು ಬೇಕಾಗಿಲ್ಲ, ಶಾಶ್ವತವಾದ ಪರಿಹಾರವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ನಾನು ಹೇಳಿದ ಹಾಗೆ, ನಮ್ಮ ಜಿಲ್ಲೆಯದ್ದು ಮನಿ ಆರ್ಡರ್ ಇಕಾನಮಿ, ಅಲ್ಲಿ ಉತ್ಪಾದನೆ ಇಲ್ಲ, ಬಾಂಬೆ ಗಲ್ಫ್‌ನಲ್ಲಿ ಸಂಪಾದನೆ

ಮಾಡಿರುವ ಹಣವನ್ನು ಕಳುಹಿಸಿದಾಗ ನಾವು ಆರಾಮದಲ್ಲಿ ಜೀವನವನ್ನು ನಡೆಸುತ್ತಿದ್ದೇವೆ. ಅಲ್ಲಿ ಇಂಡಸ್ಟ್ರಿ ಮಾಡುವುದಕ್ಕೆ ನಮಗೆ ಆಗುತ್ತಿಲ್ಲ. ಮಾನ್ಯ ಕೈಗಾರಿಕೆ ಸಚಿವರು ಇಲ್ಲಿಯೇ ಇದ್ದೀರಿ. ದಯವಿಟ್ಟು ನಾನು ತಮ್ಮಲ್ಲಿ ಒಂದು ಸಲ ಕೇಳಿಕೊಂಡಿದ್ದೇನೆ. ಅಲ್ಲಿಯ ವಾತಾವರಣ ಹಾಳಾಗಿರುವುದರಿಂದ ಅಲ್ಲಿ ಸ್ವಲ್ಪ ಸಮಸ್ಯೆ ಇದೆ. ಯಾವರೀತಿಯಲ್ಲಿ ಇಕೋ ಫ್ರೆಂಡ್ಲಿ ಇಂಡಸ್ಟ್ರಿ ಅಲ್ಲಿ ತರಲಿಕ್ಕೆ, ಅಲ್ಲಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಆಗುತ್ತದೆ. ಕೊಂಕಣ ರೈಲ್ವೆ ಇದೆ, ಅದಕ್ಕೆ ಸ್ವಲ್ಪ ಇಂಡಸ್ಟ್ರಿಸನ್ನು ಅಲ್ಲಿ ಮಾಡಿದರೆ ಅನುಕೂಲವಾಗುತ್ತದೆ. ಮಾನ್ಯ ದೇಶಪಾಂಡೆಯವರು ಇಲ್ಲೇ ಇರುವುದರಿಂದ ಅವರಿಗೆ ನಾನು ಇನ್ನೊಂದು ಪ್ರಶ್ನೆಯನ್ನು ಕೇಳುತ್ತೇನೆ. ಅವರ ಕಾಲದಲ್ಲಿ ಒಂದು ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್ ಎಂದು ಮಾಡಿದ್ದರು, ನಂತರ ಕೋಸ್ಟಲ್ ಜೋನ್ ಇನ್‌ವೆಸ್ಟರ್ಸ್ ಮೀಟ್ ಎಂದು ಮಾಡಿದರು. ಆ ಎರಡು ಮೀಟಿಂಗ್ ಆದ ನಂತರ ಎಷ್ಟು ಹಣದ ಹೂಡಿಕೆ ಈ ರಾಜ್ಯಕ್ಕೆ ಬಂದಿದೆ, ಅದು ಬೇಕಾಗುತ್ತದೆ. ಎಷ್ಟು ಎಂಪ್ಲಾಯ್‌ಮೆಂಟ್ ಜನರೇಟಾಗಿದೆ, ಇವೆರಡು ಬೇಕಾಗುತ್ತದೆ. ತಾವು ಬಂದ ಮೇಲೆ ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ಇಷ್ಟು ಕೋಟಿ ರೂ.ಗಳು ಬರಬಹುದು. ಅದು ಮುಂದೆ, ತಾವು ಪ್ರಯತ್ನ ಮಾಡಿದರೆ ಸಾಕು. ಇಲ್ಲಿಯವರೆಗೆ ಎಷ್ಟು ಬಂದಿದೆ ಮತ್ತು ಎಂಪ್ಲಾಯ್‌ಮೆಂಟ್ ಎಷ್ಟು ಜನರೇಟ್ ಆಗಬಹುದು. ಇದರ ಬಗ್ಗೆ ಮಾಹಿತಿಯನ್ನು ಕೊಡಬೇಕು. ಏಕೆಂದರೆ ಕೈಗಾರಿಕೆ ಇಲಾಖೆ ಎಂದು ಹೇಳಿದರೆ ಹ್ಯೂಮನ್ ರಿಸೋರ್ಸ್‌ನ್ನು ಯೂಟಿಲೈಸ್ ಮಾಡಲಿಕ್ಕೆ, That is the only major department ಎಂದು ನನ್ನ ಅನಿಸಿಕೆ. ದಯವಿಟ್ಟು ಅದನ್ನು ಮಾಡಬೇಕು. ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಬಗ್ಗೆ ಇವತ್ತೊ ನಿನ್ನೆ ಪತ್ರಿಕೆಯಲ್ಲಿ ಬಂದಿದೆ, ೪೦೦ ಎಕರೆ ಭೂಮಿಯನ್ನು ಡೀ-ನೋಟಿಫೈ ಹಿಂದೆ ಮಾಡಿಸಿ ಈಗ ಪುನಃ ಅಕ್ವಾಯರ್ ಮಾಡುವುದಕ್ಕೆ ಹೊರಟಿದ್ದೀರಿ. ಇವತ್ತು ನಾನು ಯಾವುದೋ ಪತ್ರಿಕೆಯಲ್ಲಿ ನೋಡಿದ್ದೇನೆ, ನಾನು ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಈಗ ಮೇನ್‌ರೋಡ್‌ನಿಂದ ಅಪ್ರೋಚನ್ನು ಕೂಡ ತೆಗೆದು ಬಿಟ್ಟಿದ್ದಾರೆ. ಸುತ್ತು ಹಾಕಿಕೊಂಡು ಬರುವಂಥ ಪರಿಸ್ಥಿತಿ ಬಂದಿದೆ ಎನ್ನುವಂಥ ಒಂದು ಮಾಹಿತಿ ಅದರ ಕ್ಲಿಪಿಂಗನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಈಗ ಹೇಳಿದ್ದು ಬೆಂಗಳೂರ ಬಗ್ಗೆ ಅದರ ಬಗ್ಗೆ ತಾವು ಮಾಹಿತಿಯನ್ನು ಕೊಡಬೇಕೆಂದು ಹೇಳುತ್ತೇನೆ. ನಮ್ಮ ಮನಿ ಆರ್ಡರ್ ಇಕಾನಮಿಯನ್ನು ತಾವು ಭದ್ರ ಮಾಡುವುದಕ್ಕೆ ಕೈಗಾರಿಕೆ ಇಲಾಖೆಯಿಂದ ಸಹಾಯವನ್ನು ಮಾಡಬೇಕೆಂದು ಹೇಳುತ್ತೇನೆ. ಇವತ್ತು ಮಾನ್ಯ ದೇಶಪಾಂಡೆಯವರು ತಾವು ಮೇಲ್ಮನೆಯಲ್ಲಿ ಹೇಳಿದ್ದೀರಿ, ಬ್ರಹ್ಮಾವರ್ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ತಾವು ಇಲ್ಲಿ ನನಗೆ ಕಳೆದ ಭಾರಿ ಒಂದು ಉತ್ತರವನ್ನು ಕೊಟ್ಟಿದ್ದೀರಿ. ಪತ್ರಿಕೆಯಲ್ಲಿ ಬಂದದ್ದನ್ನು ನಾನು ಹೇಳಿದ್ದೇನೆ. ಆಮೇಲೆ ತಾವು ಇನ್ನೊಂದನ್ನು ಹೇಳಿದಿರಿ, ರೈತರಿಗೆ,

ಕಾರ್ಮಿಕರಿಗೆ, ಸಹಕಾರಿ ಸಂಸ್ಥೆಗಳಿಗೆ ಸಾಲವನ್ನು ಮರುಪಾವತಿ ಮಾಡಲಿಕ್ಕೆ ಜಾಗವನ್ನು ಮಾರಲಿಕ್ಕೆ ಪರ್ಮಿಶನ್ ಕೊಟ್ಟಿದ್ದೇನೆ, ಅದರ ಮುಂಚೆ ಮಾಡಲಿಕ್ಕೆ ಅಪೆಕ್ಸ್ ಹಾಗೂ ಡಿ.ಸಿ.ಸಿ. ಬ್ಯಾಂಕ್ ಮೂಲಕ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೀರಿ. ದಯವಿಟ್ಟು ಅದನ್ನಾದರೂ ಮಾಡಿ.

ಶ್ರೀ ಆರ್.ವಿ.ದೇಶಪಾಂಡೆ (ಮಾನ್ಯ ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ ತಾವು ಇದರ ಬಗ್ಗೆ ಸದನದಲ್ಲಿ ಒಂದೆರಡು ಸಲ ರೇಸ್ ಮಾಡಿದ್ದೀರಿ, am I right? ನಾನು ಇನ್‌ಸ್ಟ್ರಕ್ಷನನ್ನು ಬ್ರಹ್ಮಾವರ್ ಷುಗರ್ ಫ್ಯಾಕ್ಟರಿಗೆ ಕೊಟ್ಟಿದ್ದೇನೆ. ಡಿ.ಸಿ.ಸಿ. ಬ್ಯಾಂಕ್ ಛೇರ್ಮನ್‌ರಿಗೂ ಮಾತನಾಡಿದ್ದೇನೆ. ಅವರಿಗೆ ನಾನು ಏನು ಹೇಳಿದೆ, ನಿಮಗೆ ಜಾಗ ಕೊಡಬೇಕು, ಅದಕ್ಕೆ ನಾನು ಪರ್ಮಿಶನ್ ಕೊಟ್ಟಿದ್ದೇನೆ. ಪರ್ಮಿಶನ್ ಕೊಟ್ಟು ಒಂದೂವರೆ ತಿಂಗಳಾಯಿತು. ನೀವು ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ತೆಗೆದುಕೊಳ್ಳಿ, ಕಮರ್ಷಿಯಲ್ ಬ್ಯಾಂಕಿನಿಂದ ತೆಗೆದುಕೊಳ್ಳಿ, ಮುಗಿಸಿ ಎಂದು ಹೇಳಿದ್ದೇನೆ, ನಾನು ತಮಗೆ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ತಾವು ಅಲ್ಲಿಗೆ ಹೋದಾಗ, you also try to talk to them. ನಾವು ಹೇಳಿದ್ದೇವೆ, ನಾವೇನು ಕೊಟ್ಟಿಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಾಡುತ್ತೇವೆ, ಆದರೆ ಅದನ್ನು ಮಾಡುವಾಗ ಜಾಸ್ತಿ ಕಳೆಯುತ್ತದೆ. ಈಗ ಡಿ.ಸಿ.ಸಿ. ಬ್ಯಾಂಕ್ ಎಂದು.

ಶ್ರೀ ಆರ್.ವಿ.ದೇಶಪಾಂಡೆ : ಇದರ ಬಗ್ಗೆ ಒಂದು ಆರ್ಡರ್ ಆಗಿರುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ತಾವು ಹೇಳಿದರೆ ಮಾತ್ರ ಮಾತನ್ನು ಕೇಳುತ್ತಾರೆ, ಹೊರತು ನಮ್ಮ ಮಾತನ್ನು ಕೇಳುವುದಿಲ್ಲ. ದಯವಿಟ್ಟು ಹಣವನ್ನು ಕೊಡಿಸಿ, ರೈತರ ಮತ್ತು ಕಾರ್ಮಿಕರ ಸಮಸ್ಯೆಯನ್ನು ಪರಿಹಾರ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ನಿಮ್ಮ ಫ್ಯಾಕ್ಟರಿಗಳೆ ಮುಚ್ಚಿಹೋಗುತ್ತದೆ. ಎಲ್ಲಾ ಫ್ಯಾಕ್ಟರಿಗಳಿಗೆ ಯಾರು ಹಣವನ್ನು ಕೊಟ್ಟಿದ್ದಾರೆ, ಅದಕ್ಕಾಗಿ ಅವುಗಳನ್ನು ಮುಚ್ಚು ಎಂಥ ಪರಿಸ್ಥಿತಿ ಬರುತ್ತದೆ. ದಯವಿಟ್ಟು ಸಹಾಯವನ್ನು ಮಾಡಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಬಹಳ ಹಿಂದುಳಿದ ಒಂದು ಜನಾಂಗವಿದೆ. ಅದು ಕುಡುಬಿ ಜನಾಂಗ, ಅದು ಟ್ರೈಬಲ್‌ಗೆ ಸೇರಬೇಕಾಗಿತ್ತು. ಹಿಂದೆ ಮದ್ರಾಸ್ ಪ್ರೆಸಿಡೆನ್ಸಿಯಲ್ ಇದ್ದಾಗ ಅದನ್ನು ಎಸ್.ಸಿ.ಗೆ ಸೇರಿಸಿದ್ದರು. ನಂತರ ರೀ-ಆರ್ಗನೈಜೇಶನ್ ಸ್ಟೇಟ್ ಆದ ನಂತರ ಅದನ್ನು ಅತಿ ಹಿಂದುಳಿದ ವರ್ಗ ಎಂದು ಮಾಡಿದ್ದಾರೆ. ೨೮ನೇ ತಾರೀಖು ಇಂದು ಸಭೆಯನ್ನು ಮಾಡಿ, ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರನ್ನು ಆ ಸಭೆಗೆ ಕರೆದಿದ್ದರು, ಅವರು ಬರಲಿಲ್ಲ, ಅದಕ್ಕೆ ನಾವೆಲ್ಲಾ ಹೋಗಿದ್ದೆವು. ಅವರದ್ದು ಒಂದೇ ಬೇಡಿಕೆ, ನಾನು ಅದರ ಬಗ್ಗೆ ಸಿ.ಡಿ.ಯನ್ನು ಮಾಡಿಸಿ,

ಮಾಜಿ ಸಮಾಜ ಕಲ್ಯಾಣ ಸಚಿವರಾದ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಕೊಟ್ಟಿದ್ದೆ. ಈಗ ಆಗಬೇಕಾಗಿರುವುದು ಇದೊಂದೆ ಕೆಲಸ, ಅಲ್ಲಿ ಒಂದು ಸಮಿತಿ ಇದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಇದೊಂದು ಸಮಿತಿ. ಇದನ್ನು ನೋಡಿ, ನಾನು ಅವರನ್ನು ಚನ್ನಪ್ಪರೆಡ್ಡಿ ಆಯೋಗದ ಮುಂದೆ ಕರೆದುಕೊಂಡು ಹೋಗಿದ್ದೆ, ಹಿಂದುಳಿದ ವರ್ಗದ ಆಯೋಗದ ಮುಂದೆ ಕರೆದುಕೊಂಡು ಹೋಗಿದ್ದೆ. ಆ ಸಮಿತಿಯವರು ರೆಕ್ಮೆಂಡ್ ಮಾಡಬೇಕು, ನಂತರ ಅದು ಕ್ಯಾಬಿನೆಟ್‌ಗೆ ಬಂದು ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ಇದರ ಬಗ್ಗೆ ೧೦ ವರ್ಷವಾಯಿತು ಏನು ಕ್ರಮವನ್ನು ತೆಗೆದುಕೊಂಡಿಲ್ಲ, ೧೦ ವರ್ಷಗಳಿಂದ ಅವರ ಬೇಡಿಕೆ, ಬೇಡಿಕೆಯಾಗಿಯೇ ಉಳಿದಿದೆ, ಅದನ್ನು ಬಿಟ್ಟರೆ ಅದು ಮುಂದೆ ಹೋಗಲೇ ಇಲ್ಲ.

ಇದಕ್ಕೆ ಕಾರಣವೆಂದರೆ ಒಂದು ಸಮಿತಿಯಾಗಲಿಲ್ಲ, ಹಿಂದಿನ ಸಮಿತಿಯಲ್ಲಿ ಇವತ್ತಿನ ಶ್ರೀ ಅಂಜನಮೂರ್ತಿಯವರು ಈಗ ಸಚಿವರಾಗಿದ್ದಾರೆ. ಅದಕ್ಕೆ ಅವರೇ ಅಧ್ಯಕ್ಷರಾಗಿದ್ದರು. ಅದು ಅಲ್ಲಿಯೇ ಉಳಿದುಹೋಯಿತು. ಏಕೆಂದರೆ ಬ್ರೈಕ್ ಆಗಿ ಚುನಾವಣೆ ಬಂದು ಮುಂದೆ ಹೋಯಿತು, ದಯವಿಟ್ಟು ಆದಷ್ಟು ಬೇಗ ಒಂದು ಸಮಿತಿಯನ್ನು ಮಾಡಿ ಅವರ ಒಂದು ಜನಾಂಗವನ್ನು, ಇದರ ಬಗ್ಗೆ ತಾವು ನೋಡಿರಬೇಕು. ಅವರು ಇನ್ನು ಕಾಡುಪ್ರದೇಶಗಳಲ್ಲಿ ಜೀವನ ಮಾಡುತ್ತಿದ್ದಾರೆ. ಅವರನ್ನು ಎಸ್‌ಟಿ ಜನಾಂಗಕ್ಕೆ ಸೇರಿಸುವಂತಹ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಣ್ಣ ನೀರಾವರಿಗೆ ಹೆಚ್ಚು ಅನುದಾನವನ್ನು ತೆಗೆದುಕೊಂಡು ಇದಕ್ಕೆ ಸಹಾಯವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೇ ಮಾನ್ಯ ಸಿಂಧ್ಯಾರವರೆ ಪಬ್ಲಿಕ್ ಸೆಕ್ಟರ ಅಂಡರ್ ಬೇಕಿಂಗ್ ಇದರ ಬಗ್ಗೆ ನಿನ್ನೆ ದಿನ ಬಹಳ ಚರ್ಚೆಯಾಯಿತು. ಪಬ್ಲಿಕ್ ಸೆಕ್ಟರ್ ಅಂಡರ್‌ಬೇಕಿಂಗ್ ಮ್ಯಾನೇಜ್‌ಮೆಂಟ್ ಅದು ಪ್ರೈವೇಟ್ ಸೆಕ್ಟರ್ ತರಹ ಅವರೇ ಸ್ವಂತ ಮ್ಯಾನೇಜ್‌ಮೆಂಟ್ ಆಗಿ ಕೆಲವರು ನಡೆಸಿಕೊಂಡು ಹೋಗುತ್ತಿದ್ದಾರೆ. ಎಲ್ಲಿ ಒಳ್ಳೆಯ ಮ್ಯಾನೇಜಿಂಗ್ ಡೈರೆಕ್ಟರ್ ಇರುತ್ತಾರೋ ಇದರ ಬಗ್ಗೆ ಸಮಿತಿಯಲ್ಲಿ ಸಹ ಚರ್ಚೆಯನ್ನು ಮಾಡುತ್ತಿರುತ್ತೇವೆ. ಅವರಿಗೆ ೬ ತಿಂಗಳ ಕಾಲ ಕಲಿಯುವುದಕ್ಕೆ ಬೇಕಾಗುತ್ತದೆ, ನಂತರ ಅವರು ಕೆಲಸ ಮಾಡುವುದಕ್ಕೆ ಅವರಿಗೆ ೬ ತಿಂಗಳಾದ ನಂತರ ವರ್ಗಾವಣೆ ಮಾಡುವುದನ್ನು ನಿಲ್ಲಿಸಬೇಕಾಗುತ್ತದೆ. ಕೆಲವು ಪಬ್ಲಿಕ್ ಸೆಕ್ಟರ್ ಅಂಡರ್‌ಬೇಕಿಂಗ್ ಏಕೆ, ಅದರ ಬಗ್ಗೆ ಚರ್ಚೆ ಮಾಡಿದೆವು. ತಾವು ಅದರ ಬಗ್ಗೆ ಆಸಕ್ತಿಯನ್ನು ವಹಿಸಿ ರಿವೈಸರ್ ಮಾಡುವುದು ಹೇಗೆ ಎಂದು? ನೇರ ಮಾಡುವುದು ಹೇಗೆ ಅಂತ? Selling profit making public sector undertakings. Buying loss making private industries. ಕೆಲವು ಪರಿಸ್ಥಿತಿ ಇದೆ ಅದು ಬರಬಾರದು. ಇದಕ್ಕೆ ಹೆಚ್ಚು

ಆಸಕ್ತಿ ವಹಿಸಬೇಕೆಂದು ಹೇಳುತ್ತೇನೆ. ಬ್ಯಾಕ್‌ವರ್ಡ್ ಬಗ್ಗೆ ನಂಜುಂಡಪ್ಪ ವರದಿಯಲ್ಲಿ ಹೇಳಿದ್ದಾರೆ. ಮತ್ತೇ ಅದಿರಿನ ಬಗ್ಗೆ ಚರ್ಚೆಯಾಯಿತು. ಅದರಲ್ಲಿ ರಾಯಲ್ಟಿ ಬರುವುದು ಬಹಳ ಕಡಿಮೆ, ರಾಜ್ಯದ ಆದಾಯ ಜಾಸ್ತಿಯಾಗುತ್ತದೆ. ಮಾನ್ಯ ಉಪಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಬೋರ್ ಹಾಕುತ್ತೇವೆಂದು ಹೇಳಿದ್ದಾರೆ, ಅದನ್ನು ಸ್ಟಾರ್ಟಿಂಗ್ ಪಾಯಿಂಟ್‌ನಲ್ಲಿ ಒಂದು ಬೋರ್ ಕಲೆಕ್ಷನ್ ಸೆಂಟರನ್ನು ಮಾಡಿ ಅವರಿಗೆ ರಾಯಲ್ಟಿಯನ್ನು ಜಾಸ್ತಿ ಮಾಡಬೇಕು. ರಾಯಲ್ಟಿಯನ್ನು ಜಾಸ್ತಿ ಮಾಡಬೇಕಾಗುತ್ತದೆ, ಮೈನ್ಸ್ ಬಳ್ಳಾರಿ–ಹೊಸಪೇಟೆ ಸೈಡ್‌ನಲ್ಲಿ ಜಾಸ್ತಿ ಇದೆ. ಪ್ರೊಬೇಬಲಿ ಅದು ಏನಾಗಿದೆ, ugly exhibition of wealth has made many people look towards Hospet-Bellary. ಅದನ್ನು ಸ್ವಲ್ಪ ಕಂಟ್ರೋಲ್‌ಗೆ ತರುವಂತಹ ಪ್ರಯತ್ನವನ್ನು ಮಾಡಬೇಕು. ಅದಿರು ಲಾರಿಗಳಿಗೆ ನೀವು ಏನು ಬೋರ್ ಕಲೆಕ್ಟನ್ನು ಮಾಡುತ್ತೀರಿ, ದಯವಿಟ್ಟು ಅಲ್ಲಿಯೇ ರೇಟನ್ನು ಮಾಡಬೇಕು, ಅಲ್ಲಿಯೇ ಕಲೆಕ್ಷನ್ ಮಾಡಿ ನಮ್ಮ ಭಾಗದ ರಸ್ತೆಗಳಲ್ಲಿ ಏನು ಹೋಗುತ್ತದೆ ಅದನ್ನು ಅಪ್‌ಗ್ರೇಡ್ ಮಾಡುವುದು, ರಿಪೇರಿ ಮಾಡುವುದು ಏಕೆಂದರೆ ಪ್ರತಿ ದಿನ ಲಾರಿ ಅಡ್ಡ ಹಾಕುವುದು ನಿಲ್ಲುತ್ತಿದೆ, ಅವರೇ ಒಂದು ವೇಬ್ರಿಡ್ಜ್ ಹಾಕಿದ್ದಾರೆ, ಅದು ಆಗುತ್ತಿಲ್ಲ, ಅವರ ಹತ್ತಿರ ಅದನ್ನು ಕಂಟ್ರೋಲ್ ಮಾಡುವುದಕ್ಕಾಗುತ್ತಿಲ್ಲ, ಅದರ ಬಗ್ಗೆ ಸರಿಯಾದ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಕೇಳುತ್ತೇನೆ. ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಅನುದಾನವನ್ನು ಇಷ್ಟು ವರ್ಷಗಳವರೆಗೆ ಕೊಟ್ಟಿದ್ದಾರೆ ಎಂಬುದರ ಬಗ್ಗೆ ಮಾಹಿತಿ ಬೇಕಾಗುತ್ತದೆ. ಒಂದೊಂದು ಜಿಲ್ಲೆಗೆ ಒಂದೊಂದು ರೀತಿಯ ಅನುದಾನವನ್ನು ಕೊಟ್ಟು ಕೆಲವು ಜಿಲ್ಲೆಗಳಿಗೆ ಕಡಿಮೆ ಅನುದಾನವನ್ನು ಕೊಟ್ಟಿದ್ದರೆ ಈ ಸಾರಿ ಅದನ್ನು ಜಾಸ್ತಿ ಕೊಡಬೇಕು. ಕಳೆದ ೧೦ ವರ್ಷಗಳಿಂದ ಎಲ್ಲಾ ಜಿಲ್ಲೆಗಳಿಗೆ ಒಂದೇ ರೀತಿಯಲ್ಲಿ ಅನುದಾನ ಕೊಟ್ಟು ಅಲ್ಲಿ ಕೆಲಸಗಳು ಆಗದೆ ಇದ್ದರೆ ಬೇರೆ ಜನರಿಗೆ ಶಿಕ್ಷೆಯನ್ನು ಕೊಡುವುದು ಅಲ್ಲ, ಅದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು ಇದ್ದಾರೆ, ಅವರು ಮಾತನಾಡಿದರೆ ಡಿ.ಎಂ.ನಂಜುಂಡಪ್ಪ ವರದಿಯ ಬಗ್ಗೆಯೇ ಹೇಳುತ್ತಾರೆ. ನಾನು ಅದನ್ನು ಒಪ್ಪುತ್ತೇನೆ, ಆದರೆ ಹಿಂದಿನ ೧೦ ವರ್ಷಗಳಲ್ಲಿ ಕೋಟ್ಯಂತರ ಅನುದಾನದ ಬಗ್ಗೆ ಸ್ವಲ್ಪ ಆಲೋಚನೆಯನ್ನು ಮಾಡಬೇಕು. ಒಂದು ವೇಳೆ ಅಲ್ಲಿ ಖರ್ಚಾಗದೆ ಇದ್ದರೆ ಏತಕ್ಕಾಗಿ ಖರ್ಚು ಆಗಲಿಲ್ಲ ಅಲ್ಲಿಯೇ ಸಂಬಂಧಪಟ್ಟವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ. ಅಲ್ಲಿ ಹಣ ಪೋಲಾಗುತ್ತಿದೆ, ಅದನ್ನು ಕಂಟ್ರೋಲ್ ಮಾಡಬೇಕೆಂದು ಹೇಳುತ್ತೇನೆ. ಇನ್ನು ಸಂಪನ್ಮೂಲದ ಬಗ್ಗೆ ಹೇಳುವುದಾದರೆ ಈ ವ್ಯಾಟನ್ನು ಜಾರಿಗೆ ತಂದಾಗ....

ಅಧ್ಯಕ್ಷರು : ಮಾನ್ಯ ಹೆಗ್ಡೆಯವರೆ, ತಾವು ಭಾಷಣವನ್ನು ಪ್ರಾರಂಭಿಸಿ ಈಗಾಗಲೇ

೫೦ ನಿಮಿಷಗಳಾಯಿತು.

ಶ್ರೀ ಕೆ.ಜಯಪ್ರಕಾಶ ಹೆಗ್ಡೆ : ಆಯಿತು. ೧೦ ನಿಮಿಷದಲ್ಲಿ ನನ್ನ ಭಾಷಣ ಮುಗಿಸುತ್ತೇನೆ.

ಅಧ್ಯಕ್ಷರು : ೫ ನಿಮಿಷದಲ್ಲಿ ತಾವು ಮುಗಿಸಬೇಕು.

ಶ್ರೀ ಕೆ.ಜಯಪ್ರಕಾಶ ಹೆಗ್ಡೆ : ಆಯಿತು, ೫ ನಿಮಿಷದಲ್ಲಿ ಮುಗಿಸುತ್ತೇನೆ. ಈಗ ವ್ಯಾಟನ್ನು ಜಾರಿಗೆ ತಂದಿದ್ದಾರೆ. ಇದನ್ನು ೧ನೇ ತಾರೀಖಿನಿಂದ ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಅದು ಜಾರಿಗೆ ಬಂದಮೇಲೆ ದಕ್ಷಿಣ ಭಾರತದ ರಾಜ್ಯಗಳ ಹೆಚ್ಚು ಪರಿಣಾಮ ಆಗುವುದಿಲ್ಲ, ಏಕೆಂದರೆ ಎಲ್ಲಾ ರಾಜ್ಯಗಳು ಅದನ್ನು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಅದು ಎಲ್ಲಾ ರಾಜ್ಯಗಳಲ್ಲಿ ಒಂದೇ ರೀತಿಯಾಗಿ ಬರುತ್ತದೆ. ಆದರೆ ಕೆಲವು ವಿಷಯಗಳಲ್ಲಿ ಇವರು ಕಡಿಮೆ ಟ್ಯಾಕ್ಸನ್ನು ಯಾವುದಕ್ಕೆ ಹಾಕಬೇಕಾಗಿದೆ, ಅದನ್ನು ಹಾಕಿದ್ದಾರೆ, ಅದರ ಬಗ್ಗೆ ಒಂದು ಪಟ್ಟಿಯನ್ನು ಮಾನ್ಯ ಉಪಮುಖ್ಯಮಂತ್ರಿಗಳು ಕೊಟ್ಟರೆ ಅನುಕೂಲವಾಗುತ್ತದೆ. ಅದರ ಬಗ್ಗೆ ನಾವು ಚರ್ಚೆ ಮಾಡುತ್ತೇವೆ, ಇನ್ನು ಆರ್‍ಯಾಕ್ ಬಗ್ಗೆ ಹೇಳುವುದಾದರೆ, ಎಕ್ಸೈಸ್ ಬಗ್ಗೆ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ನಮ್ಮ ವಿತ್ತೀಯ ಬೆಲೆಗಳ ಬಗ್ಗೆ ಚರ್ಚೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತು ಅರ್‍ಯಾಕ್‌ನ್ನು ಮಾಡಲಿಕ್ಕೆ ಇವರು ಡಿಸ್ಟಿಲರಿಗಳಿಗೆ ಬಿಟ್ಟು ಬಿಟ್ಟಿದ್ದಾರೆ. ಅವರಿಗೇ ಗುತ್ತಿಗೆಯನ್ನು ಕೊಟ್ಟಿದ್ದಾರೆ. ಡೊಲಾಫಿನ್ ರೆಗ್ಯುಲೇಟ್ ಮಾಡಿಲ್ಲ, ಸಕ್ಕರೆ ಕಾರ್ಖಾನೆಯಿಂದ ಎಷ್ಟು ರೊಲಾಸಿಸ್ ಬರುತ್ತದೆ, ಅದರ ಬಗ್ಗೆ ಲೆಕ್ಕ ಇಲ್ಲ, ಆದರೆ ಇವರ ಹತ್ತಿರ ಎಷ್ಟು ಸ್ಪಿರಿಟ್ ಹೋಗಿದೆ ಅದಕ್ಕೂ ಕೂಡ ಲೆಕ್ಕ ಇಲ್ಲ, ಅವರೆ ಯಾರು ಗುತ್ತಿಗೆಯನ್ನು ತೆಗೆದುಕೊಂಡಿದ್ದಾರೆ. ಅವರೇ ಸರ್ಕಾರದ ಪರವಾಗಿ ಸ್ಯಾಚೆಟ್‌ನ್ನು ಮಾಡುವುದು, ಡೂಪ್ಲಿಕೇಟ್ ಸ್ಯಾಚೆಟ್ ಕೂಡ ಅವರಿಂದಲೇ ಬರುತ್ತದೆ. ಅದು ಬೇರೆ ಯಾರಿಂದಲೂ ಬರುತ್ತಿಲ್ಲ, ಯಾರಿಗೆ ಇವರು ಗುತ್ತಿಗೆಯನ್ನು ಕೊಟ್ಟಿದ್ದಾರೆ ಎರಡು ರೀತಿ ಇದೆ, ಒರಿಜಿನಲ್ ಸರ್ಕಾರದ ಪರವಾಗಿ ಮಾಡುವವರು ಅವರೆ, ಡೂಪ್ಲಿಕೇಟ್ ಸ್ಯಾಚೆಟ್ ಬರುವುದು ಕೂಡ ಅವರಿಂದಲೇ ಆಗಿದೆ. ಇದರ ಬಗ್ಗೆ ಒಂದು ಲೆಕ್ಕವನ್ನು ತೆಗೆದುಕೊಳ್ಳಬೇಕು. ಅವರು ಕಿಸ್ತೆ ಎಷ್ಟು ಕಟ್ಟುತ್ತಿದ್ದಾರೆ, ಎಷ್ಟು ಮಾರಾಟವಾಗಿದೆ ಎಂಬುದರ ಬಗ್ಗೆ ಸರ್ಕಾರಕ್ಕೆ ಕೊಟ್ಟಿದ್ದಾರೆಂಬುದನ್ನು ನೋಡಿದರೆ ಅವರು ಕಿಸ್ತೆಯನ್ನು ಕಟ್ಟುವುದಕ್ಕೆ ಸಾಧ್ಯವೇ ಇಲ್ಲ, ಅದಕ್ಕೋಸ್ಕರ ಮೊಲಾಸಿಸನ್ನು ರೆಗ್ಯುಲೇಟ್ ಮಾಡಬೇಕು, ಸ್ಯಾಚೆಟ್ ಮಾಡುವುದನ್ನು ಅವರ ಕೈಯಿಂದ ತಪ್ಪಿಸಬೇಕಾಗುತ್ತದೆ. ಅದಕ್ಕಾಗಿ ಇನ್ನೊಂದು ಮಾಡಬಹುದು, ನನ್ನ ಸಲಹೆ ಏನೆಂದರೆ, ರೇಟನ್ನು ಜಾಸ್ತಿ ಮಾಡುವ ಬದಲಾಗಿ ವೈನಶಾಪ್ ನಡೆಸುವುದಕ್ಕೆ ಯಾವ ರೀತಿಯಾಗಿ ಲೈಸೆನ್ಸ್ ಕೊಡುತ್ತಾರೆ, ಅರ್‍ಯಾಕ್‌ಶಾಪ್‌ಗೂ ಕೂಡ ಲೈಸೆನ್ಸನ್ನು ಕೊಡಿ

ಪ್ರತಿ ವರ್ಷ ಗುತ್ತಿಗೆ ಕೊಡುವುದು ನಿಲ್ಲುತ್ತದೆ, ಅವರು ಬಿಡ್‌ಹಾಕುವುದು, ನಾವು ರಾಜಕಾರಣಿಗಳು ಚುನಾವಣೆಯ ಸಂದರ್ಭದಲ್ಲಿ ಸೆಲ್ಯೂಟ್ ಹೊಡೆಯುವುದು ಎಲ್ಲಾ ನಿಲ್ಲುತ್ತದೆ. ನಮಗೆ ಹೆಚ್ಚು ತೊಂದರೆಯಾಗುವುದು ಅವರಿಂದಲೇ. ಅವರು ನಮ್ಮೆದುರಿಗೆ ಕ್ಯಾಂಡಿಡೇಟನ್ನು ಹಾಕುವಂತಹ ಪರಿಸ್ಥಿತಿಗೆ ಅವರು ಬಂದಿದ್ದಾರೆ. ಐಎಂಎಫ್‌ನಲ್ಲಿ ಇವರ ಆದಾಯ ಜಾಸ್ತಿಯಾಗಿದೆ ಅದನ್ನು ನಾನು ಒಪ್ಪುತ್ತೇನೆ. ಕಮರಿಪೇಟೆಯ ಬಗ್ಗೆ ಚರ್ಚೆ ಮಾಡುವಾಗ, ಇದು ಕೇವಲ ಹುಬ್ಬಳ್ಳಿಯಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಇದು ಪ್ರಾರಂಭವಾಗಿದೆ. ಇದರ ಬಗ್ಗೆ ನಾನು ಮೊನ್ನೆ ಉಪಮುಖ್ಯಮಂತ್ರಿಗಳ ಹತ್ತಿರ ಹೇಳಿದೆ. ಇದರ ಬಗ್ಗೆ ಕಾನೂನು ತಿದ್ದುಪಡಿ ಮಾಡಿ ಎಂದು ಕಾನೂನನ್ನು ತಿದ್ದುಪಡಿ ಮಾಡಿದ್ದೇವೆಂದು ಅವರು ಹೇಳಿದರು. ಅದು ಕಾನೂನು ತಿದ್ದುಪಡಿಯಾಗಿಲ್ಲ, ನಾನು ಅವರ ಗಮನಕ್ಕೆ ತರುವುದಕ್ಕೆ ಇಚ್ಛಿಪಡುವುದು ಸೆಕ್ಷನ್ ೪೫(ಬಿ)ನ್ನು ತಿದ್ದುಪಡಿ ಮಾಡಿ ಎಂದು. ಮೊದಲು ಇದ್ದದ್ದನ್ನು ೨೦೦೩ರಲ್ಲಿ ತಿದ್ದುಪಡಿ ಮಾಡಿ ಏನು ಮಾಡಿದರು ಮೊದಲು ಡೂಪ್ಲಿಕೇಟ್ ಇದ್ದರೆ ಅದಕ್ಕೆ ಶಿಕ್ಷೆ ಇತ್ತು, ಈಗ ಅದನ್ನು ತೆಗೆದು ಅವರಿಗೆ ೨೦೦೩ರಲ್ಲಿ ತಿದ್ದುಪಡಿ ಮಾಡಿ ಪೆನಾಲ್ಟಿಯನ್ನು ಹಾಕುವಂತಹ ಅವಕಾಶವನ್ನು ಮಾಡಿದ್ದಾರೆ. ಮೊದಲು ಶಿಕ್ಷೆ ಇದ್ದುದನ್ನು ತೆಗೆದು ಪೆನಾಲ್ಟಿ ಹಾಕುವುದಾಗಿ ಮಾಡಿದ್ದಾರೆ. ನೀನು ಶಿಕ್ಷೆ ಕೊಡಬೇಡ ಎಂದು ಡಿಸ್‌ಕ್ರಿಷನ್‌ಸವರನ್ನು ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಯಾವುದು ವೈನ್‌ಶಾಪ್ ಅಥವಾ ಬಾರ್‌ನಲ್ಲಿ ಡೂಪ್ಲಿಕೇಟ್ ಸಿಕ್ಕಿತು ನೇರವಾಗಿ ಲೈಸೆನ್ಸ್‌ನ್ನು ಕ್ಯಾನ್ಸಲ್ ಮಾಡುವುದು, ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುವಂತಹದ್ದು ವ್ಯವಸ್ಥೆ ಆದಾಗ ಮಾತ್ರ ಅದನ್ನು ಸರಿಪಡಿಸುವುದಕ್ಕಾಗುತ್ತದೆ. cheaper brand of IML ಇನ್ನು ರೇಟ್ ಕಡಿಮೆ ಮಾಡಿದಾಗ ಡೂಪ್ಲಿಕೇಟ್ ಮಾಡಿದಾಗ ಅವರಿಗೆ ವರ್ಕೌಟ್ ಆಗಬಾರದು. ಆ ಪರಿಸ್ಥಿತಿಗೆ ಅವರನ್ನು ತಂದಿಡಬೇಕಾಗುತ್ತದೆ. ಇಲ್ಲದಿದ್ದರೆ ಇದನ್ನು ಸರಿಪಡಿಸುವುದಕ್ಕೆ ಆಗದೆ ಎಲ್ಲೋ ಒಂದು ಕಡೆಯಲ್ಲಿ ನಾವು ಅವರಿಗೆ ಸಹಾಯ ಮಾಡಿದಂತಾಗುತ್ತದೆ. ಏಕೆಂದರೆ ಸೆಕೆಂಡ್ಸ್ ಇಲ್ಲ, ಅದು ಇಲ್ಲದಿದ್ದ ಮೇಲೆ ಸಿಕ್ಕಿದ್ದು ಎಲ್ಲಾ ಡೂಪ್ಲಿಕೇಟೇ? ಅದನ್ನು ಲ್ಯಾಬ್‌ಗೆ ಕಳುಹಿಸುತ್ತಾರೆ, ಇದೊಂದು ವಿಶೇಷ. ಲ್ಯಾಬ್‌ಗೆ ಕಳುಹಿಸಿದಾಗ ಅವರು ರಿಪೋರ್ಟನ್ನು ಕಳುಹಿಸುವುದು ಡೂಪ್ಲಿಕೇಟ್ ಅಥವಾ ಒರಿಜಿನಲ್ ಎಂದು ಕಳುಹಿಸುವುದಿಲ್ಲ, ಅವನು ಸಾಯುವವರೆಗೂ Fit for human consumption, ಅದು whether it is original brand or duplicate ಬರಬಾರದು. ಡೂಪ್ಲಿಕೇಟ್ ಎಂದಾಗ ಲೈಸೆನ್ಸ್ ಕ್ಯಾನ್ಸಲ್ ಆಗುವಂಥಹದ್ದು ವ್ಯವಸ್ಥೆಯನ್ನು

ಮಾಡಬೇಕೆಂದು ಮಾನ್ಯ ಉಪಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ. ಸೆಕ್ಷನ್ ೪೫(ಬ)ಗೆ ಲೈಸೆನ್ಸ್ ಕ್ಯಾನ್ಸಲ್ ಮಾಡುವುದಕ್ಕೆ ತಿದ್ದುಪಡಿಯನ್ನು ಅವರು ತಂದಾಗ ಮಾತ್ರ ಸರ್ಕಾರದ ಜೆನ್ಯೆನೆಸ್ ಗೊತ್ತಾಗುತ್ತದೆ. ಅವರ ಮನಸ್ಸಿನಲ್ಲಿ ಸರಿಮಾಡುವ ಬಗ್ಗೆ ಇದೆಯೋ ಇಲ್ಲವೋ ಎಂಬುದು ಗೊತ್ತಾಗುತ್ತದೆ. ಈ ವಿತ್ತೀಯ ನೀತಿ ವಿಶ್ಲೇಷಣೆ ನಿರ್ವಹಣೆಯ ಬಗ್ಗೆ ಸ್ವಲ್ಪ ಮಾಹಿತಿಯನ್ನು ಕೊಡಬೇಕು. ಕೊನೆಯ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುವುದಕ್ಕೆ ಇಚ್ಛೆಪಡುತ್ತೇನೆ. ನಾನು ಮೊನ್ನೆ ದಿವಸ Papers to be laid on the Table of the House ಓದುತ್ತಿದ್ದೆ. ನಮ್ಮನೆಲ್ಲರನ್ನು ಬ್ಲ್ಯಾಕ್ ಎಂಬ ಸಿನಿಮಾಕ್ಕೆ ಕರೆದುಕೊಂಡು ಹೋದರು. ಆಗ ನಾನು ಹೋಗಲಿಲ್ಲ, ಫೋರಂನಲ್ಲಿ ಒಂದು ಸಿನಿಮಾಕ್ಕೆ ಮಲ್ಟಿಪ್ಲೆಕ್ಸ್ ಥಿಯೇಟರ್, ಆದಕ್ಕೆ ೩ ವರ್ಷಗಳ ಕಾಲ ತೆರಿಗೆ ವಿನಾಯಿತಿಯನ್ನು ಮಾಡಿದ್ದಾರೆ. ಆ ಪಿವಿಆರ್ ಥಿಯೇಟರಿನಲ್ಲಿ ಅಲ್ಲಿಯ ಟಿಕೆಟ್ ದರದ ಬಗ್ಗೆ ಹೇಳುವುದಾದರೆ ಅಧ್ಯಕ್ಷರೆ, ಗೋಲ್ಡ್ ಕ್ಲಾಸ್ ೫೦೦.೦೦ ರೂಪಾಯಿಗಳು, ನ್ಯೂರೋಪ್ ೧೨೫.೦೦ ರೂಪಾಯಿಗಳು, ಕ್ಲಾಸಿಕ್ ಶೋ ೧೦೦.೦೦ ರೂಪಾಯಿಗಳು ಇಷ್ಟು ಟಿಕೇಟಿನ ದರವನ್ನು ಹಾಕುವವರಿಗೆ ನಾವು ಶಾಶ್ವತ ೩ ವರ್ಷಗಳ ಕಾಲ ತೆರಿಗೆ ವಿನಾಯಿತಿಯ ಅಗತ್ಯ ಉಂಟಾ? ಇಷ್ಟು ಟಿಕೆಟ್‌ಗಳನ್ನು ಹಾಕುವವರಿಗೆ ನಾವು ಶಾಶ್ವತವಾಗಿ ಮೂರು ವರ್ಷಗಳ ಕಾಲ ತೆರಿಗೆ ವಿನಾಯಿತಿ ನೀಡುವ ಅಗತ್ಯವಿದೆಯೇ? ಯಾವ ಕಾರಣಕ್ಕಾಗಿ ಕೊಟ್ಟರು? ನನಗೆ ಹಾಗೂ ಇಲ್ಲಿ ಕುಳಿತಿರುವ ಶಾಸಕರಿಗೆ ಮೊದಲೇ ಗೊತ್ತಿದ್ದರೆ ಪ್ರಾಯಶಃ ಯಾರೂ ಸಹ ಸಿನಿಮಾಕ್ಕೆ ಹೋಗುತ್ತಿರಲಿಲ್ಲವೆಂದು ಕಾಣುತ್ತದೆ. ಇದು ಒಂದು ರೀತಿಯಲ್ಲಿ ನಮಗೆ, ಇಲ್ಲಿ ಕುಳಿತವರಿಗೆ ಪ್ರತ್ಯೇಕವಾಗಿ ಲಂಚ ಕೊಟ್ಟ ಹಾಗೆ ಆಯಿತು ಎಂದು ನಾನಾದರೂ ಭಾವಿಸುತ್ತೇನೆ. ಮೂರು ವರ್ಷಗಳ ಕಾಲ ನಮ್ಮಲ್ಲಿ ೫೦೦, ೧೫೫, ೧೦೦ ರೂಪಾಯಿಗಳ ಟಿಕೆಟ್ ಚಾರ್ಜ್ ಮಾಡುವವರಿಗೆ ಟ್ಯಾಕ್ಸ್ ಎಕ್ಸ್‌ಮಷನ್ ಕೊಡುವ ಅವಶ್ಯಕತೆ ಉಂಟೆ? ತಮ್ಮ ಮುಖೇನ ಸರ್ಕಾರ ಇದಕ್ಕೆ ಉತ್ತರವನ್ನು ಹೇಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಟ್ಯಾಕ್ಸ್ ಎಕ್ಸ್‌ಮಷನ್ ತಂದು ಈ ಬಿಲ್‌ಗಳನ್ನು ತಂದಿದ್ದಾರೆ, ಇದು ಯಾತಕ್ಕೆ ಎಂದು ಗೊತ್ತಿಲ್ಲ, ಅದಕ್ಕಿಂತ ಬೇಕಾದಷ್ಟು ಚಿತ್ರಮಂದಿರಗಳು ಬಹಳ ಕೆಟ್ಟ ಪರಿಸ್ಥಿತಿಯಲ್ಲಿದೆ, ಅವರಿಗೆಲ್ಲಾ ಕೊಡಬಹುದಾಗಿತ್ತು. ಯಾರೋ ಒಬ್ಬೊಬ್ಬ ಮಾಲಿಕರಿಗೆ ಇಡೀ ಸರ್ಕಾರವೇ ಮಣಿದು ಟ್ಯಾಕ್ಸ್ ಎಕ್ಸ್‌ಮಿಷನ್ ಬಿಲ್‌ಗಳನ್ನು ತಂದು, ಟ್ಯಾಕ್ಸ್ ಎಕ್ಸ್‌ಮಷನ್ ಮಾಡಿದರೆ ಏನು ಕಥೆ ಇದು ಎಂದು ಗೊತ್ತಾಗುತ್ತಿಲ್ಲ? ಇದರ ಹಿಂದೆ ಯಾರಿದ್ದಾರೆ? ಯಾರ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ? ಎನ್ನುವುದು ತಿಳಿಯುತ್ತಿಲ್ಲ, ಮಧ್ಯಪ್ರದೇಶದ ಸಂಜಯಗಾಂಧಿ ಒಂದು ಆಸ್ಪತ್ರೆಗೆ ಒಂದು

ಎಕ್ವಿಪ್‌ಮೆಂಟ್ಸ್ ಕೊಡಲಿಕ್ಕೆ ನಮ್ಮ ರಾಜ್ಯದಲ್ಲಿ ಟ್ಯಾಕ್ಸ್ ಎಕ್ಸ್‌ಮಪ್ಷನ್ ತಂದಿದ್ದಾರೆ. ನಮ್ಮ ರಾಜ್ಯದ ಆಸ್ಪತ್ರೆಗಳಿಗೆ ಎಕ್ವಿಪ್‌ಮೆಂಟ್ಸ್ ಕೊಡಲಿಕ್ಕೆ ನಮ್ಮ ಸರ್ಕಾರಕ್ಕೆ ಪುರುಸೊತ್ತು ಇಲ್ಲವೇ? ಅಥವಾ ಕಾಳಜಿ ಇಲ್ಲವೇ ಎಂಬುದು ನನಗೆ ಗೊತ್ತಾಗುತ್ತಿಲ್ಲ? ಒಂದೆರಡು ಮೂರು ಬಿಲ್‌ಗಳು ಇಲ್ಲಿ ಇವೆ, ನಮಗೆ ಗೌರವ ತರುವುದಾದರೆ ತೊಂದರೆಯಿಲ್ಲ, ಇಲ್ಲದೇ ಹೋದರೆ ಇದನ್ನು ಏಕೆ ಮಾಡುತ್ತಿದ್ದೀರಿ ಎಂಬುದು ಗೊತ್ತಾಗುತ್ತಿಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಸಮಯ ಬಹಳ ಆಗಿರುವುದರಿಂದ ನಾನು ಈ ವಿತ್ತೀಯ ಚರ್ಚೆಯ ಬಗ್ಗೆ ಪವರ್ ಪ್ರಾಜೆಕ್ಟ್ ಬಗ್ಗೆ ಇನ್ನೊಂದು ಸದನ ಸೇರಿದಾಗ ಅದರ ಬಗ್ಗೆ ಹೆಚ್ಚು ಚರ್ಚೆಯನ್ನು ಮಾಡಬೇಕೆಂದು ತೀರ್ಮಾನವನ್ನು ಮತ್ತು ತಾವು ನನಗೆ ಮಾತನಾಡಲು ಒಂದು ಅವಕಾಶವನ್ನು ಕೊಟ್ಟಿದ್ದಕ್ಕಾಗಿ, ತಮಗೆ ವಂದಿಸುತ್ತಾ ಈ ಎಲ್ಲಾ ಸಮಸ್ಯೆಗಳಿಗೆ ಸರ್ಕಾರ ಪರಿಹಾರವನ್ನು ಕೊಡುತ್ತಾರೆಯೇ? .... ಏಕೆಂದರೆ ಯಾವಾಗಲೂ ಏನಾಗುತ್ತದೆಂದರೆ ಸರ್ಕಾರ ಬಜೆಟನ್ನು ಮಂಡಿಸಿದ ಕೂಡಲೇ ಸರ್ಕಾರಕ್ಕೆ ಪ್ರತಿಷ್ಠೆಯಾಗುತ್ತದೆ, ಏನೆಂದರೆ ನಾವೇನಾದರೂ ಸಲಹೆಯನ್ನು ಕೊಟ್ಟರೂ ಸಹ ತೆಗೆದುಕೊಳ್ಳದೇ ಇರುವಂತಹದು. ಸಲಹೆಗಳನ್ನು ತೆಗೆದುಕೊಂಡು ಈ ಸಮಸ್ಯೆಗಳಿಗೆ ಹೆಚ್ಚಾಗಿ ಪರಿಹಾರವನ್ನು ಕೊಡಬೇಕು, ಅದರಲ್ಲೂ ರೆವಿನ್ಯೂ ರಸೀಪ್ಟ್ ಎನಿವೆ, ಇವರು ಒಂದು ಅಂದಾಜು ಮಾಡಿರುತ್ತಾರೆ. ಖರ್ಚು ಇನ್ನೊಂದು ಅಂದಾಜು ಮಾಡಿರುತ್ತಾರೆ, ಅದಕ್ಕಿಂತ ಜಾಸ್ತಿ ಈ ಕನ್ಸೆಷನ್ಸ್ ಕೊಡುತ್ತಾ ಹೋದರೆ ಅಥವಾ ಬರುವಂತಹ ರಸೀಪ್ಟ್‌ಗಳನ್ನು ಈ ರೀತಿ ಬಿಡುತ್ತಾ ಹೋದರೆ ಸರ್ಕಾರಕ್ಕೆ ಇದರಿಂದ ಸಮಸ್ಯೆಯಾಗುತ್ತದೆಂದು, ಬೇರೆ ಜನರ ಮೇಲೆ ಸಹ ಹೊರೆ ಜಾಸ್ತಿಯಾಗುತ್ತದೆ ಎಂದು ಹೇಳುತ್ತಾ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರಾದ ಶ್ರೀ ಹೆಚ್.ಡಿ.ರೇವಣ್ಣನವರು ಬ್ಯಾಂಕ್ವೆಟ್ ಹಾಲ್‌ನಲ್ಲಿ ಎಲ್ಲಾ ಸದಸ್ಯರಿಗೂ ಭೋಜನ ಕೂಟವನ್ನು ಏರ್ಪಡಿಸಿ, ಎಲ್ಲಾ ಸದಸ್ಯರು ಭಾಗವಹಿಸಬೇಕೆಂದು ಆಹ್ವಾನಿಸಿರುತ್ತಾರೆ, ಹಾಗಾಗಿ ಸದನವನ್ನು ಮತ್ತೆ ೩.೦೦ ಗಂಟೆಗೆ ಸೇರುವಂತೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ ೧.೫೩ ಗಂಟೆಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ ೩.೦೦ ಗಂಟೆಗೆ ಸೇರಲು ನಿಶ್ಚಯಿಸಿತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ವಿತ್ತೀಯ ಕಾರ್ಯಕಲಾಪಗಳು:

ಆಯವ್ಯಯದ ಮೇಲೆ ಮುಂದುವರಿದ ಚರ್ಚೆ :

ಶ್ರೀ ಗೋವಿಂದ ಮಕಟಪ್ಪ ಕಾರಜೋಳ : (ಮಾನ್ಯ ವಿರೋಧಪಕ್ಷದ ಉಪ ನಾಯಕರು) ಮಾನ್ಯ ಅಧ್ಯಕ್ಷರೇ, ೨೦೦೫-೦೬ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಮೊದಲು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಧರ್ಮಸಿಂಗ್ ಅವರ ನೇತೃತ್ವದ ಸರ್ಕಾರ ಯಾವ ರೀತಿಯಾಗಿ ನಡೆಯುತ್ತಿದೆ ಅಂದರೆ ಈ ದೇಶದಲ್ಲಿ ಕೇಲವು ಕಡೆ ಗುಡ್ಡಗಾಡು ಪ್ರದೇಶದಲ್ಲಿ ರಸ್ತೆ ಸಾರಿಗೆ ವ್ಯವಸ್ಥೆಯಲ್ಲಿ, ರಸ್ತೆಗಳು ಸರಿಯಾಗಿಲ್ಲ, ಅಲ್ಲೆಲ್ಲಾ ಕತ್ತೆಗಳ ಮೇಲೆ ಓಡಾಡುತ್ತಿರುತ್ತಾರೆ. ಕಾಶ್ಮೀರ ಕಣಿವೆಯಲ್ಲಿ ಇರಬಹುದು, ಹಿಮಾಚಲಪ್ರದೇಶದಲ್ಲಿರಬಹುದು, ಈ ಗುಡ್ಡಗಾಡು ಪ್ರದೇಶಗಳಲ್ಲಿ ರಸ್ತೆ ಸೌಕರ್ಯ ಇಲ್ಲದ್ದಕ್ಕಾಗಿ ಕತ್ತೆಗಳ ಮೇಲೆ ಓಡಾಡುತ್ತಾರೆ. ಒಂದು ದಿನ ಕಾಶ್ಮೀರದ ಒಬ್ಬ ಪಟೇಲ ಕತ್ತೆಯ ಮೇಲೆ ಸವಾರಿ ಮಾಡುತ್ತಿದ್ದ ಅವನಿಗೆ ನಮ್ಮ ರಾಜೇಂದ್ರನ್ ತರಹದವರು ಎದುರಿಗೆ ಬರುತ್ತಾರೆ. ಕ್ಯಾ ಪಟೇಲ್ ಸಾಬ್ ಕಿದರ್ ಜಾ ರಹೇ ಐ ಅಂತಾನೆ. ಕೇಳಿದಾಗ ಆ ಪಟೇಲ್ ಹೇಳುತ್ತಾನೆ, ನಾನು ಎಲ್ಲಿ ಹೋಗಲಿ ಮಾರಾಯ, ಅದು ಹೋಗುತ್ತಿದೆ ಅದರ ಮೇಲೆ ನಾನು ಕುಳಿತಿದ್ದೇನೆ, ಆ ರೀತಿಯಾಗಿ ನಮ್ಮ ಸರ್ಕಾರ ನಡೆಯುತ್ತಿದೆ. ಇವತ್ತು ಆಯವ್ಯಯವನ್ನು ಬಹಳ ಒಳ್ಳೆಯ ರೀತಿಯಲ್ಲಿ ಮಂಡಿಸಿದ್ದೇವೆಂದು ಹೇಳಿಕೊಂಡಿದ್ದಾರೆ. ಈ ದೇಶದಲ್ಲಿಯೇ ಯಾವ ರಾಜ್ಯ ಸರ್ಕಾರಗಳು ಮಂಡಿಸಿಲ್ಲ ಅಂತಹ ಒಂದು ಆಯವ್ಯಯವನ್ನು ನಾವು ಮಂಡಿಸಿದ್ದೇವೆಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೇ ಇವತ್ತು ಐದೂವರೆ ಕೋಟಿ ಜನ ಇರತಕ್ಕಂಥ ಈ ರಾಜ್ಯದಲ್ಲಿ ಸರ್ಕಾರ ಈ ಜನರಿಗೆ ಉದ್ಯೋಗ ಕೊಡುವುದಕ್ಕಾಗಿ ಇವತ್ತು ನಿರುದ್ಯೋಗ ವಿದ್ಯಾವಂತ ಯುವಕರಿಗೆ ಏನು ಮಾಡಬೇಕು ಎನ್ನುವುದರ ಬಗ್ಗೆ ಬಜೆಟ್‌ನಲ್ಲಿ ಆಲೋಚನೆ ಮಾಡಿದ್ದರೆ ಇದೊಂದು ಬಹಳ ಉತ್ತಮವಾದ ಬಜೆಟ್ ಎಂದು ಹೇಳಿ ಪ್ರಶಂಸೆ ಮಾಡುತ್ತಿದ್ದೆ, ಮಾನ್ಯ ಅಧ್ಯಕ್ಷರೆ ಇವತ್ತು ಈ ರಾಜ್ಯದಲ್ಲಿ ಸುಮಾರು ೩೬ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳು ಇವೆ. ೨೭ ಜಿಲ್ಲೆಗಳಲ್ಲಿದೆ, ೬ ವಿಶ್ವವಿದ್ಯಾಲಯಗಳಲ್ಲಿವೆ, ವಿಶ್ವವಿದ್ಯಾಲಯಗಳಲ್ಲಿ ಅಂದರೆ ಅವುಗಳಿಗೆ ಎಂಪ್ಲಾಯ್‌ಮೆಂಟ್ ಇನ್‌ಫರಮೇಷನ್ ಗೈಡೆನ್ಸ್ ಬ್ಯೂರೋ ಅಂತ ಹೇಳುತ್ತಾರೆ. ಅದು ಅಲ್ಲದೇ ಅಂಧರಿಗೆ, ಅಂಗವಿಕಲರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ, ಪಿ.ಜಿ. ಮಾಡಿದಂತವರಿಗೆ, ಟೆಕ್ನಿಕಲ್ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮೆಡಿಕಲ್‌ನವರ

ಸಲುವಾಗಿ ಪ್ರತ್ಯೇಕ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳು ಇವೆ. ಈ ಎಲ್ಲಾ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳಲ್ಲಿ ಉದ್ಯೋಗಕ್ಕಾಗಿ ಏನು ತಮ್ಮ ಹೆಸರನ್ನು ನೊಂದಾಯಿಸಿದ್ದಾರೊ, ಅವರು ಸಂಖ್ಯೆ ಸುಮಾರು ೨೦ ಲಕ್ಷ ಇದ್ದು ಇಷ್ಟು ಜನ ನಿರುದ್ಯೋಗಿಗಳು ಸರ್ಕಾರ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳ ಮೂಲಕ ನಮಗೆ ಉದ್ಯೋಗ ಕೊಡುತ್ತದೆಂದು ಕಾಯುತ್ತಾ ಕುಳಿತಿದ್ದಾರೆ. ಅದರಲ್ಲಿ ಪದವೀಧರರು ಇದ್ದಾರೆ, ಬಿಎಸ್ಸಿ, ಬಿಕಾಂ ಇದ್ದಾರೆ, ಸುಮಾರು ೭೯,೫೨೨ ಜನ ಇವತ್ತು ಕಾಯುತ್ತಾ ಕುಳಿತಿದ್ದಾರೆ, ಅದಲ್ಲದೆ ಇಂಜಿನಿಯರ್ ಪದವಿ ಮಾಡಿದವರು ಇದ್ದಾರೆ, ಸುಮಾರು ೧೮,೪೧೮ ಜನರಿದ್ದಾರೆ, ವೈದ್ಯಕೀಯ ಶಿಕ್ಷಣವನ್ನು ಮುಗಿಸಿ ರಿಜಿಸ್ಟ್ರೇಷನ್ ಮಾಡಿದವರು ಇದ್ದಾರೆ, ಸುಮಾರು ೧,೨೪೦ ಜನರಿದ್ದಾರೆ, ವೃತ್ತಿ ಶಿಕ್ಷಣದಲ್ಲಿ ೧,೪೦,೮೨೩ ಜನ ರಿಜಿಸ್ಟ್ರೇಷನ್ ಮಾಡಿದ್ದಾರೆ. ಇದಲ್ಲದೆ ಡಿಪ್ಲೊಮಾ ಹೋಲ್ಡರ್ ಸುಮಾರು ೩೬,೭೧೬ ಜನ ಇದ್ದಾರೆ. ಎಸ್‌ಎಸ್‌ಎಲ್‌ಸಿ ಪಾಸ್ ಆದವರಿದ್ದಾರೆ, ೧೦,೫೫,೦೦೦ ಜನರಿದ್ದಾರೆ, ಎಸ್‌ಎಸ್‌ಎಲ್‌ಸಿ ಫೇಲ್ ಆದವರು ೧,೩೭,೦೦೦ರಿದ್ದಾರೆ, ಇದಲ್ಲದೆ ಇಲ್ಲಿ ಟ್ರಿಟ್, ನಮಗೆ ಸ್ಕ್ಯಾವೆಂಜರ್, ಕ್ಲಾಸ್ ಫ್ಹೋರ್ ಯಾವುದಾದರೂ ಕೆಲಸ ಸಿಗುತ್ತದೆಂದು ಇದ್ದಾರೆ. ಇದಲ್ಲದೆ ಪಿ.ಜಿ. ಮಾಡಿದವರಿದ್ದಾರೆ, ಎಂಕಾಂ, ಎಂಎಸ್‌ಸಿ ಮಾಡಿದವರು ೧೨,೮೬೪ ಜನ ರಿಸಿಸ್ಟ್ರೇಷನ್ ಮಾಡಿದ್ದಾರೆ. ಅದಲ್ಲದೆ ಪಿ.ಜಿ. ಟೆಕ್ನಿಕಲ್ ಕೋರ್ಸ್ ಮಾಡಿದವರು, ಎಂಎಸ್ಸಿ ಡಿಗ್ರಿ ಮಾಡಿರಬಹುದು, ಎಂಇ ಮಾಡಿರಬಹುದು, ಎಂಡಿ ಮಾಡಿರಬಹುದು ೧೪,೮೦೦ ಜನ ಸುಮಾರು ಇದ್ದಾರೆ. ಇದಲ್ಲದೆ ಐಟಿಐ ಪಾಸ್ ಆದವರು ೭೬,೬೦೪ ಜನರಿದ್ದಾರೆ. ಇವರಿಗೆಲ್ಲಾ ಉದ್ಯೋಗ ಕೊಡುವುದಕ್ಕೆ ಸರ್ಕಾರ ಒಂದು ನಿಶ್ಚಿತವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ೧೯೮೯ ರಿಂದ ಈ ರಾಜ್ಯದಲ್ಲಿ ೨೦೦೫ ರವರೆಗೆ ಒಬ್ಬ ಸೆಕೆಂಡ್ ಡಿವಿಜನ್ ಕ್ಲರ್ಕ್, ಒಬ್ಬ ಫಸ್ಟ್ ಡಿವಿಜನ್ ಕ್ಲರ್ಕ್ ಅಪಾಯಿಂಟ್‌ಮೆಂಟ್ ಮಾಡಲಿಲ್ಲ ಕ್ಲಾಸ್ ಫ್ಹೋರ್ ಹುದ್ದೆಗೆ ಅಪಾಯಿಂಟ್ ಮಾಡಲಿಲ್ಲ, ೧೯೮೯ರಲ್ಲಿ ಈ ರಾಜ್ಯದ ಜನಸಂಖ್ಯೆ ನಾಲ್ಕುವರೆ ಕೋಟಿ ಇತ್ತು, ಇವತ್ತು ಐದೂವರೆ ಕೋಟಿಯಾಗಿದೆ, ಈ ಜನರಿಗೆ ಏನಾದರೂ ಮಾಡಬೇಕಲ್ಲ, ಜನಸಂಖ್ಯೆ ಹೆಚ್ಚಾದಂತೆ ಉದ್ಯೋಗವಕಾಶಗಳು ಹೆಚ್ಚಾಗಬೇಕಲ್ಲ, ಆದರೆ ಸರ್ಕಾರ ಏನೂ ಮಾಡುತ್ತಿಲ್ಲ, ಇವತ್ತು ಸುಮಾರು ಒಂದು ಲಕ್ಷ ಸರ್ಕಾರಿ ಸಕೆಂಡ್ ಡಿವಿಜನ್ ಪೋಸ್ಟ್‌ಗಳಿದ್ದಾವೆ, ಅದೇನು ಸೃಷ್ಟಿ ಮಾಡತಕ್ಕದ್ದಲ್ಲ, ಸುಮಾರು ೪೦-೫೦ ವರ್ಷಗಳಿಂದ ಮಂಜೂರಾದ ಹುದ್ದೆಗಳು, ಅವನ್ನಾದರೂ ತುಂಬಬೇಕಲ್ಲ, ಅವರಿಗೆ ಉದ್ಯೋಗ ಕೊಡಬೇಕು, ಈ ಕೆಲಸವೇ ರಾಜ್ಯದಲ್ಲಿ ಇವತ್ತು ಆಗುತ್ತಿಲ್ಲ, ಅದಕ್ಕಾಗಿ, ಯಾವ ರೀತಿಯಾಗಿ ನಿಮ್ಮ ಬೆನ್ನನ್ನು ನೀವು ತಟ್ಟಿಕೊಳ್ಳುವುದಕ್ಕೆ ಬಯಸುತ್ತೀರೆಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ನಿಮ್ಮ ಮೂಲ ಕರ್ತವ್ಯವೇನು, ರಾಜ್ಯದಲ್ಲಿರುವ

ನಿರುದ್ಯೋಗಿ ಯುವಕರಿಗೆ, ವಿದ್ಯಾವಂತ ಯುವಕರಿಗೆ, ಉದ್ಯೋಗ ಕೊಡಬೇಕಾದ್ದು ನಿಮ್ಮ ಕರ್ತವ್ಯ. ಇನ್ನೊಂದು ದುರ್ದೈವದ ಸಂಗತಿ ಏನಾಗಿದೆ ಎಂದರೆ, ಆಡಳಿತ ವ್ಯವಸ್ಥೆ ಸರಿಯಿಲ್ಲ, ಡಿಫೆನ್ಸ್‌ನಲ್ಲಿ ಎಂಪ್ಲಾಯ್‌ಮೆಂಟ್ ಮುಖಾಂತರ ಪ್ರತಿವರ್ಷ ೨-೩ ಸಾವಿರ ಅಪಾಯಿಂಟ್ ಆಗುತ್ತಿತ್ತು. ಸ್ಕಾವೆಂಜರ್ ಇರಬಹುದು, ಸ್ವೀಪರ್ ಇರಬಹುದು, ಮೋಚಿ ಇರಬಹುದು, ದರ್ಜಿ ಇರಬಹುದು, ಅಗಸ ಇರಬಹುದು, ಎಂಪ್ಲಾಯಿಂಟ್‌ಮೆಂಟ್ ನ್ಯೂಸ್ ಎಂಬ ಪತ್ರಿಕೆಯಲ್ಲಿ ಜಾಹಿರಾತು ಕೊಡುತ್ತಾರೆ, ಅದು ನಮ್ಮ ಹಳ್ಳಿಗಳಿಗೆ ಹೋಗುವುದಿಲ್ಲ, ಹಳ್ಳಿಗಳಿಗೆ ಅಷ್ಟೆ ಅಲ್ಲ, ಬಿಜಾಪುರ, ಬಾಗಲಕೋಟೆಯಂತಹ ಪಟ್ಟಣಗಳಲ್ಲಿ ಸಿಗುವುದಿಲ್ಲ, ಅಂತಹ ಒಂದು ಇಂಗ್ಲಿಷ್ ಪತ್ರಿಕೆಗೆ ಅವರು ಜಾಹಿರಾತು ಕೊಟ್ಟು ಏನು ಮಾಡುತ್ತಿದ್ದಾರೆಂದರೆ, ಇಲ್ಲಿ ಯಾವ್ಯಾವ ರಾಜ್ಯದವರು ಇಲ್ಲಿ ಡಿಫೆನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ, ಆಯಾ ರಾಜ್ಯದಲ್ಲಿ ತಮ್ಮ ಊರಿನವರನ್ನು ತಮ್ಮ ಬಂಧುಬಳಗದವರನ್ನು ತಮಗೆ ಬೇಕಾದವರನ್ನು, ತಂದು ಇಲ್ಲಿ ಅಪಾಯಿಂಟ್‌ಮೆಂಟ್ ಮಾಡುತ್ತಿದ್ದಾರೆ, ಕನ್ನಡಿಗರಿಗೆ ಒಂದು ಉದ್ಯೋಗ ಸಿಗುತ್ತಿಲ್ಲ. ನಾನು ಇವತ್ತು ಸರ್ಕಾರಕ್ಕೆ ಕೇಳುತ್ತಿದ್ದೇನೆ, ಅದು ನಿಮ್ಮ ಕರ್ತವ್ಯ ಅಲ್ಲವೇ ಏನೂ, ನೀರು, ವಿದ್ಯುತ್, ರಸ್ತೆ ವ್ಯವಸ್ಥೆ ಮೂಲಭೂತ ಸೌಕರ್ಯ ಕೊಟ್ಟಿದ್ದೀರಿ. ಭಾರತ ಸರ್ಕಾರದ ಅಡಿಯಲ್ಲಿದ್ದರು ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದೀರಿ, ಸಂಬಂಧಪಟ್ಟವರನ್ನು ನೀವು ಕರೆದು ಹೇಳಬೇಕು, ನೀವು ನಮ್ಮ ಕನ್ನಡಿಗರಿಗೆ ಉದ್ಯೋಗ ಕೊಡದೆ ಹೋದರೆ, ಮೊದಲು ಯಾವ ರೀತಿ ಎಂಪ್ಲಾಯ್‌ಮೆಂಟ್ ಮೂಲಕ ನೇಮಕ ಮಾಡುತ್ತಿದ್ದೀರಿ, ಮಾಡದೆ ಹೋದರೆ ನಿಮಗೆ ಕೊಡುವ ಎಲ್ಲಾ ಸವಲತ್ತನ್ನು ನಾವು ನಿಲ್ಲಿಸುತ್ತೇವೆಂದು ಹೇಳಬೇಕಾಗಿತ್ತು, ಅದು ಆಡಳಿತ. ಆಡಳಿತ ಎಂದರೆ ಸುಮ್ಮನೆ, ಕುರ್ಚಿಯ ಮೇಲೆ ಸುಮ್ಮನೆ ಶೋ ಪೀಸ್ ಕುಳಿತಂತೆ ಕುಳಿತುಕೊಳ್ಳುವುದೇನು? ಈ ಅಧಿಕಾರಿಗಳು ಏನು ಮಾಡುತ್ತಿದ್ದಾರೆ. ಒಂದು ಕಡೆ ಡಿಫೆನ್ಸ್‌ನಲ್ಲಿ ಈ ರೀತಿಯಾಗುತ್ತದೆ, ಇನ್ನೊಂದು ಕಡೆ ಐಎಎಸ್ ಅಧಿಕಾರಿಗಳು, ಯಾವ್ಯಾವ ರಾಜ್ಯದವರಿದ್ದಾರೆ, ಅವರನ್ನು ಇಲ್ಲಿ ತಂದು ತುಂಬುತ್ತಾರೆ, ಕೇರಳ ರಾಜ್ಯದವರು ಇಲ್ಲಿ ಕೆಲಸಕ್ಕೆ ಬರುತ್ತಾರೆ, ತಮಿಳುನಾಡಿನವರು ಇಲ್ಲಿ ಕೆಲಸಕ್ಕೆ ಬರುತ್ತಾರೆ, ಆಂಧ್ರಪ್ರದೇಶದವರು ಇಲ್ಲಿ ಕೆಲಸಕ್ಕೆ ಬರುತ್ತಾರೆ, ಈ ಬಡ ಕನ್ನಡಿಗರೇನು ಇದ್ದಾರೆ ಅವರೊಬ್ಬರಿಗೂ ಉದ್ಯೋಗ ಸಿಗುತ್ತಿಲ್ಲ, ಅದಕ್ಕೆ ನಾನು ಸರ್ಕಾರಕ್ಕೆ ಕೇಳಬಯಸುತ್ತೇನೆ, ನೀವೇನು ನಿದ್ದೆ ಮಾಡುತ್ತಿದ್ದೀರಾ, ತರಿಸಿಕೊಂಡು ರಿವ್ಯೂ ಮಾಡಿ, ಇಂತಹ ಒಂದು ವ್ಯವಸ್ಥೆ ಇದೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಅದರ ಸಲುವಾಗಿ ಇದ್ದು, ಒಬ್ಬ ಐಎಎಸ್ ಆಫೀಸರ್ ಇದ್ದು, ಕಾರ್ಯದರ್ಶಿ ಇದ್ದಾರೆ ಅದಕ್ಕೊಬ್ಬರು ಮಂತ್ರಿ ಇದ್ದಾರೆ, ಏನು ಮಾಡುತ್ತಿದ್ದೀರಿ, ರಿವ್ಯೂ ಮಾಡಿ, ಏತಕ್ಕೆ ಆಗುತ್ತಿಲ್ಲ, ಎಲ್ಲಿ ನಾವು ತಪ್ಪಿದ್ದೇವೆ, ಇದನ್ನು ನೋಡಬೇಕಾದ್ದು ನಿಮ್ಮ ಕರ್ತವ್ಯ, ಇದನ್ನು ನೋಡದೆ ಕಾರು ಬಂಗಲೆ ತೆಗೆದುಕೊಂಡು ಆರಾಮವಾಗಿ ಐದು ವರ್ಷ ಇದ್ದು

ಹೋಗುವುದಲ್ಲ, ರಿವ್ಯು ಮಾಡುವುದಕ್ಕೆ ಏನು ಎಲ್ಲಾ ವ್ಯವಸ್ಥೆ ಇದ್ದಾಗ ತೊಂದರೆಯಾಗಿದೆ ಹೇಳಿ? ಇದು ಒಂದು ಕಡೆ. ಇನ್ನೊಂದು ಕಡೆ ಒಕ್ಕಲುತನದ, ಕೃಷಿ ಬಗ್ಗೆ ಹೇಳುವುದಾದರೆ ನಮ್ಮದು ಕೃಷಿ ಪ್ರಧಾನವಾದ ದೇಶ, ೧೦೦ಕ್ಕೆ ೭೦ರಷ್ಟು ಜನ, ಕೃಷಿಯನ್ನೇ ಅವಲಂಬಿಸಿ ಬದುಕುತ್ತಿದ್ದಾರೆ, ಅದಕ್ಕೆ ಎಷ್ಟು ಹಣವನ್ನಿಡಲಾಗಿದೆ, ನಾವು ರೈತರ ಸಾಲ ಮನ್ನ ಮಾಡಿದ್ದೇನೆ, ೬ ಪರ್ಸೆಂಟ್ ಬಡ್ಡಿ ಕೊಟ್ಟದ್ದೇನೆಂದು ಬಹಳ ದೊಡ್ಡದಾಗಿ ಹೇಳಿದರು ಅಷ್ಟಕ್ಕೆ ನಿಮ್ಮ ಜವಾಬ್ದಾರಿ ಮುಗಿಯಲಿಲ್ಲ, ನಿಮ್ಮ ಜವಾಬ್ದಾರಿ ನಾವು ಯಾವ ವಿಷಯದಲ್ಲಿ ಹಿಂದೆ ಬೀಳುತ್ತಿದ್ದೇವೆ, ಏತಕ್ಕೆ ರೈತರ ಶೋಷಣೆಯಾಗುತ್ತಿದೆ, ರೈತರಿಗೆ ತೊಂದರೆಯಾಗುತ್ತಿದೆ, ಅದರ ಕಡೆ ಆಲೋಚನೆ ಮಾಡಬೇಕಾಗಿತ್ತು. ಇವತ್ತು ವಿಶ್ವವ್ಯಾಪಾರ ಒಪ್ಪಂದ ಮಾಡಿಕೊಂಡಿದ್ದೇವೆ ಇಡೀ ವಿಶ್ವದಲ್ಲಿರುವ ಎಲ್ಲಾ ರಾಷ್ಟ್ರಗಳ ಜೊತೆಯಲ್ಲಿ ಇವತ್ತು ನಾವು ಒಪ್ಪಂದ ಮಾಡಿಕೊಂಡಿದ್ದೇವೆ, ಇದರಿಂದ ನಮ್ಮ ರಾಷ್ಟ್ರದ ಕೃಷಿಯ ಮೇಲಾಗುತ್ತಿರುವ ತೊಂದರೆ ಏನು? ನಮ್ಮ ರೈತರಿಗಾಗುತ್ತಿರುವ ತೊಂದರೆಯೇನು? ಇದರ ಬಗ್ಗೆ ಸ್ವಲ್ಪ ಆಲೋಚನೆ ಮಾಡಿ ಬಜೆಟ್ ತಯಾರು ಮಾಡಬೇಕಾಗಿತ್ತು. ಇವತ್ತು ವಿಶ್ವದ ಎಲ್ಲಾ ದೇಶಗಳಲ್ಲಿ ಕೃಷಿಯನ್ನು ಒಂದು ಕೈಗಾರಿಕೆ ಎಂದು ನೋಡುತ್ತಾರೆ. ಕೃಷಿ ಒಂದು ಉದ್ಯಮವೆಂದು ನೋಡುತ್ತಾರೆ, ನಮ್ಮ ದೇಶದಲ್ಲಿ ಕೃಷಿ ಕೇವಲ ಹೊಟ್ಟೆಪಾಡಿಗಿರುವ ಒಂದು ವೃತ್ತಿ ಎಂದು ನಾವು ನೋಡುತ್ತಿದ್ದೇವೆ ಸಾವಿರಾರು ಜಮೀನಿರುವವರು ವಿಶ್ವದ ಎಲ್ಲಾ ರಾಷ್ಟ್ರಗಳಲ್ಲಿ ಅವರು ಉದ್ದಿಮೆ ರೀತಿಯಾಗಿ ಒಕ್ಕಲುತನ ಮಾಡುತ್ತಿದ್ದಾರೆ, ನಾವು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಬಂದ ಮೇಲೆ, ೫೫ ಎಕರೆಗಿಂತಲೂ ಹೆಚ್ಚಿಗೆ ಭೂಮಿಯನ್ನು ಇಟ್ಟುಕೊಳ್ಳಲು ಯಾರಿಗೂ ಅಧಿಕಾರವಿಲ್ಲ, ಈ ಕಾಯಿದೆ ಬಂದ ಮೇಲೆ, ಎಲ್ಲಾ ಅಣ್ಣತಮ್ಮಂದಿರು ಬೇರೆ ಬೇರೆಯಾಗಿ ೫-೧೦ ಎಕರೆ ಭೂಮಿಗೆ ಬಂದಿದ್ದೇವೆ. ೫-೧೦ ಎಕರೆ ತುಂಡು ಭೂಮಿಯನ್ನು ನಾವು ಸಾಗುವಳಿ ಮಾಡಬೇಕಾದರೆ, ಅವರನ್ನು ನಾವು ಕಾಂಪಿಟ್ ಮಾಡಲಾಗುವುದಿಲ್ಲ. ಅವರು ಕೃಷಿಯನ್ನು ಉದ್ದಿಮೆ ರೀತಿಯಾಗಿ ಮಾಡುತ್ತಾರೆ. ನಮ್ಮದು ಕೃಷಿ ಉತ್ಪಾದನೆ ಬೇರೆ ಜಾಸ್ತಿಯಾಗುತ್ತದೆ, ಅವರದು ಕಡಿಮೆಯಾಗುತ್ತದೆ, ಕೊಳ್ಳುವವರು ಏನೂ ನೋಡುವುದಿಲ್ಲ. ಇವತ್ತು ಹೊರದೇಶದ ರೈತರು ಕಡಿಮೆ ಬೆಲೆಯಲ್ಲಿ ತಂದು ನಮ್ಮಲ್ಲಿ ಮಾರಿದರೆಂದರೆ ನಮ್ಮಲ್ಲಿರುವ ಅಕ್ಕಿಗೆ ೨೦ ರೂಪಾಯಿ ಕೊಟ್ಟು ಯಾರು ತೆಗೆದುಕೊಳ್ಳುವುದಿಲ್ಲ, ೧೮ ರೂಪಾಯಿಗಳ ಬೆಲೆ ಕೊಟ್ಟು ಸಕ್ಕರೆಯನ್ನು ಯಾರು ತೆಗೆದುಕೊಳ್ಳುವುದಿಲ್ಲ, ನಾವು ಬೆಳೆದಂತಹ ಹಸಿರನ್ನು ಯಾರು ಪರ್ಚೇಸ್ ಮಾಡುವುದಿಲ್ಲ, ಬೇಳೆಕಾಳು ಯಾರು ಪರ್ಚೇಸ್ ಮಾಡುವುದಿಲ್ಲ, ಇದರಿಂದ ಇಡೀ ಕೃಷಿಯನ್ನು ಅವಲಂಬಿಸಿರತಕ್ಕಂಥ ರೈತರು, ಕೃಷಿ ಕಾರ್ಮಿಕರು ತೊಂದರೆಯಲ್ಲಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ತಾವು ಯಾರಿಗೆ ಹೇಳುತ್ತಿದ್ದೀರಿ.

ಶ್ರೀ ಗೋವಿಂದ ಎಂ. ಕಾರ್ಜೋಳ : ಅಧ್ಯಕ್ಷರು ಕರೆದರು.

ಅಧ್ಯಕ್ಷರು : ನನಗೆ ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಯಾರಿದ್ದಾರೆ, ಸುಮ್ಮನೆ ಈ ನಾಟಕೀಯ ಬೇಡ, ಮಂಜುನಾಥ ನೀವು ಮಾತನಾಡಬಾರದು, ಬರೆದುಕೊಳ್ಳುವುದಕ್ಕೆ ಇಬ್ಬರು ಗುಮಾಸ್ತರನ್ನು ಇಟ್ಟು ಬಿಡೋಣ ಬರೆದುಕೊಳ್ಳಲಿ, ಇದೇನು ಇದಕ್ಕೆ ಬೆಲೆ ಬೇಡವೆ, ನಿಮಗೆ ಎಷ್ಟು ಸಾರಿ ಹೇಳುವುದು ನೀವು ಆಳುವ ಪಕ್ಷ ಸಮ್ಮಿಶ್ರ ಸರ್ಕಾರ ಈ ದೇಶದಲ್ಲಿ ಏನೆಂದು ಹೇಳುತ್ತೀರಿ? ಇದಕ್ಕೇನು ಬೆಲೆ, ಗೌರವ ಬೇಡವೆ, ಏನು ಇದು ಸದನವೇ? ಸದನ ನಡೆಯುವ ರೀತಿಯೇ? ಕರೆದುಕೊಂಡು ಬರುತ್ತೀರ, ಕರೆದುಕೊಂಡ ಬರುವವರೆಗೆ ಇವರು ಮಾತನಾಡುವುದು ಬೇಡವೇ?

ಶ್ರೀ ಆರ್. ಧ್ರುವನಾರಾಯಣ : ಇಲ್ಲಿ ವಿರೋಧಪಕ್ಷದ ಕಡೆಯೆ ಭಾರಿ ಖಾಲಿ ಇದೆ.

ಮಾನ್ಯ ಸದಸ್ಯರೊಬ್ಬರು : ಮೂರು ಜನ ಸಚಿವಸಂಪುಟ ದರ್ಜೆಯ ಸಚಿವರಿದ್ದಾರೆ, ನಾವಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇದೇನಿದು, ನಾಚಿಕೆ ಇಲ್ಲ, ಮಾನ ಮರ್ಯಾದೆ, ಗೌರವವಿಲ್ಲ, ಏನು ಇದು ಸದನವೇ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದು ತೀರ ಅವಹೇಳನ.

ಶ್ರೀ ಜಿ.ಟಿ.ದೇವೇಗೌಡರು : ಅಧ್ಯಕ್ಷರೆ, ಹಿರಿಯ ನಾಯಕರು ಈ ರೀತಿಯ ಪದವನ್ನು ಬಳಸಬಾರದು.

ಅಧ್ಯಕ್ಷರು : ನಾಗರಾಜ್‌ರವರೆ, ಬರುತ್ತಿದ್ದಾರೆ, ಅವರು ಮಾತನಾಡುತ್ತಿದ್ದಾರೆ, ಅವರು ಯಾರಿಗೆ ಹೇಳುತ್ತಿದ್ದಾರೆಂದರೆ, ನನಗೆ ಹೇಳುತ್ತಿದ್ದಾರೆ, ಕುಳಿತುಕೊಳ್ಳಿ....

ಶ್ರೀ ವಾಟಾಳ್ ನಾಗರಾಜ್: ಮುಖ್ಯಮಂತ್ರಿಗಳು ಕುರ್ಚಿ ಖಾಲಿ, ಉಪ ಮುಖ್ಯಮಂತ್ರಿಗಳು ಕುರ್ಚಿ ಖಾಲಿ, ಖರ್ಗೆಯವರ ಖಾಲಿ, ಪ್ರಕಾಶ್‌ರವರ ಖಾಲಿ, ಇದೇನು ಸದನ, ಗೌರವ ಬರತಕ್ಕಂಥದೆ ನಾವು ಖಂಡಿತಾ ಕುಳಿತುಕೊಳ್ಳುತ್ತೇವೆ ಏನಿದು ಗಾಂಭೀರ್ಯ ಇದು ಕಪ್ಪುದಿನ, ಕರಾಳದಿನ, ಒಳ್ಳೆಯ ಸೂಚನೆಯಲ್ಲ, ಮಂಜುನಾಥ್‌ರವರು ತಾವು ಹೇಳಬಾರದು, ಉಪಾಧ್ಯಕ್ಷರಾಗಿದ್ದವರು, ಈ ಸದನವನ್ನು ನೋಡಿದವರು, ತಾಂತ್ರಿಕತೆಯ ಮೇಲೆ ಈ ಸದನವನ್ನು ನಡೆಸತಕ್ಕಂಥದ್ದಲ್ಲ....

(ಗೊಂದಲ)

ಅಧ್ಯಕ್ಷರು : ಉಪ ಮುಖ್ಯಮಂತ್ರಿಗಳು ಬಂದರು, ನಾಗರಾಜ್‌ರವರು ಕುಳಿತುಕೊಳ್ಳಿ.

ಶ್ರೀ ವಾಟಾಳ್‌ನಾಗರಾಜ್ : ತಾಂತ್ರಿಕವಾಗಿ ಮಾತನಾಡುವುದಾದರೆ ಸಾಕು ಬೇಡ, ತಾವು ಸಮ್ಮಿಶ್ರ ಸರ್ಕಾರ ನಡೆಸುತ್ತಿದ್ದೀರಿ, ಎಲ್ಲಿ?

Sri Siddaramaiah : They have raised a valid objection. Most sustainable objection you have raised.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಉಪ ಮುಖ್ಯಮಂತ್ರಿಗಳು ಹೇಳುವುದು ಹೇಗಿದೆ ಎಂದರೆ, ಆಪರೇಷನ್ ಸಕ್ಸಸ್, ಪೇಷೆಂಟ್ ಡೈಡ್, ನಮ್ಮ ವ್ಯಾಲಿಡ್ ಸಜೆಷನ್ ಎಂದು ಹೇಳುತ್ತೀರಿ.

ಶ್ರೀ ಸಿದ್ದರಾಮಯ್ಯ : ಉತ್ತರ ಕೊಡುವವರು ಯಾರ್ರೀ ಬಜೆಟಿಗೆ ? ನಾನೇ ಅಲ್ಲವೆ? ಕೂತಿದ್ದೇನಲ್ಲ, ಕೂತುಕೊಳ್ಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ತಾಂತ್ರಿಕವಾಗಿ ಮಾತನಾಡುವುದರಿಂದ ಪ್ರಯೋಜನವಿಲ್ಲ, ಸದನದ ಪರಿಸ್ಥಿತಿಯನ್ನು ದಯವಿಟ್ಟು ಗಂಭೀರವಾಗಿ ಆಲೋಚನೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಸಚಿವರು ಆ ಸದನದಲ್ಲೂ ಇಲ್ಲ, ಸಚಿವರು ಎಲ್ಲಿ ಹೋಗಿದ್ದಾರೆ?

ಶ್ರೀ ಜಿ.ಟಿ.ದೇವೇಗೌಡ : ವಾಟಾಳ್ ನಾಗರಾಜರು ಬಹಳ ಗಡಿನಾಡಿಗೆಲ್ಲ ಹೋರಾಟ ಮಾಡಿರುವವರು, ಅವರ ಬಗ್ಗೆ ಗೌರವ ಇದೆ. ಆದರೆ ಅವರು ಬಳಸುವ ಭಾಷೆ ಸದನದ ಒಳಗಡೆ ಯುವಕರು ಕಲಿಯಬೇಕು ಅಂತ ಹೇಳುತ್ತಿದ್ದರು. ಆವತ್ತು ಇದು ಸ್ಮಶಾನ ಅಂತ ಹೇಳಿದರು. ಇವತ್ತು ಹೇಳುತ್ತಾರೆ, ಮಾನ ಮರ್ಯಾದೆ ಇಲ್ಲ ಅಂತ ಇಂತಹ ಪದಗಳನ್ನು ಬಳಸುವುದು ಅತ್ಯಂತ ಖಂಡನೀಯ. ಯಾವುದೇ ಕಾರಣಕ್ಕೂ ಇದು ಕೂಡದು. ಮಾನಪಮಾನ ಇವರಿಗಿಲ್ಲವೋ ಮಾತನಾಡುವವರಿಗಿಲ್ಲವೋ ಸ್ಪಷ್ಟವಾಗಬೇಕು ಅಧ್ಯಕ್ಷರೇ. ಮಾನಮರ್‍ಯಾದೆ ಪದ ಬಳಸಿದವರಿಗೇ ಮಾನ ಮರ್ಯಾದೆ ಇಲ್ಲ, ಇದು ಖಂಡನೀಯ. ಸದನದೊಳಗೆ ಈ ರೀತಿ ಮಾತನಾಡಕೂಡದು. ಅಧ್ಯಕ್ಷರು ನಿರ್ದೇಶನ ನೀಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ ಮರ್ಯಾದೆ ಗೌರವ ನಿಜಕ್ಕೂ ಈ ಸದನಕ್ಕೆ

ಕೊಡಬೇಕು. ಅದ್ಯಾವುದೂ ಇಲ್ಲ ಅಂತ ಮತ್ತೊಮ್ಮೆ ಮತ್ತೊಮ್ಮೆ ಸಾರುತ್ತೇನೆ.

ಅಧ್ಯಕ್ಷರು : ಇವೆಲ್ಲ ಅಡ್ಡಮಾತುಗಳು ಜಾಸ್ತಿಯಾಗಿ ಹೋಯಿತು.

ಡಾ॥ ಕೆ. ಅನ್ನದಾನಿ (ಮಳವಳ್ಳಿ) : ಅಧ್ಯಕ್ಷರೇ ಅವರು ರಾಜ್ಯದ ಅತ್ಯುತ್ತಮ ಕನ್ನಡಪರ ಹೋರಾಟಗಾರರು. ಅವರಿಗೆ ಈ ರಾಜ್ಯದಲ್ಲಿ ಒಳ್ಳೆಯ ಗೌರವ ಇದೆ. ಸದನದೊಳಗೆ ಅವರೇನಾದರೂ ಮಾತನಾಡುತ್ತಿದ್ದಾರೆ ಅಂದರೆ ಪತ್ರಿಕೆಗಳು ಸಚಿವರು ಆಡಳಿತವರ್ಗದವರು ವಿರೋಧಪಕ್ಷದವರು ಎಲ್ಲರೂ ಕೂಡ ಕನ್ನಡದ ಪರವಾಗಿ ಕನ್ನಡನಾಡಿನ ಬಗ್ಗೆ ಕನ್ನಡ ಜಲ ಭಾಷೆ ಬಗ್ಗೆ ಸಂಪೂರ್ಣ ಹೋರಾಟ ಮಾಡುತ್ತಾರೆ ಅಂತ ನಾವು ಕೂಡ ಒಂದೊಂದು ಬಾರಿ ಅವರಿಗೆ ಸಂಪೂರ್ಣ ಸಹಕಾರ ಕೊಡುತ್ತೇವೆ. ಆದರೆ ಆಡಳಿತ ಪಕ್ಷದವರನ್ನು ಉದ್ದೇಶಿಸಿ ಅವರು ಬಳಸುವ ಭಾಷೆ ಅವರು ನಡೆದುಕೊಳ್ಳುವ ರೀತಿ ಇವ್ಯಾವೂ ಸರಿಯಿಲ್ಲ ಎಂದು ಈ ಸದನದಲ್ಲಿ ಹೇಳಲು ಇಚ್ಛಿಪಡುತ್ತೇನೆ. ಇನ್ನೊಂದು ಬಾರಿ ಈ ರೀತಿ ಪದಗಳನ್ನು ಬಳಸಿದರೆ ಖಂಡಿತವಾಗಿ ನಾವು ಇದನ್ನು ಖಂಡಿಸುತ್ತೇವೆ ಹಿರಿಯರಿರಬಹುದು, ಆದರೆ ಯಾವುದೇ ವಿಚಾರದಲ್ಲಿ ನಾವು ಯಾರಿಗಿಂತಲೂ ಕಡಿಮೆ ಇಲ್ಲ, ಮಾನ ಮರ್ಯಾದೆ ಅನ್ನುವ ಪದವನ್ನು ನಾನೊಬ್ಬ ಕನ್ನಡದ ವಿದ್ಯಾರ್ಥಿಯಾಗಿ ಹೇಳುತ್ತಿದ್ದೇನೆ. ಕನ್ನಡದ ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಯಾಗಿ ಮಾತನಾಡುತ್ತಿದ್ದೇನೆ. ಆ ಪದವನ್ನು ಸದನದಲ್ಲಿ ಒಬ್ಬ ಕನ್ನಡ ಹೋರಾಟಗಾರರಾಗಿ ಹಿರಿಯ ಮುಖಂಡರಾಗಿ ಬಳಸುವುದು ಸರಿಯಲ್ಲ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ ನೋಡಿ, ಅವರ ಅಭಿಪ್ರಾಯ ಹೇಳಿಕೊಳ್ಳಲಿ, ಅವರಿಗೂ ಹಕ್ಕಿದೆ, ಆದರೆ ಇನ್ನೊಬ್ಬ ಸದಸ್ಯರ ಬಗ್ಗೆ ಬೆದರಿಕೆ ಹಾಕುವುದನ್ನು ಸದನ ಎಂದೂ ಒಪ್ಪಲಿಕ್ಕೆ ಸಾಧ್ಯವಿಲ್ಲ, ಅವರು ಮಾತನಾಡುವುದು ಸರಿಯಿಲ್ಲವೆಂದುಬೇಕಾದರೆ ಹೇಳಲಿ.

- ಗದ್ದಲ -

ಅಧ್ಯಕ್ಷರು : ಕೂತುಕೊಳ್ರಿ ಎಲ್ಲರೂ, ಕಾರ್ಜೋಳರೇ ಮಾತನಾಡಿ ನೀವು, ಎಷ್ಟು ಸಾರಿ ಹೇಳಿದ್ರೂನೂ ಅತಿಯಾಗಿ ಹೋಯ್ತು ನಿಮ್ಮದಲ್ಲ, ಕಾರ್ಜೋಳರೇ ಮಾತನಾಡಿ.

ಶ್ರೀ ಗೋವಿಂದ ಕಾರ್ಜೋಳ : ಅಧ್ಯಕ್ಷರೇ ವಿರೋಧ ಪಕ್ಷದ ಸದಸ್ಯರು ಯಾಕೆ ಮಧ್ಯೆ ಬಾಯಿ ಹಾಕುತ್ತಾರೋ ಗೊತ್ತಿಲ್ಲ, ಕ್ಷಮಿಸಿ. ಆಡಳಿತ ಪಕ್ಷದ ಸದಸ್ಯರು, ಏಕೆಂದರೆ ಆಡಳಿತ ಪಕ್ಷದ ಸದಸ್ಯರಲ್ಲಿ ಮೊದಲನೇ ಸಲ ಬಂದವರು ಬಹಳ ಜನರಿದ್ದೀರಿ, ನಾವು ಏನು ಮಾತನಾಡುತ್ತಿದ್ದೇವೆ ಯಾವ ಶೈಲಿಯಲ್ಲಿ ಮಾತನಾಡುತ್ತಿದ್ದೇವೆ ಅದಕ್ಕೆ ಸಂಬಂಧಪಟ್ಟ ಸಚಿವರು ಈ ಸದನದಲ್ಲಿರಬೇಕು ವಾಟಾಳ್ ನಾಗರಾಜ್ ಸಲಹೆ ಮಾಡಿದರು. ಅದಕ್ಕಾಗಿ ಎದ್ದು ನಿಂತುಕೊಳ್ಳುವಂತಹದು ಏನೂ ಇಲ್ಲ, ಅವರು

ನಿಮಗೇನೂ ಗುಂಡು ಹಾಕಿಲ್ಲ. ಅಧ್ಯಕ್ಷರೇ ಈ ದೇಶದಲ್ಲಿ ಒಕ್ಕಲುತನ ಕೇವಲ ಹೊಟ್ಟೆಪಾಡಿಗಾಗಿ ಮಾಡುವ ಒಂದು ವೃತ್ತಿ ಅಂತ ಇರುವುದರಿಂದ ಬೇರೆಬೇರೆ ದೇಶಗಳಲ್ಲಿ ಇವತ್ತೇನು ವಿಶ್ವ ವ್ಯಾಪಾರ ಒಪ್ಪಂದದ ಹಿನ್ನೆಲೆಯಲ್ಲಿ ಬೆಳೆದದ್ದನ್ನು ಈ ದೇಶದೊಳಗೆ ತಂದು ಮಾರಿದರೆ ಕಡಿಮೆ ಬೆಲೆಗೆ ಮಾರಿದರೆ ನಮ್ಮ ಒಕ್ಕಲುತನ ಸಂಪೂರ್ಣವಾಗಿ ನಾಶವಾಗಿ ಹೋಗುತ್ತದೆ. ಅದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಾಗಿದೆ. ಅದರ ಬಗ್ಗೆ ಮುಂದಾಲೋಚನೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿತ್ತು. ನಮ್ಮ ರೈತರನ್ನು ಈ ಸವಾಲಿನಿಂದ ಯಾವರೀತಿಯಾಗಿ ನಾವು ಬದುಕಿಸಬೇಕು ಅನ್ನುವುದು ಬಹಳ ಮುಖ್ಯವಾದ ವಿಷಯವಿದೆ. ಅದು ಈ ಬಜೆಟ್‌ನಲ್ಲಿ ಬರಬೇಕಾಗಿತ್ತು. ಆದರೆ ನಾವು ಬರೀ ರಾಜಕೀಯ ಮಾಡುವುದಕ್ಕೆ ಹೋಗಿ ವೋಟಿನ ರಾಜಕಾರಣ ಮಾಡಲು ಹೋಗಿ ಸಣ್ಣಪುಟ್ಟ ಸವಲತ್ತುಗಳನ್ನು ಕೊಟ್ಟು ನಾವು ಒಳ್ಳೆಯ ಕೆಲಸ ಮಾಡಿದ್ದೇವೆ ಅಂದರೆ ಇದು ಉಪಯೋಗವಾಗುವುದಿಲ್ಲ. ಏಕೆಂದರೆ ಶಾಶ್ವತವಾಗಿ ನಾವು ಇವತ್ತು ರೈತರನ್ನು ಬಲಾಢ್ಯರನ್ನಾಗಿ ಮಾಡಬೇಕಾಗುತ್ತದೆ. ವಿಶ್ವದ ಎಲ್ಲ ದೇಶಗಳಲ್ಲಿ ಬೆಳೆದಿರುವ ಕೃಷಿ ಉತ್ಪನ್ನಗಳನ್ನು ಈ ದೇಶದಲ್ಲಿ ಮಾರಾಟ ಮಾಡಿದಾಗ ಆಗಿನ ಸ್ಪರ್ಧೆಯಲ್ಲಿ ಮಾರಾಟ ಮಾಡುವ ಶಕ್ತಿಯನ್ನು ನಮ್ಮ ರೈತರಿಗೆ ತುಂಬಿಸಬೇಕಾಗುತ್ತದೆ. ಆದರೆ ಇದರ ಬಗ್ಗೆ ಸರ್ಕಾರ ಎಳ್ಳಷ್ಟೂ ಕಾಳಜಿ ಮಾಡಿಲ್ಲ. ಇವತ್ತು ಬಿಜಾಪುರ ಜಿಲ್ಲೆಯಲ್ಲಿ ದ್ರಾಕ್ಷಿ ಬೆಳೆಯುವವರು ಬಹಳ ಜನರಿದ್ದಾರೆ, ಅಲ್ಲಿ ದ್ರಾಕ್ಷಿ ಮುಖ್ಯ ಬೆಳೆ ಇವತ್ತು. ಅವರ ಸಲುವಾಗಿ ಬಜೆಟ್‌ನಲ್ಲಿ ಏನಾದರೂ ಪ್ರಾವಿಜನ್ ಮಾಡಬೇಕಾಗಿತ್ತು. ಅವರಿಗೆ ಸಬ್ಸಿಡಿ ಕೊಡುವುದಾಗಲಿ ಅಥವಾ ಒಣದ್ರಾಕ್ಷಿ ಮಾಡುವವರಿಗೆ ಸವಲತ್ತು ಕೊಡುವುದಾಗಲಿ ಯಾವುದನ್ನೂ ಸರ್ಕಾರ ಇಲ್ಲಿ ಮಾಡಿಲ್ಲ. ಕೋಲ್ಡ್ ಸ್ಟೋರೇಜನ್ನು ಮಾಡಲಿಲ್ಲ. ನೂರು ಪರ್ಸೆಂಟ್ ಹನಿ ನೀರಾವರಿ ಸಬ್ಸಿಡಿ ಕೊಟ್ಟಿರಬಹುದು ಆದರೆ ನೀರೇ ಇಲ್ಲ ಎಲ್ಲಿ ಡ್ರಿಪ್ ಇರಿಗೇಟ್ ಮಾಡುವುದು? ನೀರು ಎಲ್ಲಿಂದ ತರುವುದು? ಪ್ರತಿ ಎಕರೆ ಮೇಲೆ ತಲಾ ಒಂದೂವರೆ ಲಕ್ಷ ರೂ ಸಾಲ ಮಾಡಿದ್ದಾನೆ ರೈತ ನೀರಿಲ್ಲ. ನೀರಿಲ್ಲದೆ ಇವತ್ತು ಜನ ಕಷ್ಟದಲ್ಲಿದ್ದಾರೆ. ಇವತ್ತು ಆಲಮಟ್ಟಿ ಡ್ಯಾಂನಲ್ಲಿ ಸಾಕಷ್ಟು ನೀರಿದೆ. ಏತ ನೀರಾವರಿ ಮಾಡಿಕೊಡುವುದಕ್ಕಾಗಿ ಬಜೆಟ್‌ನಲ್ಲಿ ಹಣ ಇಡಬೇಕಾಗಿತ್ತು. ದ್ರಾಕ್ಷಿ ಬೆಳೆಯುವ ರೈತರಿಗೂ ಕಡಿಮೆ ಬಡ್ಡಿಯಲ್ಲಿ ಸಾಲ ಕೊಡಬೇಕಾಗಿತ್ತು. ಅದ್ಯಾವುದೂ ಇವತ್ತು ಆಗಿಲ್ಲ. ಸರ್ಕಾರ ಡಿಸೆಂಬರ್ ೨೦೦೩ರಲ್ಲಿ ಹೇಳಿತು, ಬಿಜಾಪುರ ಜಿಲ್ಲೆಯವರಿಗೆ ಎರಡೂವರೆ ಕೋಟಿ ರೂಗಳ ಒಂದು ಪ್ಯಾಕೇಜ್ ಕೊಡುತ್ತೇವೆ ಅಂತ, ಅದು ಇವತ್ತಿಗೂ ಆಗಲಿಲ್ಲ. ಹಣಕಾಸಿನ ಸಚಿವರೆ ಹೇಳಿ ಯಾಕೆ ಆಗಲಿಲ್ಲ ಅಂತ. ಇವತ್ತು ದ್ರಾಕ್ಷಿ ಬೆಳೆಗಾರರ ಬಗ್ಗೆಯೂ ಸರ್ಕಾರ ಸಾಕಷ್ಟು ಕಾಳಜಿ ಮಾಡಬೇಕಾಗಿದೆ. ಕಾಳಜಿ ಮಾಡಿಲ್ಲ, ಇವತ್ತು ಕಬ್ಬು ಬೆಳೆಯುವ

ರೈತರು, ಕಬ್ಬು ಬಹಳ ಪ್ರಮುಖವಾದ ಬೆಳೆ ದೇಶದಲ್ಲಿ. ರೈತರಿಗೆ ಯಾವುದಾದರೂ ಆರ್ಥಿಕ ಬೆಳೆ ಇದ್ದರೆ ಅದು ಕಬ್ಬು ಬೆಳೆಯುವುದೊಂದೇ. ಇವತ್ತು ನಮ್ಮ ದೇಶದಲ್ಲಿ ೫೫೩ ಸಕ್ಕರೆ ಕಾರ್ಖಾನೆಗಳು ಪ್ರತಿವರ್ಷ ಸುಮಾರು ಎರಡು ನೂರು ಲಕ್ಷ ಟನ್ ಕಬ್ಬು ಅರೆಯುತ್ತವೆ. ಜಗತ್ತಿನ ಒಟ್ಟು ಸಕ್ಕರೆ ಉತ್ಪಾದನೆಯಲ್ಲಿ ಶೇಕಡ ೧೫ರಷ್ಟು ನಮ್ಮ ದೇಶದಿಂದಲೇ ಆಗುತ್ತದೆ. ಸಕ್ಕರೆ ಉತ್ಪಾದನೆಯಲ್ಲಿ ವಿಶ್ವದಲ್ಲಿ ಎರಡನೇ ನಂಬರ್‌ದಲ್ಲಿದ್ದೇವೆ. ಅಂತಹ ಒಂದು ಇಂಡಸ್ಟ್ರಿ ಇವತ್ತು ಸಂಕಷ್ಟದಲ್ಲಿ ಸಿಕ್ಕಿಕೊಂಡಿದೆ. ಕಳೆದ ನಾಲ್ಕು ವರ್ಷದಿಂದ ಮಳೆಯಿಲ್ಲ ಬೆಳೆಯಿಲ್ಲ ಕಬ್ಬು ಹೆಚ್ಚು ಬೆಳೆಯುತ್ತಾ ಇಲ್ಲ, ರೈತರು ತೊಂದರೆಗೊಳಗಾಗಿದ್ದಾರೆ. ಅದರ ಬಗ್ಗೆ ಸರ್ಕಾರ ಏನಾದರೂ ಒಂದು ವಿಶೇಷವಾದ ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿತ್ತು. ಆದರೆ ಅದರ ಬಗ್ಗೆ ಏನು ಚಿಂತನೆ ಮಾಡಬೇಕಾಗಿತ್ತು. ಸಕ್ಕರೆ ಉದ್ದಿಮೆ ಈ ರೀತಿ ಅಲಕ್ಷ್ಯ ಮಾಡುವಂತಹದ್ದಲ್ಲ. ಸರ್ಕಾರಕ್ಕೆ ಸುಮಾರು ೧೫ ನೂರು ಕೋಟಿ ಆದಾಯ ಬರುತ್ತದೆ ಇದರಿಂದ. ಡೈರೆಕ್ಟ್ ಮತ್ತು ಇನ್‌ಡೈರೆಕ್ಟ್ ಎರಡೂ ಸೇರಿ ಕೋಟ್ಯಾಂತರ ಜನ ಇವತ್ತು ಬದುಕುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡಬೇಕು. ಇವತ್ತು ಎಲ್ಲಾ ಸಕ್ಕರೆ ಕಾರ್ಖಾನೆಗಳು ರಾಜ್ಯದಲ್ಲಿರತಕ್ಕಂಥ ಒಂದೋ ಎರಡೋ ಬಿಟ್ಟರೆ ಎಲ್ಲಾ ಸಕ್ಕರೆ ಕಾರ್ಖಾನೆಗಳು ಇವತ್ತು ಸಂಕಷ್ಟದಲ್ಲಿವೆ. ಅವರ ನೆರವಿಗೆ ಬರಬೇಕಲ್ಲ ಮಾನ್ಯ ಅಧ್ಯಕ್ಷರೇ. ಕೇಂದ್ರ ಸರ್ಕಾರದವರು ಇವತ್ತು ಷುಗರ್‌ಬಾಂಡನ್ನು ರಿಲೀಸ್ ಮಾಡುವುದಕ್ಕೆ ಎಲ್ಲಾ ರಾಜ್ಯಗಳಿಗೆ ಆದೇಶ ಮಾಡಿದ್ದಾರೆ. ನಮ್ಮ ನೆರೆಯ ರಾಜ್ಯದ ಮಹಾರಾಷ್ಟ್ರದಲ್ಲಿ ಇವತ್ತು ಸುಮಾರು ೧೩೦೦ ಕೋಟಿ ರೂಪಾಯಿಗಳ ಲಾಭವನ್ನು ತೆಗೆದುಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿಯೂ ಆಗಬೇಕಲ್ಲ, ಸಕ್ಕರೆ ಬಾಂಡ್ ಬಿಡುಗಡೆ ಆಗಬೇಕು. ತೊಂದರೆಯಲ್ಲಿರುವ ಕಾರ್ಖಾನೆಗಳಿಗೆ ಒನ್ ಟೈಮ್ ಫೈನಾನ್ಶಿಯಲ್ ಅಸಿಸ್ಟೆನ್ಸ್‌ನ್ನು ಕೊಡಬೇಕು ಮತ್ತು ಈಗೇನು ಹಣವನ್ನು ತೆಗೆದುಕೊಂಡು ಬ್ಯಾಂಕಿನವರಿಗೆ ಕಟ್ಟುವುದಕ್ಕೆ ಆಗುತ್ತಿಲ್ಲ ಕಾರ್ಖಾನೆಗಳವರು, ಅದನ್ನು ದೀರ್ಘಾವಧಿ ಸಾಲವೆಂದು ಪರಿವರ್ತನೆ ಮಾಡಿ ಹತ್ತು ವರ್ಷದಲ್ಲಿ ರೀಪೇಮೆಂಟನ್ನು ಮಾಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕಾಗುತ್ತದೆ. ಇವತ್ತು ಜವಳಿ ಉದ್ಯಮಕ್ಕೆ ತಾವೇನು ಸವಲತ್ತುಗಳನ್ನು ಕೊಡುತ್ತಿದ್ದೀರಿ. ಆ ಎಲ್ಲಾ ಸವಲತ್ತುಗಳನ್ನು ಸಕ್ಕರೆ ಉದ್ಯಮಕ್ಕೆ ಕೊಡಬೇಕಾಗುತ್ತದೆ. ಸಕ್ಕರೆ ಉದ್ಯಮ ಉಳಿಯಬೇಕೆಂದರೆ ರೈತ ಬದುಕಬೇಕೆಂದರೆ ತಾವು ಕೊಡಬೇಕಾಗುತ್ತದೆ. ಅದರ ಬಗ್ಗೆ ಕೂಡ ತಾವೇನು ಮಾಡಿಲ್ಲ, ಇವತ್ತು ಕೇಂದ್ರಸರ್ಕಾರದಿಂದ ಸುಮಾರು ೪೭ ಕೋಟಿ ರೂಪಾಯಿಗಳು ಎಕ್ಸ್‌ಪೋರ್ಟ್ ಸಬ್ಸಿಡಿ ಬರಬೇಕು. ಅದನ್ನು ಬಿಡುಗಡೆ ಮಾಡಿಸುವುದಕ್ಕೆ ಇವತ್ತಿನವರೆಗೂ ಸರ್ಕಾರದ ಪ್ರಯತ್ನ ಇಲ್ಲ ಮತ್ತು ಕಬ್ಬು ಬೆಳೆಗಾರರಿಗೆ ಪ್ರೋತ್ಸಾಹಧನವನ್ನು ಕೊಡಬೇಕಾಗುತ್ತದೆ. ಪ್ರತಿ ವರ್ಷ ೧೫ ರೂಪಾಯಿಗಳನ್ನು ಪ್ರತಿ ಟನ್‌ಗೆ ಕೊಡುತ್ತಾರೆ. ಇವತ್ತೂ ಅದೂ ಬಿಡುಗಡೆ ಮಾಡುವುದಕ್ಕೆ ಸರ್ಕಾರ ಏನು

ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ, ಬಿಡುಗಡೆ ಮಾಡಿಲ್ಲ. ಬಫರ್ ಸ್ಟಾಕ್‌ನಲ್ಲಿ ಇವತ್ತು ೧೫ ಕೋಟಿ ನಿರ್ವಹಣ ವೆಚ್ಚವನ್ನು ಕೊಡಬೇಕಾಗಿದೆ. ಬಡ್ಡಿ ಮತ್ತು ನಿರ್ವಹಣಾ ವೆಚ್ಚ ಅದನ್ನು ಕೂಡ ಕಾರ್ಖಾನೆಗಳಿಗೆ ಸರ್ಕಾರ ಬಿಡುಗಡೆ ಮಾಡಿಲ್ಲ. ಯಾವ ರೀತಿಯಾಗಿ ಈ ಕಾರ್ಖಾನೆಗಳು ಉಳಿಯುವುದಕ್ಕೆ ಸಾಧ್ಯ ಇದೆ? ರೈತರು ಬದುಕುವುದಕ್ಕೆ ಸಾಧ್ಯ ಇದೆ? ಅದಕ್ಕಾಗಿ ಇನ್‌ಸೆಂಟೀವ್ಸ್ ಏನು ಕೊಡಬೇಕಾಗಿದೆ. ಎಲ್ಲವನ್ನೂ ಕೊಟ್ಟು ಈ ಕಾರ್ಖಾನೆಗಳನ್ನು ಬದುಕಿಸುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಇವತ್ತು ಸರ್ಕಾರ ವಾಟರ್ ಸಪ್ಲೈ ವಿಚಾರದಲ್ಲಿ ಸರ್ಕಾರ ಕೊಟ್ಟಂಥ ಉತ್ತರ ಇದು. ವಾಟರ್‌ಸಪ್ಲೈ ಸೆಂಟ್ರಲ್ ಸೆಕ್ಟಾರ್‌ನಿಂದ ೧೫೬೭೧ ಲಕ್ಷ ಹಣ ಬಜೆಟ್ ಪ್ರಾವಿಷನ್‌ಗಳಲ್ಲಿ ೨೦೦೪-೦೫ರಲ್ಲಿ ಮಂಜೂರಾಗಿದೆ. ಅಮೌಂಟ್ ರಿಲೀಸ್ ಆದದ್ದು ೧೫,೫೮೪.೧೫ ಲಕ್ಷ. ಖರ್ಚಾದದ್ದು ಕೇವಲ ಫೆಬ್ರವರಿ ಎಂಡ್‌ವರೆಗೆ ಕೇವಲ ೭೮೦೩ ಲಕ್ಷ ಆಗಿದೆ. ಇವತ್ತು ಒಂದು ಕಡೆ ನೀರಿಗೆ ಹಣ ಇಲ್ಲವೆಂದು ಹೇಳುತ್ತೇವೆ. ನೀರಿಗೆ ತೊಂದರೆ ಇದೆ ಎಂದು ಹೇಳುತ್ತೇವೆ. ಸರ್ಕಾರ ಇದನ್ನು ಉಪಯೋಗ ಮಾಡಿಕೊಳ್ಳುವುದಕ್ಕಾಗುವುದಿಲ್ಲವೇ? ಇದು ಆಡಳಿತ ವ್ಯವಸ್ಥೆಯಲ್ಲಿ ಒಂದು ಬಿಗಿ ಇಲ್ಲದ ಕಾರಣಕ್ಕಾಗಿ ಇವತ್ತು ಯಾರು ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ. ಇವತ್ತು ಸ್ಟೇಟ್ ಸೆಕ್ಟಾರ್‌ನಲ್ಲಿ ಎನ್‌ಆರ್‌ಡಬ್ಲ್ಯೂಎಸ್‌ನಲ್ಲಿ ೪೬೧೮.೫೫ ಬಜೆಟ್ ಪ್ರಾವಿಷನ್‌ನನ್ನು ಮಾಡಿದ್ದೇವೆ. ಆದರೆ ಖರ್ಚು ಕೇವಲ ೩೭೧೦ ಲಕ್ಷ ಈ ರೀತಿಯಾಗಿ ನಾವು ಸಿಕ್ಕಂಥ ಹಣವನ್ನು ಉಪಯೋಗ ಮಾಡದೆ ಅಧಿಕಾರಿಗಳ ನಿರ್ಲಕ್ಷತೆಯಿಂದ ಇವತ್ತು ಲ್ಯಾಪ್ಸ್ ಆಗುತ್ತಿದೆ. ಸಮಾಜಕಲ್ಯಾಣ ಇಲಾಖೆ ಬಗ್ಗೆ ಬಡವರ ಬಗ್ಗೆ ಇವರಿಗೆ ಸಾಕಷ್ಟು ಕಾಳಜಿ ಇದೆ ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ಎಷ್ಟಾಗಿದೆ, ಬಜೆಟ್ ಪ್ರಾವಿಷನ್ ಆಗಬೇಕಾದುದು ೨೦೦೫-೦೬ ನೇ ಸಾಲಿಗೆ ಜನಸಂಖ್ಯೆ ಆಧಾರದ ಮೇಲೆ ೨೨.೭ ಪರ್‌ಸೆಂಟ್ ಜನಸಂಖ್ಯೆ ಇರತಕ್ಕಂಥವರಿಗೆ ಸುಮಾರು ೨೪೦೦ ಕೋಟಿ ರೂಪಾಯಿಗಳ ಬಜೆಟ್ ಪ್ರಾವಿಷನ್ ಆಗಬೇಕಾಗಿತ್ತು. ಕೇವಲ ೮೧೫ ಕೋಟಿ ರೂಪಾಯಿಗಳು ಮಾತ್ರ ಬಜೆಟ್ ಪ್ರಾವಿಷನ್ ಆಗಿದೆ. ಈ ರೀತಿಯಾಗಿ ಈ ಬಡವರ ಬಗ್ಗೆ ಪರಿಶಿಷ್ಟರ ಬಗ್ಗೆ ನಿಷ್ಕಾಳಜಿಯಿಂದ ಕೆಲಸವನ್ನು ಮಾಡಿದರೆ ಈ ದೇಶದಲ್ಲಿರುವ ಬಡವರು ಉದ್ಧಾರವಾಗಲಿಕ್ಕೆ ಸಾಧ್ಯವಿಲ್ಲ ಮಾನ್ಯ ಅಧ್ಯಕ್ಷರೇ. ಇವತ್ತು ಮುಸಲ್ಮಾನರ ಬಗ್ಗೆ ಈ ರಾಜ್ಯದಲ್ಲಿ ಸುಮಾರು ೫೨ ಲಕ್ಷ ಜನ ಮುಸಲ್ಮಾನರಿದ್ದಾರೆ, ಈ ಮುಸಲ್ಮಾನರ ಸಲುವಾಗಿಯೇ ಒಂದು ಇಲಾಖೆ ಇದೆ. ವಕ್ಫ್ ಖಾತೆ ಎಂದು. ಅದಕ್ಕೊಬ್ಬರು ಮಂತ್ರಿ ಇದ್ದಾರೆ, ಸೆಕ್ರೆಟರಿಯವರಿದ್ದಾರೆ. ಮಂತ್ರಿಗಳಿಗೆ ಮತ್ತು ಸೆಕ್ರೆಟರಿಗಳಿಗೆ ಕೊಡತಕ್ಕ ಸಂಬಳ ಮತ್ತು ಭತ್ಯೆಯಷ್ಟು ಕೂಡ ಬಜೆಟ್ ಪ್ರಾವಿಷನ್ ಆಗಿಲ್ಲ, ಕೇವಲ ೧ ಕೋಟಿ ೧೪ ಲಕ್ಷ ರೂಪಾಯಿಗಳು ಮಾತ್ರ ಬಜೆಟ್ ಪ್ರಾವಿಷನ್ ಆಗಿದೆ. ೫೨ ಲಕ್ಷ ಜನರಿಗೆ ಒಂದು ಖಾತೆ ಇದೆ. ಮಂತ್ರಿಮಂಡಲ. ಇಷ್ಟೆಲ್ಲಾ ಇಟ್ಟುಕೊಂಡು ೧ ಕೋಟಿ ೧೪ ಲಕ್ಷ ರೂಪಾಯಿಗಳನ್ನು

ಇಟ್ಟರೆ ಹೇಗೆ? ಎಷ್ಟು ಪರ್‌ಸೆಂಟಾಯಿತು? ಒಬ್ಬ ಮನುಷ್ಯನಿಗೆ ಒಂದು ವರ್ಷಕ್ಕೆ ಅವರ ಉದ್ಧಾರಕ್ಕಾಗಿ ಸರ್ಕಾರದವರು ಎರಡು ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದಾರೆ. ಮುಸಲ್ಮಾನರ ಉದ್ಧಾರಕ್ಕಾಗಿ ರಾಜ್ಯದಲ್ಲಿ ಬಜೆಟ್‌ನಲ್ಲಿ ಹಣ ಒಂದು ವರ್ಷಕ್ಕೆ ಎರಡು ರೂಪಾಯಿಗಳನ್ನು ಒಬ್ಬ ಮನುಷ್ಯನಿಗೆ ಕೊಡುತ್ತಿದ್ದಾರೆ. ಈ ರೀತಿಯಾಗಿ ಆದರೆ ಯಾರನ್ನು ಉದ್ಧಾರ ಮಾಡುವುದಕ್ಕೆ ಸಾಧ್ಯ ಇದೆ? ಮುಸಲ್ಮಾನರೆಲ್ಲರೂ ನಿಮಗೆ ದಯಮಾಡಿ ತಾವು ವಿಚಾರ ಮಾಡಬೇಕು. ತಮಗೆ ಬಹಳ ಹೆಚ್ಚು ವೋಟನ್ನು ಹಾಕಿದ್ದಾರೆ. ತಮಗೆ ಅಧಿಕಾರಕ್ಕೆ ತಂದು ಕೂಡಿಸಿದ್ದಾರೆ. ಅಂಥ ಜನರಿಗಾದರೂ ನೀವು ಕಾಳಜಿಯನ್ನು ಮಾಡಬೇಕಲ್ಲ. ಅವರಿಗೂ ಕೂಡ ಅನ್ಯಾಯ ಮಾಡಿದ್ದೀರಿ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಹೆಚ್ಚು ಹಣವನ್ನು ಕೊಟ್ಟು ಉತ್ತಮ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವರನ್ನೂ ಕೂಡ ಮುಖ್ಯವಾಹಿನಿಗೆ ತರುವ ಕೆಲಸವನ್ನು ಮಾಡಬೇಕಾಗುತ್ತದೆ. ಇವತ್ತು ಅದು ಆಗಿಲ್ಲ. ನೀರಾವರಿ ಬಗ್ಗೆ ಈ ರಾಜ್ಯದಲ್ಲಿ ಸುಮಾರು ಕೃಷ್ಣಾ ಮೇಲ್ದಂಡೆ ಯೋಜನೆ ಮತ್ತು ನೀರಾವರಿ ನಿಗಮದಿಂದ ಆಗಬೇಕಾದ ಕೆಲಸಗಳು ಇವತ್ತು ಒಂದನ್ನು ಕೂಡ ಮುಗಿಸಲಿಕ್ಕೆ ಆಗಿಲ್ಲ. ೨೦೦೦ ಮೇ ೩೧ ರೊಳಗಾಗಿ ಈ ರಾಜ್ಯದಲ್ಲಿರತಕ್ಕ ನಮ್ಮ ಎಲ್ಲಾ ನೀರಾವರಿ ಯೋಜನೆಗಳನ್ನು ಮುಗಿಸಬೇಕಾಗಿತ್ತು. ಬಚಾವತ್ ತೀರ್ಪಿನಲ್ಲಿ ಏನು ಹಂಚಿಕೆಯಾದ ನೀರು ೭೩೪ ಟಿಎಂಸಿಯಲ್ಲಿ ನಾವು ೫ ಟಿಎಂಸಿ ಯನ್ನು ಮದ್ರಾಸ್‌ಗೆ ಕುಡಿಯುವ ನೀರಿಗಾಗಿ ಬಿಟ್ಟುಕೊಟ್ಟಿದ್ದರಿಂದ ೭೨೯ ಟಿಎಂಸಿ ನೀರನ್ನು ನಾವು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಬೇಕಾಗಿತ್ತು. ಆದರೆ ಇವತ್ತು ೨೦೦೫ ಬಂದರೂ ಕೂಡ ನಾವು ಬಳಕೆ ಮಾಡಿಕೊಳ್ಳುವುದಕ್ಕೆ ಸಶಕ್ತರಾಗಿಲ್ಲ. ಇವತ್ತು ಸಾಕಷ್ಟು ಹಣ ಕೂಡ ಸರ್ಕಾರ ನೀರಾವರಿ ಯೋಜನೆಗಳಿಗೆ ಬಿಡುಗಡೆ ಮಾಡಿಲ್ಲ. ಈ ನೀರಾವರಿ ಯೋಜನೆಗಳಿಗೆ ಕೊಟ್ಟಂಥ ಹಣ ನಾಲ್ಕು ಸಾವಿರ ಕೋಟಿ. ಈ ೪ ಸಾವಿರ ಕೋಟಿಯಲ್ಲಿ ನಾವು ಈ ರಾಜ್ಯದ ಎಲ್ಲಾ ಯೋಜನೆಗಳನ್ನು ಈ ವರ್ಷ ನಾವು ಪ್ರಗತಿ ಮಾಡುವುದಕ್ಕಾಗುವುದಿಲ್ಲ. ಈ ಕೃಷ್ಣಾ ಮೇಲ್ದಂಡೆ ಯೋಜನೆ ಒಂದಕ್ಕೆ ಬಜೆಟ್‌ನಲ್ಲಿ ಸುಮಾರು ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಇಡಬೇಕಾಗುತ್ತದೆ. ಅಂದರೆ ಮಾತ್ರ ನಾವು ನಿಗದಿತ ಅವಧಿಯೊಳಗೆ ವರ್ಷೋಪ್ಪತ್ತಿನಲ್ಲಿ ಯೋಜನೆಗಳನ್ನು ಕಂಪ್ಲೀಟ್ ಮಾಡುವುದಕ್ಕೆ ಸಾಧ್ಯ ಇದೆ. ಆದರೆ ಸರ್ಕಾರ ಕೇವಲ ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿರುವುದರಿಂದ ನೀರಾವರಿಗೂ ಕೂಡ ಸರ್ಕಾರ ಆದ್ಯತೆಯನ್ನು ಕೊಟ್ಟಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈ ಬಡವರ ಬಗ್ಗೆ ಅಗ್ಗ ದರದ ಪಡಿತರ ಚೀಟಿ, ನಾವು ಈ ರಾಜ್ಯದಲ್ಲಿ ಬಡತನ ರೇಖೆಗಿಂತಲೂ ಕೆಳಗಡೆ ಇರತಕ್ಕಂಥವರ ಸಂಖ್ಯೆ ಸುಮಾರು ಒಂದು ಕೋಟಿ ಐವತ್ತು ಲಕ್ಷ ಜನರು ಇದ್ದಾರೆ ಎಂದು ನಾವೇ ಸರ್ವೆ ಮಾಡಿದ್ದೇವೆ. ಅವರಿಗೆ ಇನ್ನೂ ಕನಿಷ್ಠ ೨೫ ಲಕ್ಷ ಚೀಟಿಗಳನ್ನು ಕೊಡಬೇಕಾಗುತ್ತದೆ.

ಬಡವರಿಗೆ ಹಳದಿ ಪಡಿತರ ಚೀಟಿ. ಆದರೆ ಇವತ್ತು ನಾವು ಅವರಿಗೆ ಇನ್ನೂ ಕಡಿಮೆ ಮಾಡುವುದಕ್ಕೆ ಹೊರಟಿದ್ದೇವೆ. ಯಾರು ಹೆಚ್ಚಿಗೆ ಇಟ್ಟುಕೊಂಡಿದ್ದಾರೆ ಯಾರು ಡಬಲ್ ತೆಗೆದುಕೊಂಡಿದ್ದಾರೆ, ಅಂಥವರ ಬಗ್ಗೆ ಕಡಿಮೆ ಮಾಡುವುದಕ್ಕೆ ನಮ್ಮದು ಯಾವುದೇ ತರಹದ ಆಬ್ಜೆಕ್ಷನ್ ಇಲ್ಲ, ಆದರೆ ಬಡವರಿಗೆ ಅದರಿಂದ ಅನ್ಯಾಯವಾಗಬಾರದು. ಇವತ್ತು ಈ ಸಾರ್ವಜನಿಕ ಉದ್ಯಮಗಳ ಬಗ್ಗೆ ಸರ್ಕಾರ ಒಂದು ಕಡೆ ನಾವು ಉದ್ಯೋಗವನ್ನು ಕೊಡುತ್ತೇವೆಂದು ಹೇಳುತ್ತಾರೆ. ಇವತ್ತು ಎನ್‌ಜಿಇಎಫ್ ಮುಚ್ಚಿದ್ದೀರಿ. ಮೈಸೂರು ಲ್ಯಾಂಪ್ಸ್, ಮೈಸೂರು ಪೇಂಟ್ಸ್‌ನ್ನು ಮುಚ್ಚಿದ್ದೀರಿ. ಈ ಎಲ್ಲಾ ಕಾರ್ಖಾನೆಗಳನ್ನು ಒಂದು ಕಡೆ ಮುಚ್ಚುವುದರಿಂದ ನಿರುದ್ಯೋಗದ ಸಮಸ್ಯೆ ಪ್ರತಿವರ್ಷ ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಇವುಗಳನ್ನು ಮುಚ್ಚಿ ಮಾರಾಟ ಮಾಡುವುದರ ಬದಲಾಗಿ ಸರ್ಕಾರ ಅವುಗಳ ಪುನಃಶ್ಚೇತನಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರ ನಿಶ್ಚಿತವಾದ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ನೂರಾರು ವರ್ಷದಿಂದ ಇದ್ದಂಥ ಕಾರ್ಖಾನೆಗಳು ಅವುಗಳನ್ನು ಮುಚ್ಚುವುದರಿಂದ ಯಾರಿಗೂ ಒಳ್ಳೆಯದಾಗುವುದಿಲ್ಲ. ಅದಕ್ಕಾಗಿ ಸರ್ಕಾರ ವಿಶೇಷವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಸರ್ಕಾರಿ ಸ್ವಾಮ್ಯದ ಎಲ್ಲಾ ಕಾರ್ಖಾನೆಗಳನ್ನು ಉಳಿಸಬೇಕೆಂದು ಹೇಳಿ ನಾನು ಒತ್ತಾಯಮಾಡುತ್ತಿದ್ದೇನೆ. ಬೆಂಗಳೂರು ಸಿಟಿ ಬಗ್ಗೆ ನಾವು ಸಾಕಷ್ಟು ಸವಲತ್ತುಗಳನ್ನು ಕೊಡುತ್ತಿದ್ದೇವೆ. ಆದರೆ ಆ ಸವಲತ್ತುಗಳು ಜನರಿಗೆ ಏತಕ್ಕೆ ಮುಟ್ಟುತ್ತಿಲ್ಲ ಎಂದರೆ ಈ ಹೊರ ರಾಜ್ಯಗಳಿಂದ ಪ್ರತಿನಿತ್ಯ ಸುಮಾರು ಹತ್ತು ಸಾವಿರ ಜನರು ಉದ್ಯೋಗವನ್ನು ಹುಡುಕಿಕೊಂಡು ಇವತ್ತು ಈ ಬೆಂಗಳೂರಿಗೆ ಬರುತ್ತಿದ್ದಾರೆ. ತಮಿಳುನಾಡಿನಿಂದ ಬರುತ್ತಾರೆ. ಆಂಧ್ರದಿಂದ ಬರುತ್ತಾರೆ. ಮದ್ರಾಸ್‌ನಿಂದ ಬರುತ್ತಾರೆ. ಇದಕ್ಕೆಲ್ಲೊ ಒಂದು ಕಡೆ ಕಡಿವಾಣವನ್ನು ಹಾಕಬೇಕಾಗುತ್ತದೆ. ಬಂದವರೆಲ್ಲರಿಗೂ ಕೂಡ ಇಲ್ಲಿ ವ್ಯವಸ್ಥೆಯನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ, ಇದ್ದ ಜನರಿಗೇ ಬಹಳ ಸಂಕಷ್ಟದ ಪರಿಸ್ಥಿತಿ ಇದೆ. ಅದಕ್ಕಾಗಿ ಇವತ್ತು ಸರ್ಕಾರ ಒಂದು ನಿಶ್ಚಿತವಾದ ಒಂದು ಕಾರ್ಯಕ್ರಮವನ್ನು ರೂಪಿಸಬೇಕಾಗುತ್ತದೆ. ಈ ರೀತಿಯಾಗಿ ಬರುವವರ ಬಗ್ಗೆ ಏನಾದರೂ ಒಂದು ಕಂಟ್ರೋಲನ್ನು ಮಾಡಬೇಕಾಗುತ್ತದೆ. ಬೆಳೆ ವಿಮೆ ಬಗ್ಗೆ ಇದೇನು ಸರ್ಕಾರ ಕೊಡುತ್ತಿರುವುದು ಪುಕ್ಕಟೆ ಅಲ್ಲ.

ರೈತರು ಬೆಳೆ ವಿಮೆ ಮಾಡಿಸಿರುತ್ತಾರೆ. ಅವರು ಹಣ ತುಂಬಿರುತ್ತಾರೆ. ಇನ್‌ಶ್ಯೂರೆನ್ಸ್ ಕಂತು ಕಟ್ಟಿರುತ್ತಾರೆ. ಅಂಥವರಿಗೆ ಟೈಮ್ ಟು ಟೈಮ್ ಪ್ರತಿ ಆರು ತಿಂಗಳಿಗೆ ಒಮ್ಮೆ ಸರ್ಕಾರ ಈ ಬೆಳೆ ವಿಮೆ ಪಾವತಿ ಮಾಡತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಏಕೆಂದರೆ ಬಡವರು ಈ ಇನ್‌ಶ್ಯೂರೆನ್ಸ್ ಏನು ಕಟ್ಟಿರುತ್ತಾರೆ.

ಬಡ್ಡಿಯಿಂದ ಸಾಲವನ್ನು ತಂದು ಕಟ್ಟಿರುತ್ತಾರೆ. ಅದರ ಬಗ್ಗೆ ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ, ಹಣ ಕೊಡಬೇಕಾಗುತ್ತದೆ.

ಇವತ್ತು ರೋಡ್ಸ್ ಬಗ್ಗೆ. ರಾಜ್ಯದಲ್ಲಿ ಸುಮಾರು ೨೦೩೦ ಕೋಟಿ ರೂಪಾಯಿಗಳನ್ನು ಕೊಟ್ಟು ಒಟ್ಟು ೪೫ ಪ್ಯಾಕೇಜ್‌ಗಳನ್ನು ರೋಡ್ ರಿಪೇರಿಗೆಂದು ಮಾಡಿದ್ದೇವೆ. ಆ ರಿಪೇರಿಗೆ ೪೫ ಪ್ಯಾಕೇಜ್ ಕೆಲಸಗಳು ಯಾವ ರೀತಿಯಾಗಿ ನಡೆಯುತ್ತಿವೆ ಎನ್ನುವುದನ್ನು ನೋಡಬೇಕಲ್ಲ. ನೋಡಲಿಕ್ಕೆ ಯಾರೂ ಇಲ್ಲ. ಅವರಿಗೆ ಪ್ಯಾಕೇಜ್ ಎಂದುಕೊಟ್ಟು ಕಂಟ್ರ್ಯಾಕ್ಟರ್‌ಗಳೇ ಎಲ್ಲವನ್ನೂ ಮಾಡಿಕೊಳ್ಳುವುದು. ಕೆಲಸನೂ ಅವರೇ ಮಾಡುವುದು, ಬಿಲ್ ಅವರೇ ಬರೆದುಕೊಳ್ಳುವುದು, ಚೆಕ್ ಮೆಶರ್‌ಮೆಂಟೂ ಅವರೇ ಮಾಡುವುದು, ಕ್ವಾಲಿಟಿ ಕಂಟ್ರೋಲ್ ಅವರೇ ಮಾಡುವುದು. ಅವರ ಮೇಲೆ ಯಾರದ್ದೂ ಕಂಟ್ರೋಲ್ ಇಲ್ಲ. ಇಂತಹ ಕಳಪೆ ಮಟ್ಟದ ಕೆಲಸ ನಡೆಯುತ್ತಿದೆ. ತಮಗೆ ಉದಾಹರಣೆಗೆ ರಾಯಚೂರು ಭಾಗದ ರೋಡ್ ಬಗ್ಗೆ ಹೇಳುತ್ತೇನೆ. ೨೯೦ ಕೋಟಿ ರೂಪಾಯಿ ಕೆಲಸ. ಇವತ್ತು ಯಾರದ್ದೂ ಕಂಟ್ರೋಲ್ ಇಲ್ಲ. ಇಲಾಖೆಯವರದ್ದು, ಸರ್ಕಾರದ್ದು ಕಂಟ್ರೋಲ್ ಇಲ್ಲ. ಲೋಕಾಪುರ್-ಮುಧೋಳ್ ೧೧೮ ಕೋಟಿ ರೂಪಾಯಿ ಕೆಲಸ. ಇವತ್ತು ಯಾರದ್ದೂ ಅದರ ಮೇಲೆ ಕಂಟ್ರೋಲ್ ಇಲ್ಲ. ಈ ರೀತಿಯಾಗಿ ನಡೆದಿದೆ. ಅಲ್ಲಿ ಯಾರೂ ನೋಡುವವರೇ ಇಲ್ಲ. ಅವರು ಹೇಳುತ್ತಾರೆ. ಕಂಟ್ರಾಕ್ಟರ್‌ಗೆ ಪ್ಯಾಕೇಜ್ ಮಾಡಿ ಕೊಟ್ಟು ಬಿಟ್ಟಿದ್ದಾರೆ. ನಮ್ಮದೇನೂ ಅಧಿಕಾರ ಇಲ್ಲ ಎಂದು ಹೇಳುತ್ತಾರೆ. ನಾವು ಏನೂ ಹೇಳುವ ಹಾಗೆ ಇಲ್ಲ. ಈ ರೀತಿಯಾಗಿ ಅಧಿಕಾರಿಗಳಿಂದ ಉತ್ತರ ಬರುತ್ತದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಕ್ವಾಲಿಟಿ ಕಂಟ್ರೋಲ್ ಮಾಡಲಿಕ್ಕೆ ಆದರೂ ಮತ್ತು ಬಿಲ್‌ಗಳನ್ನು ಕೊಡಲಿಕ್ಕಾದರೂ ಸರ್ಕಾರ ಅಧಿಕಾರಿಗಳನ್ನು ನೇಮಿಸಬೇಕಾಗುತ್ತದೆ. ತಮಗೆ ಒಂದು ವಿಚಿತ್ರ ಸಂಗತಿಯನ್ನು ಹೇಳುತ್ತೇನೆ. ಹಿರಿಯೂರು ಬಳ್ಳಾರಿ ರಸ್ತೆ ಎಸ್ಟಿಮೇಟೆಡ್ ಕಾಸ್ಟ್ ೨೧೭.೮೪ ಲಕ್ಷ ರೂಪಾಯಿ. ಟೆಂಡರ್ ಆದದ್ದು ೨೬೦.೦೧. ೧೪೪ ಕಿಲೋಮೀಟರ್ ಇದರ ಪ್ರಗತಿ ಬಹಳ ಮಂದಗತಿಯಲ್ಲಿ ನಡೆದಿದೆ. ಅದೇ ರೀತಿಯಾಗಿ ಇನ್ನೊಂದು ಕೆಲಸ ೨೧೭ ಲಕ್ಷ ಇದ್ದಂತಹ ಎಸ್ಟಿಮೇಟೆಡ್ ಕಾಸ್ಟ್ ೨೬೯ ಲಕ್ಷ ಟೆಂಡರ್ ಅಮೌಂಟ್ ಆಗಿರಬೇಕಾದರೆ ಇದರಲ್ಲಿ ಎಷ್ಟೊಂದು ಅವ್ಯವಹಾರ ನಡೆದಿದೆ ಎಂದು ಎತ್ತಿ ತೋರಿಸುತ್ತದೆ. ಇನ್ನೊಂದು ಕೆಲಸ. ಮರಿಯಮ್ಮನಹಳ್ಳಿ-ಇಟಗಿ ರಸ್ತೆ, ಇವತ್ತು ೨೯.೯೭, ೩೭ ಕೋಟಿ ರೂಪಾಯಿ ಕೆಲಸ ಇದೆ. ಇದು ೧೮ ಕೋಟಿಗೆ ಟೆಂಡರ್ ಹಾಕಿದ್ದಾರೆ. ಒಂದು ಕಡೆ ಅಬ್‌ನಾರ್ಮಲ್ ಆಗುತ್ತದೆ. ಇನ್ನೊಂದು ಕಡೆ ಟೆಂಡರ್ ಬಹಳ ಕಡಿಮೆ ಆಗುತ್ತದೆ. ಅಂದರೆ ಇದರ ಅರ್ಥ ಏನು ಅಂದರೆ ಯಾರೂ ಸರಿಯಾಗಿ ನೋಡುತ್ತಿಲ್ಲ, ಎಸ್ಟಿಮೇಟ್‌ಗಳನ್ನು ಸರಿಯಾಗಿ ಮಾಡುತ್ತಿಲ್ಲ, ತಮ್ಮ ಮನಸ್ಸಿಗೆ ಬಂದ ಹಾಗೆ ಯಾರು

ಬೇಕಾದರೂ ಮಾಡುತ್ತಿದ್ದಾರೆ ಎಂದು ಇದರಿಂದ ಕಾಣಿಸುತ್ತಿದೆ. ಅದಕ್ಕಾಗಿ ಇವತ್ತು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಈ ವಿಶ್ವ ಬ್ಯಾಂಕಿನಿಂದ ನಾವೇನು ಬಡ್ಡಿಯ ಮೇಲೆ ಸಾಲ ತೆಗೆದುಕೊಂಡು ರಸ್ತೆಗಳನ್ನು ಮಾಡುತ್ತಿದ್ದೇವೆ. ಕೆ-ಶಿಪ್ ಮುಖಾಂತರ ಆಗಿರಬಹುದು. ಕೆಆರ್‌ಡಿಎಲ್ ಮುಖಾಂತರ ಆಗಿರಬಹುದು. ಅವೆಲ್ಲಕ್ಕೂ ಕೂಡ ಈ ಕ್ವಾಲಿಟಿ ಕಂಟ್ರೋಲ್ ಚೆಕ್ ಆಗಬೇಕಾಗುತ್ತದೆ ಮತ್ತು ಗುಣಮಟ್ಟ ಸರಿ ಇದೆಯೋ ಇಲ್ಲವೋ ಎಂದು ನೋಡತಕ್ಕ ಅಧಿಕಾರಿಗಳನ್ನು ನೇಮಿಸಬೇಕಾಗುತ್ತದೆ. ಇಲ್ಲದೇ ಹೋದರೆ ಇದೊಂದು ದೊಡ್ಡ ಅನಾಹುತ ಆಗುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ.

ಈ ಎಸ್.ಸಿ.:ಎಸ್‌ಟಿ ಸ್ಟೂಡೆಂಟ್ಸ್, ಕಾಲೇಜುಗಳಲ್ಲಿ ಮತ್ತು ಹೈಸ್ಕೂಲುಗಳಲ್ಲಿ ಓದುತ್ತಿದ್ದಾರೆ. ಅವರಿಗೆ ಫೀ ರೀ-ಇಂಬರ್ಸ್‌ಮೆಂಟ್ ಏನು ಇದೆ? ಟೈಮಿಗೆ ಸರಿಯಾಗಿ ಕೊಡದೇ ಇದ್ದುದರಿಂದ ಈ ಕಾಲೇಜಿನ ಆಡಳಿತ ಮಂಡಳಿಯವರು ಈ ಮಕ್ಕಳಿಗೆ ಪರೀಕ್ಷೆಗೆ ಕೂರಲು ಅಲೋ ಮಾಡುತ್ತಿಲ್ಲ. ಇವರನ್ನು ಹೊರಗೆ ಹಾಕುತ್ತಿದ್ದಾರೆ. ಆಮೇಲೆ ಅವರು ಹೇಳುತ್ತಿದ್ದಾರೆ. ಸರ್ಕಾರ ಎರಡು ವರ್ಷ, ಮೂರು ವರ್ಷ ನಮಗೆ ಹಣ ಬಿಡುಗಡೆ ಮಾಡಿಲ್ಲ. ಅದಕ್ಕಾಗಿ ನಾವು ಏನೂ ಮಾಡಲಿಕ್ಕೆ ಸಾಧ್ಯ ಆಗುವುದಿಲ್ಲ ಎಂದು ಹೇಳುತ್ತಾರೆ. ಇವತ್ತು ನಮ್ಮದೇ ಒಂದು ಮುಧೋಳ್‌ದ ಉದಾಹರಣೆಯನ್ನು ನಾನು ತಂದಿದ್ದೇನೆ. ಇವತ್ತು ಒಂದು ಲಕ್ಷ ೭ ಸಾವಿರ ಹಣ ಪ್ರೈವೇಟ್ ಸ್ಕೂಲಿಗೆ ಸರ್ಕಾರದಿಂದ ಬರಬೇಕಾಗಿದೆ. ಇವತ್ತಿಗೂ ಸಹ ಫೀ ರೀಎಂಬರ್ಸ್‌ಮೆಂಟ್ ಆಗಿಲ್ಲ. ಈ ರೀತಿ ಆದರೆ ಬಡವರ ಮಕ್ಕಳು ಶಿಕ್ಷಣ ವಂಚಿತರಾಗುತ್ತಾರೆ. ಏಕೆಂದರೆ ಒಂದು ಕಡೆ ಖಾಸಗಿ ಆಡಳಿತ ಮಂಡಳಿಯವರು ನಮಗೆ ಹಣ ಬರದ ಹೊರತು ನಿಮಗೆ ಪರೀಕ್ಷೆಗೆ ಕೂರಿಸುವುದಿಲ್ಲ, ನಿಮಗೆ ನಾವು ಅಡ್ಮಿಷನ್ ಮಾಡಿಕೊಳ್ಳುವುದಿಲ್ಲ ಎಂದು ಒಂದು ಕಡೆ ಹೇಳುತ್ತಾರೆ. ಇನ್ನೊಂದು ಕಡೆ ಸರ್ಕಾರ ನಾವು ಬಡವರ ಉದ್ಧಾರ ಮಾಡುತ್ತೇವೆ ಎಂದು ಹೇಳುತ್ತಾರೆ. ಇದರಲ್ಲಿ ಯಾರನ್ನು ನಂಬಬೇಕು? ಯಾವುದು ಸತ್ಯ?

ಶ್ರೀ ಹೆಚ್.ಡಿ.ಬಸವರಾಜ್ : ಮಾನ್ಯ ಅಧ್ಯಕ್ಷರೆ, ವಿಶ್ವವಿದ್ಯಾಲಯುದವರು ಪೇಮೆಂಟ್ ಸೀಟನ್ನು ಅವರೇ ಶುಲ್ಕ ನಿಷ್ಕರ್ಷೆ ಮಾಡಿದ್ದಾರೆ. ಎಸ್‌ಸಿ:ಎಸ್‌ಟಿಯವರಿಗೆ, ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ೨೦ ಸಾವಿರ ಆದರೆ ಎಸ್‌ಸಿ:ಎಸ್‌ಟಿ ಯವರಿಗೆ ೧೦ ಸಾವಿರ ಮಾಡಿದ್ದಾರೆ. ಕಾನೂನು ಪದವಿಗೆ ಮಾಡಿದ್ದಾರೆ. ಬೇರೆ ಎಲ್ಲಕ್ಕೂ ಕೊಡುತ್ತಿದ್ದಾರೆ. ಆದರೆ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಕಾನೂನಿನ ಪದವಿ ಪಡೆಯಬೇಕು ಎಂದಾದರೆ ಅವರ ಪೇಮೆಂಟ್ ಸೀಟನ್ನು ಈ ಸರ್ಕಾರದ ವತಿಯಿಂದ ಭರಿಸುವಂತಹ ವ್ಯವಸ್ಥೆ ಇದುವರೆಗೂ ಆಗಲಿಲ್ಲ. ಕಳೆದ ಮೂರು ವರ್ಷಗಳಿಂದ ಇದರ

ಹಿಂದೆ ಬದ್ದಿದ್ದೇವೆ ಅಧ್ಯಕ್ಷರೇ, ಈ ತರಹ ಆಯಿತು ಅಂದರೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಯಾವ ರೀತಿ ಓದುವುದಕ್ಕೆ ಸಾಧ್ಯವಾಗುತ್ತದೆ ಸಾರ್? ಹಿರಿಯರಾದಂತಹ ಮಾನ್ಯ ಮಂಜುನಾಥ್ ಅವರು ಇದ್ದಾರೆ. ತಾವು ಇಂತಹದರಲ್ಲಿ ಸಲಹೆ ಕೊಡಬೇಕು ಸಾರ್, ಪೇಮೆಂಟ್ ಸೀಟನ್ನು ನಿಷ್ಕರ್ಷೆ ಮಾಡಿದವರು ವಿಶ್ವವಿದ್ಯಾಲಯದವರು. ಅದನ್ನು ಕೂಡ ಭರಿಸುವುದಕ್ಕೆ ಆಗುವುದಿಲ್ಲ ಎಂದರೆ ಹೇಗೆ?

ಶ್ರೀ ಡಿ.ಮಂಜುನಾಥ್ (ಮಾನ್ಯ ಉನ್ನತ ಶಿಕ್ಷಣ ಸಚಿವರು) : ಎಸ್‌ಸಿ:ಎಸ್‌ಟಿನವರಿಗೆ ಕೊಡುತ್ತಿದ್ದಾರೆ. ನಿಮಗೆ ನಾನು ವೆರಿಫೈ ಮಾಡಿ ಸ್ಟಾಟಿಸ್ಟಿಕ್ಸ್ ಕೊಡುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜ್ : ಇಲ್ಲ ಇಲ್ಲ, ಮೊನ್ನೆ ಕೂಡ ಮಾನ್ಯ ಸಮಾಜ ಕಲ್ಯಾಣ ಸಚಿವರನ್ನು ಕೇಳಿದೆ. ಇನ್ನಾದರೂ ಸತ್ಯ ಹೇಳಬೇಕು ಎಂದರೆ ನನ್ನ ಮಗಳೇ ವಿಶ್ವ ವಿದ್ಯಾಲಯದಲ್ಲಿ ಓದುತ್ತಿದ್ದಾಳೆ. ಕಳೆದ ಮೂರು ವರ್ಷಗಳಿಂದ ಬರೇ ಪತ್ರ ವ್ಯವಹಾರ ಮಾಡುತ್ತಿದ್ದೇಯೆ ವಿನಹ ಇಷ್ಟು ಸತ್ಯವನ್ನು ಇನ್ನು ನಾನು ಯಾವ ರೀತಿ ಹೇಳಬೇಕೋ ಈ ಸದನದಲ್ಲಿ ಎಂದು ನನಗೆ ಗೊತ್ತಾಗುತ್ತಿಲ್ಲ. ಅವರಿಗೆ ಕಾನೂನು ಇಲ್ಲ ಎನ್ನುತ್ತಾರೆ. ಕಾನೂನು ಮಾಡುವವರು ಯಾರು? ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗೆ ರೀಇಂಬರ್ಸ್‌ಮೆಂಟ್ ಮಾಡಬೇಕು ಎಂತಾದರೆ ಕಾನೂನನ್ನು ಯಾರು ಮಾಡಬೇಕು?

ಅಧ್ಯಕ್ಷರು : ಮಾನ್ಯ ಕಾರಜೋಳ ಅವರೇ ನೀವು ಮಾತನಾಡಿ.

ಶ್ರೀ ಹೆಚ್.ಡಿ.ಬಸವರಾಜ್ : ಆ ಒಂದು ದೃಷ್ಟಿಯಲ್ಲಿ ಇದು ಅವಶ್ಯಕತೆ ಇದೆ. ದಯವಿಟ್ಟು ಇದರ ಬಗ್ಗೆ ಕೂಡ ಸರ್ಕಾರ ಗಮನ ಕೊಡಬೇಕು. ಕಾನೂನು ಪದವಿ ವಿದ್ಯಾರ್ಥಿಗಳಿಗೆ ಪೇಮೆಂಟ್ ಹಿಂತಿರುಗಿಸುವ ಪದ್ಧತಿ ಇದೆ, ಅವರಿಗೂ ಸಿಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಅಧ್ಯಕ್ಷರೆ, ವಿಶ್ವವಿದ್ಯಾನಿಲಯಗಳಲ್ಲಿ ಪಿಜಿ ಮಾಡತಕ್ಕಂಥ ಸ್ಟೂಡೆಂಟ್ಸ್ ಇದ್ದಾರೆ. ಅವರಿಗೆ ಹಾಸ್ಟೆಲ್ ಛಾರ್ಜಸ್ ಮತ್ತು ಬೋರ್ಡಿಂಗ್ ಛಾರ್ಜಸ್ ಊಟ ಮತ್ತು ವಸತಿಗಾಗಿ....

ಅಧ್ಯಕ್ಷರು : ತಮ್ಮದು ೪೫ ನಿಮಿಷ ಆಗಿ ಹೋಯಿತು.

ಶ್ರೀ ಗೋವಿಂದ ಎಂ. ಕಾರಜೋಳ : ಸಾರ್ ಮುಗಿಸುತ್ತೇನೆ. ಸರ್ಕಾರ ೩೮೭ ರೂಪಾಯಿ ಪ್ರತಿ ತಿಂಗಳು ಕೊಡುತ್ತಾರೆ. ಪಿಜಿ ಮಾಡತಕ್ಕಂಥ ವಿದ್ಯಾರ್ಥಿಗಳಿಗೆ ೩೮೭ರಲ್ಲಿ ಊಟ, ವಸತಿ ಆಗಲಿಕ್ಕೆ ಸಾಧ್ಯ ಇದೆಯಾ ಎಂದು ಆಲೋಚನೆ ಮಾಡಬೇಕಾಗುತ್ತದೆ. ಈ ಐ.ಎ.ಎಸ್ ಅಧಿಕಾರಿಗಳು ಬೆಂಗಳೂರಿನಲ್ಲಿ ಕುಳಿತು ಅವೈಜ್ಞಾನಿಕವಾದಂತಹ ರೇಟನ್ನು

ನಿಗದಿ ಮಾಡುತ್ತಾರೆ. ತಮ್ಮ ಮಕ್ಕಳಿಗೆ ಸ್ಕೂಲಿಗೆ ಸೇರಿಸಬೇಕಾದರೆ ಕಾನ್ವೆಂಟ್ ಸ್ಕೂಲಿಗೆ, ಕೆಜಿ ಸ್ಕೂಲಿಗೆ ಕಳಿಸಬೇಕಾದರೆ ೫ ಲಕ್ಷ ೪ ಲಕ್ಷ ಡೊನೇಷನ್ ಕೊಟ್ಟು ಬೆಂಗಳೂರಿನಲ್ಲಿ ಸೇರಿಸುತ್ತಾರೆ. ಬಡವರ ಮಕ್ಕಳು, ಪಿಜಿ ಮಾಡತಕ್ಕವರು. ದೊಡ್ಡವರು, ವಯಸ್ಸಿಗೆ ಬಂದವರು ಅವರಿಗೆ ಊಟ, ವಸತಿಗೆ ೩೮೭ ರೂಪಾಯಿ ಕೊಡುತ್ತಾರೆ. ೧೨ ರೂಪಾಯಿ ಚಿಲ್ಲರೆ ಆಯಿತು ವರ್ಷಕ್ಕೆ. ೧೨ ರೂಪಾಯಿಯಲ್ಲಿ ಒಬ್ಬ ಮನುಷ್ಯ ಒಬ್ಬ ಹುಡುಗ ಊಟ, ವಸತಿ ಮಾಡಿಕೊಂಡು ಬದುಕಲಿಕ್ಕೆ ಸಾಧ್ಯನಾ ಓದಲಿಕ್ಕೆ ಸಾಧ್ಯನಾ? ಏನೂ ಇಲ್ಲ ಅಧ್ಯಕ್ಷರೆ, ನೀವು ಬಡವರ ಮಕ್ಕಳಿಗೆ ಇನ್ನೂ ಹತ್ತು ರೂಪಾಯಿ ಕಡಿಮೆ ಮಾಡಿ. ನಮ್ಮದೇನೂ ಅಬ್ಜೆಕ್ಷನ್ ಇಲ್ಲ, ಆದರೆ ಒಂದು ಕಡ್ಡಾಯ ಮಾಡಬೇಕು ಈ ರಾಜ್ಯದಲ್ಲಿ. ವೈಜ್ಞಾನಿಕವಾದ ಎಲ್ಲಾ ವ್ಯವಸ್ಥೆನೂ ಆಗಬೇಕಾಯಿತು ಎಂದರೆ, ಬಡವರಿಗೆ ನ್ಯಾಯ ಸಿಗಬೇಕು ಎನ್ನುವುದಾದರೆ ಈ ಆಫೀಸರ್ಸ್ ಮಕ್ಕಳು ಏನು ಇದ್ದಾರೆ? ಅವರನ್ನು ಕಡ್ಡಾಯವಾಗಿ ನೀವು ಸರ್ಕಾರೀ ಶಾಲೆಗಳಲ್ಲಿ ಓದುವ ಹಾಗೆ ಮಾಡಬೇಕು. ಯಾರು ಕರ್ನಾಟಕ ಸರ್ಕಾರದಿಂದ ಸಂಬಳ ಪಡೆಯುತ್ತಾರೆ ಅವರ ಮಕ್ಕಳೆಲ್ಲಾ ಸರ್ಕಾರೀ ಶಾಲೆಗಳಲ್ಲಿ ಓದಲಿ.

ಅಧ್ಯಕ್ಷರು : ಇದು ಪ್ರಜಾಪ್ರಭುತ್ವ ರಾಷ್ಟ್ರ ಸ್ವಾಮಿ

ಶ್ರೀ ಗೋವಿಂದ ಎಂ. ಕಾರಜೋಳ : ಪ್ರಜಾಪ್ರಭುತ್ವ ಎಂದು ಈ ರೀತಿ ಆದರೆ ಹೇಗೆ ಆಗುತ್ತದೆ. ಪ್ರಜಾಪ್ರಭುತ್ವ ಈ ರೀತಿ ಆದರೆ ಹೇಗೆ ಸ್ವಾಮಿ?

ಅಧ್ಯಕ್ಷರು : ಕಡ್ಡಾಯ ಹೇಗೆ ಮಾಡುವುದಕ್ಕೆ ಆಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ : ಅದಕ್ಕೆ ನಾನೇನು ಹೇಳುತ್ತೇನೆ ಎಂದರೆ ನನಗೆ ಅವರ ಮೇಲೆ ಕೋಪ ಇಲ್ಲ. ಅವರು ಹತ್ತು ಲಕ್ಷ ರೂಪಾಯಿ ಕೊಟ್ಟು ತಮ್ಮ ಮಕ್ಕಳನ್ನು ಹಚ್ಚಿಕೊಳ್ಳಲಿ, ಅವರಿಗೆ ಅನುಕೂಲ ಇದ್ದರೆ ಮಾಡಿಕೊಳ್ಳಲಿ. ಆದರೆ ಬಡವರ ಮಕ್ಕಳ ಬಗ್ಗೆನೂ ಇವರಿಗೆ ಕಳಕಳಿ ಬೇಕಲ್ಲ, ಕಾಳಜಿ ಬೇಕಲ್ಲ. ಅದನ್ನು ನಾನು ಇವತ್ತು ಒತ್ತಿ ಹೇಳುತ್ತಿರತಕ್ಕದ್ದು. ಆದಕ್ಕಾಗಿ ಇವತ್ತು ಹಾಸ್ಟೆಲ್ ಛಾರ್ಜಸ್ ಅನ್ನು ಹೆಚ್ಚು ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಮಿನಿಮಮ್ ೩೦ ರೂಪಾಯಿ ಆದರೂ ಒಂದು ದಿವಸಕ್ಕೆ ಪಿಜಿ ಮಾಡತಕ್ಕ ಮತ್ತು ಗ್ರಾಜುಯೇಷನ್ ಮಾಡುವ ಮಕ್ಕಳಿಗೆ ಸಿಗುವ ಹಾಗೆ ಆಗಬೇಕು. ೭೦೦, ೮೦೦ ರೂಪಾಯಿ ಆದರೂ ಹಾಸ್ಟೆಲ್ ಛಾರ್ಜಸ್ ನೀವು ಮಾಡಿದರೆ ಊಟ, ವಸತಿ ಆಗಲಿಕ್ಕೆ ಸಾಧ್ಯ ಇದೆ. ಇವತ್ತು ಈ ಯೂನಿವರ್ಸಿಟಿಗಳಿಗೆ ಸರ್ಕಾರ ಏನು ಹಾಸ್ಟೆಲ್ ಛಾರ್ಜಸ್ ಅನ್ನು ರೀಇಂಬರ್ಸ್‌ಮೆಂಟ್ ಮಾಡಬೇಕಾದರೆ ಎರಡೆರಡು ವರ್ಷ ಮೂರು ಮೂರು ವರ್ಷ

ತೆಗೆದುಕೊಳ್ಳುತ್ತಾರೆ. ಮೊನ್ನೆ ಕರ್ನಾಟಕ ಯೂನಿವರ್ಸಿಟಿಯ ಉಪ ಕುಲಪತಿಗಳಾದ ಶ್ರೀ ಖಾಜಾ ಪೀರ್ ಅವರು ಹೇಳಿದರು. ಮಾನ್ಯ ಕಾರಜೋಳ್ ಅವರೇ, ನಾನು ಇಷ್ಟು ಪತ್ರ ಬರೆದಿದ್ದೇನೆ. ನನ್ನ ಹತ್ತಿರ ಇರುವುದೆಲ್ಲಾ ಇವು ಪತ್ರಗಳು. ಇಷ್ಟು ಪತ್ರ ಬರೆದಿದ್ದೇನೆ.

ನಮಗೆ ಸರ್ಕಾರದಿಂದ ರೀಇಂಬರ್ಸ್‌ಮೆಂಟ್ ಆಗುತ್ತಿಲ್ಲ. ಸೋಷಿಯಲ್ ವೆಲ್‌ಫೇರ್ ಇಲಾಖೆಯಿಂದ ಆಗುತ್ತಿಲ್ಲ. ಅದಕ್ಕಾಗಿ ದಯಮಾಡಿ ಇದನ್ನು ಕೊಡಿಸುವ ವ್ಯವಸ್ಥೆ ಮಾಡಿ ಎಂದು ನನಗೆ ಪತ್ರಗಳನ್ನು ಕೊಟ್ಟಿದ್ದಾರೆ ಏಕೆ ಆಗುವುದಿಲ್ಲ? ಒಂದು ಕಡೆ ಬಜೆಟ್ ಲ್ಯಾಪ್ಸ್ ಆಗಲಿಕ್ಕೆ ಹತ್ತಿದೆ. ಇನ್ನೊಂದು ಕಡೆ ಇಂಥವನ್ನೆಲ್ಲಾ ಪೆಂಡಿಂಗ್ ಇಟ್ಟುಕೊಂಡು ಹೋಗುತ್ತಾರೆ.

ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರು? ನೋಡುವವರು ಯಾರೂ ಇಲ್ಲವೇ? ಇದರ ಬಗ್ಗೆ ಸಮಾಜ ಕಲ್ಯಾಣ ಇಲಾಖಾ ಸಚಿವರು ಮತ್ತು ಕಾರ್ಯದರ್ಶಿಗಳು ರಿವ್ಯೂ ಮಾಡುವುದಿಲ್ಲವೇ? ಇವರೆಲ್ಲಾ ರಿವ್ಯೂ ಮಾಡುವ ಮೂಲಕ ಬಡವರಿಗೆ ನ್ಯಾಯ ದೊರಕಿಸಿಕೊಡುವಂಥ ಕೆಲಸವಾಗಬೇಕು. ಇಲ್ಲದಿದ್ದರೆ, ಬಡವರ ಮಕ್ಕಳು ಓದುವುದಕ್ಕಾಗುವುದಿಲ್ಲ, ಅದಕ್ಕೋಸ್ಕರ, ನಾನು ಸರ್ಕಾರವನ್ನು ಒತ್ತಾಯಿಸುತ್ತಿರುವುದೇನೆಂದರೆ, ಕೂಡಲೇ ಈ ಹಣವನ್ನು ಬಿಡುಗಡೆ ಮಾಡಬೇಕು. ಇದು ಒಂದೇ ಯೂನಿವರ್ಸಿಟಿಯದಲ್ಲ, ಎಲ್ಲಾ ಯೂನಿವರ್ಸಿಟಿಗಳಲ್ಲೂ ಈ ರೀತಿ ಉಳಿದುಕೊಂಡಿದೆ. ಇದಕ್ಕೆ ಸಂಬಂಧಿಸಿದ ಸ್ಟೇಟ್‌ಮೆಂಟ್ ನನ್ನ ಬಳಿ ಇದೆ. ಅದಕ್ಕೋಸ್ಕರ, ಈ ಸಂಬಂಧದ ಹಣವನ್ನು ಕೂಡಲೇ ಬಿಡುಗಡೆ ಮಾಡುವ ಕೆಲಸ ಮಾಡಬೇಕಾಗುತ್ತದೆ.

ಕೊನೆಯದಾಗಿ ಹೇಳುವುದಾದರೆ, ಏಕೆಂದರೆ, ತಾವು ಸಹ ಪದೇ ಪದೇ ಸಮಯವಾಗಿದೆ ಎಂದು ಹೇಳುತ್ತಿದ್ದೀರಿ. ನಾನು ಒಂದು ಮಾತನ್ನು ಕೊನೆಯದಾಗಿ ಹೇಳಬೇಕೆಂದು ಬಯಸಿದ್ದೇನೆ. ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುತ್ತಿದ್ದೇನೆ, ಭ್ರಷ್ಟಾಚಾರ ತಡೆಗಟ್ಟುತ್ತಿದ್ದೇವೆ ಎಂಬ ಹೇಳಿಕೆಯನ್ನು ನಾವು ದಿನನಿತ್ಯವೂ ಕೇಳುತ್ತಿದ್ದೇವೆ. ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಇವೊತ್ತು ಭ್ರಷ್ಟಾಚಾರ ಯಾವ ಮಟ್ಟಕ್ಕೆ ಹೋಗಿದೆಯೆಂದರೆ, ಯಾವ ಮಂತ್ರಿ ಹೇಳಲಿ, ಯಾವ ಉನ್ನತಾಧಿಕಾರಿಗಳು ಹೇಳಲಿ, ಶಾಸಕರು, ಸಂಸದರು ಹೇಳಲಿ, ದುಡ್ಡು ಕೊಡದೇ ಸರ್ಕಾರಿ ಕಚೇರಿಗಳಲ್ಲಿ ಯಾವುದೇ ಕೆಲಸವಾಗುವುದಿಲ್ಲ. ಶಾಸಕರ ಕಡೆಯಿಂದ ದುಡ್ಡು ತೆಗೆದುಕೊಂಡು ಕೆಲಸ ಮಾಡಿಕೊಟ್ಟ ಉದಾಹರಣೆಗಳಿವೆ. ನಾನು ತೋರಿಸಿಕೊಡುತ್ತೇನೆ. ಶಾಸಕರಿಂದ ದುಡ್ಡು ಪಡೆದುಕೊಂಡು ಕೆಲಸ ಮಾಡಿದ ಅಧಿಕಾರಿಗಳಿದ್ದಾರೆ. ಪರಿಸ್ಥಿತಿ ಈ ಮಟ್ಟಕ್ಕೆ ಹೋದರೆ, ನಾವು ಎಲ್ಲಿಗೆ ಮುಟ್ಟುತ್ತಿದ್ದೇವೆ? ನಾವು ಭ್ರಷ್ಟಾಚಾರವನ್ನು ಯಾವ ರೀತಿ ತಡೆಗಟ್ಟುತ್ತಿದ್ದೇವೆ? ಇವೊತ್ತು ಎಲ್ಲಾ ಕಡೆಗಳಲ್ಲಿ ಚೆಕ್‌ಪೋಸ್ಟ್‌ಗಳಿದ್ದ ಕಡೆಗಳಲ್ಲಿ, ಆರ್‌ಟಿಓ ಚೆಕ್‌ಪೋಸ್ಟ್‌ಗಳಿರಬಹುದು,

ಕಮರ್ಷಿಯಲ್ ಟ್ಯಾಕ್ಸ್ ಚೆಕ್‌ಪೋಸ್ಟ್‌ಗಳಿರಬಹುದು, ಅಲ್ಲಿ ಖಾಸಗಿಯವರನ್ನು ನೇಮಿಸಿಕೊಂಡಿದ್ದಾರೆ. ಆ ಊರಿನಲ್ಲಿ ಗಟ್ಟಿಮುಟ್ಟಾಗಿರುವ ಯಾವ ಒಬ್ಬ ಬಿರುಸು ಹುಡುಗನಿದ್ದಾನೆ, ಅಂತಹವರನ್ನು ನೇಮಿಸಿಕೊಂಡಿದ್ದಾರೆ. ಆ ಕಡೆ ಬರುವ ವಾಹನಗಳನ್ನು ಅವರು ತಡೆದು ನಿಲ್ಲಿಸುತ್ತಾರೆ. ನಂತರ, ಅವರು ಕೇಳಿದಷ್ಟು ರೊಕ್ಕ ಕೊಟ್ಟರೆ ಸರಿಹೋಯಿತು. ಇಲ್ಲದಿದ್ದರೆ, ಅವರನ್ನು ಹಿಡಿದುಕೊಂಡು ಬಂದು ಕೇಸ್ ಹಾಕುತ್ತಾರೆ. ಇಂತಹ ಕೆಲಸಕ್ಕೆ ಅವರು ಖಾಸಗಿಯವರನ್ನು ನೇಮಿಸಿಕೊಂಡಿದ್ದಾರೆ. ಏಕೆಂದರೆ, ಅವರು ಬಹಳ ಬುದ್ಧಿವಂತರಾಗಿದ್ದಾರೆ. ರೆಡ್ ಹ್ಯಾಂಡ್ ಆಗಿ ಲೋಕಾಯುಕ್ತರಿಂದ ಟ್ರ್ಯಾಪ್ ಆಗಬಹುದು ಅಥವಾ ಅಲಿಗೇಶನ್ಸ್ ಆಗಬಹುದೆಂದು ಸಂಬಂಧವಿಲ್ಲದಿರುವವರ ಕೈಯಲ್ಲಿ ಬಡಿಗೆ ಕೊಟ್ಟು ಅಲ್ಲಿ ನಿಲ್ಲಿಸಿದ್ದಾರೆ. ರಸ್ತೆಗಳಲ್ಲಿ ಇವೊತ್ತು ಗೂಂಡಾಗಳಿದ್ದಾರೆ, ಬೇಕಿದ್ದರೆ, ತಾವು ನೋಡಬಹುದು. ಇಂತಹ ಪ್ರಕರಣಗಳು ಸ್ಟೇಟ್ ಬಾರ್ಡರ್‌ನಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಅಂತರರಾಜ್ಯ ಗಡಿ ಪ್ರದೇಶಗಳಲ್ಲಿ ಇಂತಹ ಚಟುವಟಿಕೆಗಳು ಜಾಸ್ತಿ ನಡೆಯುತ್ತದೆ. ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಇವೊತ್ತು ಪೊಲೀಸರಿಗೆ ಪ್ರತಿಯೊಬ್ಬರೂ ಮಾಮೂಲಿ ಕೊಡಬೇಕು. ಡೆಲಿವರಿಗೆಂದು ಆಸ್ಪತ್ರೆಗೆ ಹೋಗಿ ದುಡ್ಡು ಕೊಡದಿದ್ದರೆ ಅವರು ಡೆಲಿವರಿ ಮಾಡಿಸುವುದಿಲ್ಲ! ಈ ರೀತಿ ಹಣ ಕೊಡದೇ ಇದ್ದಾಗ ಡೆಲಿವರಿಗೆಂದು ಬಂದವರು ಸತ್ತ ಎಷ್ಟೋ ಪ್ರಕರಣಗಳಿವೆ. ದುಡ್ಡು ಕೊಡದಿದ್ದರೆ ವೈದ್ಯರು ಡೆಲಿವರಿಗಾಗಿ ಬಂದಿರುವ ಪೇಷೆಂಟ್ಸ್ ಅನ್ನು ಅಟೆಂಡ್ ಮಾಡುವುದಿಲ್ಲ ಅವರನ್ನು ಮುಟ್ಟುವುದೂ ಇಲ್ಲ! ಪರಿಸ್ಥಿತಿ ಈ ಮಟ್ಟಕ್ಕೆ ತಲುಪಿದೆ. ಆದಕಾರಣ, ಸರ್ಕಾರ ಆಡಳಿತದಲ್ಲಿ ಆದಷ್ಟು ಮಟ್ಟಿಗೆ ಬಿಗಿ ತರಬೇಕಾಗುತ್ತದೆ. ಇಲ್ಲದಿದ್ದರೆ, ಈ ರಾಜ್ಯದಲ್ಲಿ ಬಡವರು ಬದುಕುವುದಕ್ಕಾಗುವುದಿಲ್ಲ. ಅಂತಹ ಕೆಟ್ಟ ಪರಿಸ್ಥಿತಿ ಇವೊತ್ತು ನಿರ್ಮಾಣವಾಗುತ್ತಿದೆ. ಆದುದರಿಂದ, ಈ ದಿಸೆಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯಿಸುವುದೇನೆಂದರೆ, ಪರಿಶಿಷ್ಟ ಜಾತಿ ಮತ್ತು ವರ್ಗಗಳವರ ಏಳಿಗೆಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ ೮೧೫ ಕೋಟಿ ರೂಪಾಯಿಗಳಿಗೆ ಬದಲಾಗಿ ೨೨೦೦ ಅಥವಾ ೨೫೦೦ ಕೋಟಿ ರೂಪಾಯಿಗಳನ್ನಾದರೂ ಈ ವರ್ಷ ತಾವು ಬಿಡುಗಡೆ ಮಾಡಬೇಕಾಗುತ್ತದೆ. ರೈತರ ಅಭಿವೃದ್ಧಿಗಾಗಿ ತಾವು ಆಯವ್ಯಯದಲ್ಲಿ ನಿಗದಿಪಡಿಸಿರುವ ಹಣ ಏನೂ ಸಾಕಾಗುವುದಿಲ್ಲ. ಇನ್ನು ಹೆಚ್ಚು ಹಣ ಬಿಡುಗಡೆ ಮಾಡಬೇಕಾಗುತ್ತದೆ. ಗ್ರಾಮೀಣ ಪ್ರದೇಶಾಭಿವೃದ್ಧಿಗೆ ತಾವು ಹೆಚ್ಚು ಒತ್ತು ಕೊಟ್ಟು ಕೆಲಸ ಮಾಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಕೊನೆಯದಾಗಿ, ಒಳ್ಳೆಯ ಕೆಲಸ ಮಾಡಿರುವ ಬಗ್ಗೆಯೂ ಒಂದಿಷ್ಟು ಹೇಳಬೇಕಾಗುತ್ತದೆ. ನಾನು ವಿರೋಧ ಪಕ್ಷದಲ್ಲಿದ್ದರೂ ಕೇವಲ ವಿರೋಧಿಸುವುದಕ್ಕೋಸ್ಕರವೇ

ಇಲ್ಲಿ ನಿಂತಿಲ್ಲ, ಸ್ವಾತಂತ್ರ್ಯ ಬಂದ ನಂತರ ಸರ್ಕಾರ ಮೊಟ್ಟಮೊದಲನೆಯದಾಗಿ ಡಿಸಿಷನ್ ತೆಗೆದುಕೊಳ್ಳುವ ಮೂಲಕ ಇಷ್ಟು ವರ್ಷಗಳ ಆಡಳಿತದಲ್ಲಿ ಏನಾದರೂ ಚಲೋ ಕೆಲಸ ತೆಗೆದುಕೊಂಡಿದ್ದರೆ, ಆರು ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಿದ್ದೀರಿ. ಇವೊತ್ತು ಬಡವರ ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಮಾನ್ಯ ಉಪ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಹೇಳಿದರು. ನಾನು ಕೇಳಿದ್ದು ಏನೆಂದರೆ, ನಮ್ಮ ಭಾಗದ ಮುಧೋಳ ಮತ್ತು ಜಮಖಂಡಿ ಪ್ರದೇಶಗಳಲ್ಲಿ ದೇವದಾಸಿಯರ ಸಂಖ್ಯೆ ಜಾಸ್ತಿ ಇದೆ. ಅದಕ್ಕೋಸ್ಕರ, ರೆಸಿಡೆನ್ಷಿಯಲ್ ಶಾಲೆ ಮಂಜೂರು ಮಾಡಬೇಕೆಂದು ಮೊದಲನೆಯ ಅಧಿವೇಶನದಲ್ಲಿ ಕೇಳಿದ್ದೆವು. ಇವರ ಮಕ್ಕಳಿಗಾಗಿಯೇ ಪ್ರತ್ಯೇಕ ರೆಸಿಡೆನ್ಷಿಯಲ್ ಶಾಲೆ ಬೇಡ. ಪರಿಶಿಷ್ಟ ಜಾತಿ ಮತ್ತು ಪಂಗಡದ ಮಕ್ಕಳಿಗಾಗಿ ಪ್ರಸಕ್ತ ವರ್ಷ ರೆಸಿಡೆನ್ಷಿಯಲ್ ಶಾಲೆ ಮತ್ತು ಹಾಸ್ಟೆಲ್‌ಗಳನ್ನು ಮಂಜೂರು ಮಾಡುವ ಬಗ್ಗೆ ಪ್ರಸ್ತಾವನೆಯನ್ನು ವಿಶೇಷವಾಗಿ ಪರಿಗಣಿಸಲಾಗುವುದೆಂದು ಹೇಳಿದ್ದರು. ಅವರು ಕೊಟ್ಟ ಮಾತಿನಂತೆ ನಡೆದುಕೊಂಡು, ಇವೊತ್ತು ರಾಜ್ಯದಲ್ಲಿ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಎಲ್ಲಾ ವರ್ಗಗಳಿಗೆ ಸಂಬಂಧಿಸಿದಂತೆ ಸುಮಾರು ೬೦-೭೦ ರೆಸಿಡೆನ್ಷಿಯಲ್ ಶಾಲೆಗಳಾಗುತ್ತಿವೆ. ತಾವು ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ. ಬಡವರಿಗೆ ಯಾವುದಾದರೂ ಒಳ್ಳೆಯದಾಗುವುದಾದರೆ, ಅದು ಶಿಕ್ಷಣ ಕ್ಷೇತ್ರದಲ್ಲಿ ಮಾತ್ರ. ಶಿಕ್ಷಣಕ್ಕೆ ತಾವು ಹೆಚ್ಚಿನ ಪ್ರಮಾಣದಲ್ಲಿ ಹಣ ಕೊಡಬೇಕಾಗುತ್ತದೆ. ಬಡವರಿಗೆ ತಾವು ಒಳ್ಳೆಯ ಕೆಲಸ ಮಾಡಿದ್ದೀರಿ. ಶೇಕಡ ೬ರಷ್ಟು ಬಡ್ಡಿ ದರದಲ್ಲಿ ಬಡ ರೈತರಿಗೆ ಸಾಲ ಒದಗಿಸಿಕೊಡುತ್ತೇವೆಂದು ಏನು ಹೇಳಿದ್ದೀರಿ, ಅದು ಒಳ್ಳೆಯ ಕೆಲಸವಾಗಿದೆ. ಆದರೆ, ಇದಕ್ಕೆ ತಾವು ಇನ್ನು ಸ್ವಲ್ಪ ಹೆಚ್ಚಿಗೆ ಹಣ ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಇನ್ನು ಕೃಷಿ ಕ್ಷೇತ್ರ ಕುರಿತಂತೆ ಹೇಳುವುದಾದರೆ, ಕೃಷಿ ಸಚಿವರು ಮಾತನಾಡುತ್ತಾ ಹನಿ ನೀರಾವರಿ ಸೌಲಭ್ಯ ಒದಗಿಸಿದ್ದೇವೆಂದು ಹೇಳಿದರು. ನಾನು ನೋಡಿರುವಂತೆ ಎಲ್ಲಾ ಜಿಲ್ಲೆಗಳಿಗೂ ಹನಿ ನೀರಾವರಿ ಸೌಲಭ್ಯ ಒದಗಿಸಿಕೊಟ್ಟಿಲ್ಲ, ಎಲ್ಲಾ ಜಿಲ್ಲೆಗಳಿಗೂ ಸದರಿ ಸೌಲಭ್ಯ ಒದಗಿಸಿಕೊಡುವ ಅವಶ್ಯಕತೆಯಿಲ್ಲ. ದುರ್ದೈವ ಏನಾಗಿದೆಯೆಂದರೆ, ಬಿಜಾಪುರ ಇಬ್ಭಾಗವಾದ ನಂತರ, ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳು ಪ್ರತ್ಯೇಕವಾದ ಬಳಿಕ ನೀವು ಬಿಜಾಪುರ ಒಂದಕ್ಕೇ ಸಂಬಂಧಿಸಿದಂತೆ ಬರೆದುಬಿಡುತ್ತೀರಿ. Bijapur includes Bagalkot. ಅದಕ್ಕೋಸ್ಕರ, ಬಿಜಾಪುರದ ಕೆಳಗಡೆ ಬಾಗಲಕೋಟೆ ಎಂದು ಬರೆಯಬೇಕು. ಹನಿ ನೀರಾವರಿ ಯೋಜನೆ ಸೌಲಭ್ಯ ಒದಗಿಸಿಕೊಡಲು ಬಾಗಲಕೋಟೆ ಜಿಲ್ಲೆಯನ್ನೂ ಸೇರಿಸಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಹೇಳುವುದಾದರೆ, ಒಂದು ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಹಣಕಾಸು ಸಚಿವರು ಕ್ರಮ ಕೈಗೊಳ್ಳಲಿಲ್ಲ. ಗದಗ್ ಬ್ರಾಡ್‌ಗೇಜ್ ಬಿಜಾಪುರ-ಗದಗ ಗೇಜ್ ಕನ್ವರ್ಶನ್‌ಗೆ ಸಂಬಂಧಿಸಿದಂತೆ ೨೦ ಕೋಟಿ ರೂಪಾಯಿಗಳನ್ನು ಕೊಟ್ಟರೆ ನಿಮ್ಮ ಹೆಸರನ್ನು ಹೇಳಿಕೊಂಡು ನಾವು ಆರಾಮಾಗಿ ರೈಲಿನಲ್ಲಿ ಬರುತ್ತೇವೆ. ಇವೊತ್ತು ಏನಾಗಿದೆಯೆಂದರೆ, ಹಾಳಾದ ರಸ್ತೆಯಲ್ಲಿ ಬಸ್ಸಿನಲ್ಲಿ ಪ್ರಯಾಣಿಸಿ ಬರುವುದರಿಂದ ನಮಗೆಲ್ಲಾ ಸೊಂಟ ಹೋಗಿಬಿಟ್ಟಿದೆ. ಅದಕ್ಕೋಸ್ಕರ, ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಪಕ್ಕದಲ್ಲಿ ಕುಳಿತಿರುವ ಜಿಲ್ಲಾ ಉಸ್ತುವಾರಿ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ೨೦ ಕೋಟಿ ರೂಪಾಯಿಗಳನ್ನು ಗದಗ್ ಬ್ರಾಡ್‌ಗೇಜ್ ಮತ್ತು ಗದಗ-ಬಿಜಾಪುರ ಗೇಜ್ ಕನ್ವರ್ಶನ್‌ಗೆ ಕೊಟ್ಟು ಕೆಲಸವನ್ನು ಇದೇ ವರ್ಷ ಮುಗಿಸುತ್ತೀರೆಂಬ ಆಶಯ ವ್ಯಕ್ತಪಡಿಸುತ್ತಾ ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಸನ್ಮಾನ್ಯ ಅಧ್ಯಕ್ಷರೆ, ಈ ವರ್ಷ ಮಂಡಿಸಿರುವ ಬಜೆಟ್ ಅನ್ನು ಸಮರ್ಥಿಸುತ್ತಾ ಕೆಲವು ವಿಷಯಗಳ ಬಗ್ಗೆ ಟಿಪ್ಪಣಿ ಮಾಡಬೇಕೆಂದು ನಾನು ಇಚ್ಛಿಸಿದ್ದೇನೆ. ವಿಶೇಷವಾಗಿ, ನೀರಾವರಿ ಮತ್ತು ಆರ್ಟಿಕಲ್ ೩.೭೧ಕ್ಕೆ ಸಂಬಂಧಿಸಿದಂತೆ ಸರ್ಕಾರದ ನೀತಿ ಬಗ್ಗೆ ಮಾತನಾಡಬೇಕೆಂದಿದ್ದೇನೆ. ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರಾದ ರೇವಣ್ಣನವರು ಆಲಮಟ್ಟಿಯಲ್ಲಿ ವಿದ್ಯುತ್ ತಯಾರಿಕೆ ಬಗ್ಗೆ ಉತ್ತರ ಹೇಳಿದರು. ಸದಸ್ಯರಾದ ಬಸವರಾಜ ರಾಯರೆಡ್ಡಿಯವರು ಮಾತನಾಡುತ್ತಾ ಕೆಲವು ಪ್ರಶ್ನೆಗಳನ್ನು ಕೇಳಿದರು. ಆಲಮಟ್ಟಿಯಲ್ಲಿ ಎಷ್ಟು ಪ್ರಮಾಣದ ವಿದ್ಯುತ್ ಉತ್ಪಾದನೆಯಾಯಿತು? ತಾವು ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಒದಗಿಸುತ್ತೀರಿ? ಎಂದಾಗ ಸಚಿವರು ಸರಿಯಾಗಿ ಉತ್ತರಿಸಲಿಲ್ಲ. ಇದಕ್ಕೆ ಐತಿಹಾಸಿಕ ಕಾರಣಗಳೂ ಕೂಡ ಇವೆ. ಈಗ ಆಲಮಟ್ಟಿ ಗೇಟನ್ನು ಅಳವಡಿಸಲಾಗಿದೆ. ಆ ಗೇಟ್ ಅನ್ನು ೫೨೪.೨ ಅಡಿಗಳಿಗೆ ಎತ್ತರಿಸಬೇಕಾಗಿತ್ತು, ಆ ರೀತಿಯಲ್ಲಿ ಗೇಟ್ ತಯಾರಿಸಿದ್ದರು. ಆದರೆ, ಸುಪ್ರಿಂ ಕೋರ್ಟ್‌ನ ಸ್ಟೇ ಆರ್ಡರ್ ಬಂತು. ಆನಂತರ, ಜಡ್ಜ್‌ಮೆಂಟ್ ಕೂಡ ಆಗಿ, ಆ ಗೇಟನ್ನು ೫೧೯ ಅಡಿಗೆ ಇಳಿಸಲಾಯಿತು. ಇದರಿಂದಾಗಿ ನೀರು ಸಂಗ್ರಹಣೆ ಕಡಿಮೆಯಾಗಿ ಮುಂದೆ ವಿದ್ಯುತ್ ಉತ್ಪಾದನೆಯಾಗುವುದು ಸಾಧ್ಯವಿಲ್ಲ, ಆದರೂ ಕೂಡ ಸರ್ಕಾರದವರು ಬಿಜಾಪುರದಲ್ಲಿ ಅನೇಕ ಏತ ನೀರಾವರಿ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಮುಳವಾಡ ಏತ ನೀರಾವರಿ ಯೋಜನೆ ಇರಲಿ, ಮತ್ತೊಂದು ಇರಲಿ, ಆ ಕಾಲಕ್ಕೆ ಸರ್ಕಾರದವರು ಹೈಕೋರ್ಟ್‌ನಲ್ಲಿ ಸರಿಯಾಗಿ ಹೋರಾಟ ಮಾಡಬೇಕಾಗಿತ್ತು, ಮಾಡಲಿಲ್ಲ, ಆದರಿಂದ ದುರ್ದೈವದಿಂದಾಗಿ ಉತ್ತರ ಕರ್ನಾಟಕಕ್ಕೆ,

ವಿಶೇಷವಾಗಿ, ಬಿಜಾಪುರ, ಗುಲ್ಬರ್ಗಾ ರೈತರಿಗೆ permanent hit ಆಗಿದೆ. ಎಲ್ಲಿಯವರೆಗೆ ಅಣೆಕಟ್ಟನ್ನು ೫೨೪ ಅಡಿಯವರೆಗೆ ಎತ್ತರಿಸುವುದಿಲ್ಲವೋ, ಅಲ್ಲಿಯವರೆಗೆ ಆ ಭಾಗಕ್ಕೆ ನೀರಾವರಿ ಸೌಲಭ್ಯ ದಕ್ಕುವುದಿಲ್ಲ ಮತ್ತು ಏತ ನೀರಾವರಿ ಯೋಜನೆಗಳೂ ಕೂಡ ಅನುಷ್ಠಾನಗೊಳ್ಳುವುದಿಲ್ಲ. ಏಕೆ ಹಣ ಖರ್ಚು ಮಾಡುತ್ತಾರೋ? ಮುಳವಾಡ ಏತ ನೀರಾವರಿಗೆ ಇಷ್ಟು ಕೊಡುತ್ತೇವೆಂದು ಹೇಳುತ್ತಾರೆ. ಜನರೂ ಕೇಳುತ್ತಿದ್ದಾರೆ. ಆದರೂ ಆಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಎಲೆಕ್ಟ್ರಿಸಿಟಿ ಬೇಕು. ಪವರ್ ಜನರೇಶನ್ ಅನ್ನು ಎಲ್ಲಿಂದ ತರುತ್ತಾರೆ? ಅದು ಆಲಮಟ್ಟಿಯಿಂದ ಸಾಧ್ಯವಿತ್ತು. ಈಗ ಎಲ್ಲಿಂದ ತರುತ್ತಾರೋ ಗೊತ್ತಿಲ್ಲ. ಆದರೆ, ಪ್ರತಿಯೊಂದೂ ವಿಷಯದಲ್ಲಿ ಒಂದು ಕಡೆ ಆಲಮಟ್ಟಿ ಯೋಜನೆಯಲ್ಲಿ ನಮಗೆ ಆಂಧ್ರಪ್ರದೇಶದಿಂದ ಕಿರುಕುಳ ಆಯಿತು. ಆಂಧ್ರದಲ್ಲಿ ತೆಲುಗು ಗಂಗಾ, ಶ್ರೀಶೈಲಂ, ನಾಗಾರ್ಜುನದಂತಹ ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳುತ್ತಾರೆ. ಅವರನ್ನು ಯಾರೂ ಕೇಳುವವರಿಲ್ಲ. ನಮಗೆ ಭೀಮಾದಿಂದ ಏನು ನೀರು ಬರುತ್ತದೆ, ಅಲ್ಲಿ ಮಹಾರಾಷ್ಟ್ರದವರು ಭೀಮಾ ನದಿಗೆ ಅಡ್ಡಲಾಗಿ ಕೆಲವು ಡ್ಯಾಮ್‌ಗಳನ್ನು ಕಟ್ಟಿ ನೀರನ್ನು ಮಹಾರಾಷ್ಟ್ರದ ಕೆಲವು ಹಾಳುನದಿಗೆ ಒಯ್ಯುತ್ತಾರೆ. ಪೈಪ್ ಮೂಲಕ ಸೀನಾ ನದಿಯಿಂದ ನೀರನ್ನು ಹೊಯ್ಯುತ್ತಾರೆ. ಈ ರೀತಿ ಮಾಡಿ ಕೆಳಕ್ಕೆ ನೀರು ಬರುತ್ತದೆ. ಮೇಲಿನಿಂದ ಬರುವ ನೀರು ನಮಗೆ ಬರುವುದಿಲ್ಲ. ಈ ಕಡೆ ಆಂಧ್ರದವರು ಕೆಳಗೆ ಯೋಜನೆಗಳನ್ನು ಹಾಕಿ ನಮ್ಮ ಯೋಜನೆಗಳನ್ನು ತಡೆಯುತ್ತಾರೆ. ಯಾವತರ ಆಲಮಟ್ಟಿಯದನ್ನು ತಡೆದರು ಹಾಗೆ. ಆದರೆ ನಮ್ಮ ಸರ್ಕಾರದವರು ನಮ್ಮ ರೈತರ, ನಮ್ಮ ನೀರಾವರಿ ಯೋಜನೆಗಳನ್ನು ಸಂರಕ್ಷಿಸಲು ಯಾವುದೇ ದಿಟ್ಟಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಕಾವೇರಿಯಲ್ಲೂ ಅದೇ ಪರಿಸ್ಥಿತಿ ಉಂಟು. ಆದರೆ, ಕಾವೇರಿ ಭಾಗದಲ್ಲಿ ರೈತರು ಸ್ವಲ್ಪ ನೀರಾವರಿಯ ಬಗ್ಗೆ ಹೆಚ್ಚು ಕಾನ್ಷಿಯಸ್ ಆಗಿದ್ದಾರೆ, ಹೆಚ್ಚು ಹೋರಾಟಗಾರರಾಗಿದ್ದಾರೆ, ಮಿಲಿಟೆಂಟ್ ಇದ್ದಾರೆ ಆ ದೃಷ್ಟಿಯಿಂದ ಕೆಲವೊಂದು ಸಲ ಅವರಿಗೆ ನ್ಯಾಯ ಸಿಗುತ್ತದೆ. ಆದರೆ, ಉತ್ತರ ಕರ್ನಾಟಕದಲ್ಲಿ ಕೃಷ್ಣ ಬೇಸಿನ್‌ನಲ್ಲಿ ಬರುವಂಥ ರೈತರಿಗೆ ನ್ಯಾಯ ಸಿಗುತ್ತಿಲ್ಲ ಆ ಗೇಟನ್ನು ಎತ್ತರ ಮಾಡುವ ಸಲುವಾಗಿ ನಾವು ಹೋರಾಟ ಮಾಡಿದರೆ ನಮ್ಮ ಸರ್ಕಾರದವರೇ ನಮ್ಮ ಹೋರಾಟವನ್ನು ಕ್ರಶ್ ಮಾಡಿದರು. ನಾವು ಕರಸೇವೆಯ ಮೂಲಕ ಗೇಟನ್ನು ಎತ್ತರ ಮಾಡಲು ಪ್ರಯತ್ನ ಮಾಡಿದೆವು. ಆ ಕಾಲದಲ್ಲೂ ಅಂದಿನ ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣರವರು ಏನೋ ಮಾತನಾಡಿದರು ಎಂದು ಅವರ ವಿರುದ್ಧ ಕಂಟೆಮ್ಟ್ ಆಫ್ ಕೋರ್ಟ್ ಕೇಸು ಸುಪ್ರೀಂ ಕೋರ್ಟ್‌ನಲ್ಲಿ ಹಾಕಿದರು. ಆಗ ನಾವು ಕೇಳಿಕೊಂಡಿದ್ದೆವು. ನೀವು ಅದಕ್ಕೆ ಅಪಾಲಜಿ ಕೇಳಿಕೊಳ್ಳುವ ಅವಶ್ಯಕತೆ ಇಲ್ಲ, ಆದರೆ ದುರ್ದೈವದಿಂದ ಅವತ್ತು ಕೇಳಿಕೊಂಡರು, ಯಾವಾಗ ಕಾವೇರಿ ಇಶ್ಯೂ ಬಂತು ಆಗ ಆ ಕಂಟೆಮ್ಟ್ ಫೇಸ್ ಮಾಡಲು ಅವರು ತಯಾರಾದರು. ಅವರು ತಮ್ಮ ನಿಲುವಿಗೆ ಡಿಫೆಂಡ್

ಮಾಡಿಕೊಂಡರು. ಕೊನೆಗೆ ಸುಪ್ರೀಂಕೋರ್ಟ್‌ಗೆ ಹೋದರು, ಆಗ ನಾನೂ ಬೈರೇಗೌಡರು ಭೇಟಿಯಾಗಿ ಕಂಗ್ರಾಜುಲೇಷನ್ಸ್, ಕೊಡಲು ಹೋಗಿದ್ದೆವು. ಆಗ ಅವರು I am the product of this basin, ಎಂದು ಅಭಿಮಾನದಿಂದ ಹೇಳಿದರು. ಸುಪ್ರಿಂ ಕೋರ್ಟ್ ಆರ್ಡರ್ ಏನಾಯಿತು ಅದರ ವಿರುದ್ಧ ಮಂಡ್ಯ ರಸ್ತೆಯಲ್ಲಿ ಒಬ್ಬರು ಮುಖ್ಯಮಂತ್ರಿಯೆ ಹೋರಾಟ ಮಾಡಿದರು. ಕಾವೇರಿ ಪ್ರಶ್ನೆ ಬಂದಾಗ ಒಂದು ಕಾಲದಲ್ಲಿ ಬಂಗಾರಪ್ಪನವರೂ ಮುಖ್ಯಮಂತ್ರಿಯಾಗಿಯೇ ಹೋರಾಟ ಮಾಡಿದರು. ಅದೇ ರೀತಿ ಕೃಷ್ಣರವರೂ ಕಾವೇರಿ ಪ್ರಶ್ನೆ ಬಂದಾಗ ಮುಖ್ಯಮಂತ್ರಿಯಾಗಿ ಹೋರಾಟಕ್ಕೆ ಇಳಿದರು. ಅವರದ್ದೇ ಕೇಂದ್ರ ಸರ್ಕಾರ, ಎರಡೂ ಸಲ ಅವರದ್ದೇ ಸರ್ಕಾರವಿದ್ದಾಗ ಅವರು ಹೋರಾಟಕ್ಕೆ ಇಳಿದರು. ಎಸ್.ಎಂ.ಕೃಷ್ಣರವರ ಕಾಲದಲ್ಲಿ ಸರ್ಕಾರ ಬೇರೆ ಇದ್ದಿರಬಹುದು ಆದರೆ ಸುಪ್ರೀಂಕೋರ್ಟ್ ವಿರುದ್ಧ ಹೋರಾಟಕ್ಕೆ ಇಳಿದರು. ಆದರೆ ದುರ್ದೈವದಿಂದ ನಮ್ಮ ಭಾಗದ ಮಂತ್ರಿಗಳು ಕೂಡ ಮಂಡ್ಯದಲ್ಲಿನ ಎಲ್ಲಾ ಪ್ರೊಸೆಷನ್‌ನಲ್ಲಿ ಇದ್ದರು. ಆದರೆ, ಕೃಷ್ಣದ ಪ್ರಶ್ನೆ ಬಂದಾಗ, ಬಚಾವತ್ ಅವಾರ್ಡ್‌ನಲ್ಲೂ ನಮಗೆ ಬಹಳಷ್ಟು ಅನ್ಯಾಯವಾಗಿದೆ. ಸುಮಾರು ೨೫-೩೦ ವರ್ಷಕ್ಕಿಂತ ಮೊದಲು, ೧೯೬೯ರಲ್ಲಿ ಬಚಾವತ್ ಟ್ರಿಬ್ಯುನಲ್ ಸ್ಥಾಪನೆಯಾಯಿತು. ೧೯೭೩ರಲ್ಲಿ ಮೊದಲನೆಯ ೧೯೭೬ರಲ್ಲಿ ಎರಡನೆಯ ರಿಪೋರ್ಟ್‌ನ್ನು ಕೊಟ್ಟರು. ಅದರಲ್ಲಿ ನಮಗೆ ಅನ್ಯಾಯವಾದರೆ ಅದರ ಬಗ್ಗೆ ಕೃಷ್ಣ ಬೇಸಿನ್‌ದವರಾಗಲಿ ಕಾವೇರಿ ಬೇಸಿನ್‌ದವರಾಗಲಿ ಯಾರೂ ಅದರ ವಿರುದ್ಧ ಚಕಾರ ಎತ್ತಿಲ್ಲ, ಆದ್ದರಿಂದ ಇವತ್ತು ನಮಗೆ ಅನ್ಯಾಯದಿಂದ ಅನ್ಯಾಯ ಬಹಳ ಆಗುತ್ತಿದೆ. ಟ್ರಿಬ್ಯುನಲ್‌ನಲ್ಲಿ ಅಂದೂ ಮಂಡಿಸಿಲ್ಲ ಮತ್ತು ಇಂದೂ ಮಂಡಿಸುತ್ತಿಲ್ಲ, ಈ ದೃಷ್ಟಿಯಿಂದ ನಮ್ಮ ಭಾಗದ ನೀರಾವರಿ ಯೋಜನೆಗಳಿಗೆ ಬಹಳ ಹೊಡೆತ ಬೀಳುತ್ತಿದೆ. ನಮ್ಮ ಜಿಲ್ಲೆಯಲ್ಲಿ ನಮ್ಮ ತಾಲ್ಲೂಕಿನಲ್ಲಿ ನಾನು ಕೇಳುತ್ತಿದ್ದೇನೆ, ಇತ್ತೀಚೆಗೆ ಒಂದು ಆರ್ಡರನ್ನು ಹೊರಡಿಸಿದ್ದಾರೆ. ಯಾರೂ ನದಿಗೆ ಐ.ಪಿ. ಸೆಟ್ ಹಾಕಬೇಕಾದರೂ ಅನುಮತಿಗಾಗಿ ರಾಜ್ಯಸರ್ಕಾರಕ್ಕೆ ಬರಬೇಕು. ಈ ಕಡೆ ಸಾವಿರಾರು ಐ.ಪಿ. ಸೆಟ್ಟುಗಳನ್ನು ಕೂಡಿಸಿದ್ದಾರೆ. ಆದರೆ ಯಾರೂ ಕೇಳುವವರು ಇಲ್ಲ, ಆ ಅಧಿಕಾರ ಅಸಿಸ್ಟೆಂಟ್ ಇಂಜಿನಿಯರಿಂಗ್‌ಗೆ ಕೊಡಬೇಕು, ಆ ಅಸಿಸ್ಟೆಂಟ್ ಇಂಜಿನಿಯರ್ ಕೂಡ ನಮ್ಮಲ್ಲಿ ರೈತರು ಐ.ಪಿ. ಸೆಟ್ಟು ಕೂಡಿಸಬೇಕಾದರೆ ಸಿಕ್ಕಾಪಟ್ಟೆ ಕಿರುಕುಳ ಕೊಡುತ್ತಿದ್ದಾರೆ. ಆ ಬಚಾವತ್ ಅವಾರ್ಡ್ ಏನಿದೆ ಅದಕ್ಕೆ ಕಾಯ್ದುಕೊಂಡಿದ್ದಾರೆ. ಅದಕ್ಕಿಂತ ಹೆಚ್ಚಿನ ಚಿಂತೆ ಇವರದ್ದೆ, ಆಂಧ್ರದಲ್ಲಿ ೧೫೦ ಟಿ.ಎಂ.ಸಿ. ಫೀಟ್‌ನಂಥ ತೆಲುಗುಗಂಗಾ ಯೋಜನೆಗಳನ್ನು ಹಾಕಿಕೊಳ್ಳುತ್ತಾರೆ. ಇವರಿಗೆ ಚಿಂತೆ ಇಲ್ಲ, ಆದರೆ, ನಮ್ಮಲ್ಲಿ ಸ್ವಲ್ಪ ಐ.ಪಿ. ಸೆಟ್ಟು ಕಟ್ಟಬೇಕಾದರೂ ನಮ್ಮ ಅಧಿಕಾರಿಗಳೆ ಕಿರುಕುಳ ಕೊಡುತ್ತಿದ್ದಾರೆ. ಇಂಥ ಪರಿಸ್ಥಿತಿ ಇದೆ. ಅಷ್ಟೆ ಅಲ್ಲ ನಮ್ಮ ಭಾಗದ ಕೆಲವು ಯೋಜನೆಗಳ ನೀರನ್ನು ಕೂಡ ಕಡಿಮೆ ಮಾಡುತ್ತಿದ್ದಾರೆ. ಏಕೆಂದರೆ ಚಿಂಚೊಳ್ಳಿ ತಾಲ್ಲೂಕಿನಲ್ಲಿ ಲೋಯರ್ ಮುಲ್ಲಾಮಾರಿ ಪ್ರಾಜೆಕ್ಟ್

ಇದೆ, ಅದೇ ರೀತಿ ಯಾದಗಿರಿಯಲ್ಲಿ ಹತ್ತಿಕೂಣಿ ಎಂದು ಇದೆ. ಇದರ ನೀರು ರಿವೈಸ್ಡ್ ಸ್ಕೀಮ್‌ನಲ್ಲಿ ಕಡಿಮೆ ಮಾಡಿದ್ದಾರೆ. ಏಕೆಂದರೆ ಇದು ಬಚಾವತ್ ಅವಾರ್ಡ್‌ನ ಪ್ರಕಾರ 'ಎ, ಬಿ' ಸ್ಕೀಮ್‌ನಲ್ಲಿ ಯಾರ್‍ಯಾರಿಗೆ ಎಷ್ಟು ನೀರು ಹಂಚಬೇಕೆಂದು ನಿಮಗೆ ಕಡಿಮೆ ಮಾಡಬೇಕೆಂದು ಇದೆ. ನಮ್ಮ ಯೋಜನೆಗಳನ್ನು ಕಡಿಮೆ ಮಾಡಬೇಕೆಂದು ಅವರು ಏನು ಇವತ್ತು ಸರ್ಪ್ಲಸ್ ನೀರು ಬರುವುದಿದೆ 'ಬಿ' ಸ್ಕೀಮ್‌ನಲ್ಲಿ ಅದನ್ನು ಹೇಗೆ ಹಂಚಬೇಕೆಂದು ಇವರಿಗೆ ಗೊತ್ತಿಲ್ಲ. 'ಎ' ಸ್ಕೀಮ್‌ನಲ್ಲೂ ಕೂಡ ಆ ನೀರನ್ನು ಹೇಗೆ ಉಳಿಸಿಕೊಳ್ಳಬೇಕು ಎಂಬ ಬಗ್ಗೆ ನಮ್ಮ ಸರ್ಕಾರಕ್ಕೆ ಗೊತ್ತಿಲ್ಲ. ಅದರ ಬಗ್ಗೆ ಚಿಂತೆಯೂ ಇಲ್ಲ, ಗೊತ್ತೂ ಇಲ್ಲ. ಆದರೆ ಸಣ್ಣ ಸಣ್ಣ ಲೋಯರ್ ಮುಲ್ಲಾಮಾರಿಯಾಯಿತು, ಹತ್ತಿಕೂಣಿಯಾಯಿತು ಅಂಥದ್ದರ ನೀರನ್ನು ಇವತ್ತು ಕಡಿಮೆ ಮಾಡುತ್ತಿದ್ದಾರೆ. ಇದು ಸರ್ಕಾರದ ನೀರಾವರಿ ನೀತಿಯಾಗಿದೆ. ಆರ್ಟಿಕಲ್ ೩೭೧ರ ಬಗ್ಗೆ ನಾನು ಹೇಳಬಯಸುತ್ತೇನೆ. ಹೋದ ಅಧಿವೇಶನದಲ್ಲಿ ಕೂಡ ನಾನು ಅದರ ಬಗ್ಗೆ ಮಾತನಾಡಲು ಅವಕಾಶ ಸಿಗಲಿಲ್ಲ. ಆರ್ಟಿಕಲ್ ೩೭೧ ಎಂದಕೂಡಲೆ ಇದು ಹೈದ್ರಾಬಾದ್ ಕರ್ನಾಟಕದ ಸಲುವಾಗಿ ಏನೋ ಮಾಡುತ್ತಿದ್ದಾರೆಂದು ಕಲ್ಪನೆ. ಆರ್ಟಿಕಲ್ ೩೭೧ರ ಇತಿಹಾಸವೇ ಈ ರೀತಿ ಇದೆ, ಯಾವ ಹಿಂದುಳಿದ ರಾಜ್ಯಗಳು ದೇಶದ ಸ್ವಾತಂತ್ರ್ಯವಾಗುವುದಕ್ಕಿಂತ ಮೊದಲು ಬಹಳ ಹಿಂದುಳಿದ ಅಂಥ ರಾಜ್ಯದಲ್ಲಿ ಹಿಂದುಳಿದ ಪ್ರದೇಶದ ಪ್ರೊಟೆಕ್ಷನ್ ಸಲುವಾಗಿ ಅಂಥ ರಾಜ್ಯಗಳಿಗೆ ೩೭೧ರ ರೀತ್ಯ ಒಂದು ಅಧಿಕಾರ ಬರುತ್ತದೆ. ಒಂದು ಪ್ರದೇಶಗಳ ಸಲುವಾಗಿ ವಿಶೇಷ ಪ್ರಾವಿಜನ್ ಮಾಡುವ ಸಲುವಾಗಿ ಆರ್ಟಿಕಲ್ ೩೭೧ ಮಾಡಲಾಗಿದೆ. ಈ ದೇಶದಲ್ಲಿ ಆರ್ಟಿಕಲ್ ೩೭೧ರ ಅಡಿಯಲ್ಲಿ ಅನೇಕ ರಾಜ್ಯಗಳನ್ನು ಸೇರಿಸಲಾಗಿದೆ. ಜನರಿಗೆ ಆರ್ಟಿಕಲ್ ೩೭೦ ಕಾಶ್ಮೀರದ ಬಗ್ಗೆ ಮಾತ್ರ ಗೊತ್ತು. ಆದರೆ ೩೭೧ರಲ್ಲಿ ಕೂಡ ಅನೇಕ ರಾಜ್ಯಗಳು ಇದ್ದಾವೆ. ಅಸ್ಸಾಂ, ಮಹಾರಾಷ್ಟ್ರ, ಆಂಧ್ರಪ್ರದೇಶ, ನಾಗಾಲ್ಯಾಂಡ್, ಅನೇಕ ರಾಜ್ಯಗಳು ಇವೆ. ಆದರೆ, ಆಯಾಯ ರಾಜ್ಯಗಳಿಗೆ ಅನೇಕ ಕಾರಣದ ಸಲುವಾಗಿ ಅದನ್ನು ಉಪಯೋಗಿಸುತ್ತಾರೆ. ನಾಗಾಲ್ಯಾಂಡ್ ಮತ್ತು ಅಸ್ಸಾಂನಲ್ಲಿ ಟ್ರೈಬಲ್ ಲಾಸ್, ಪ್ರತಿಯೊಂದು ಟ್ರೈಬಲ್ ಟ್ರೈಬ್ಸ್ ಬೇರೆ ಬೇರೆ ಕಸ್ಟಂ ಇದೆ, ಬೇರೆ ಬೇರೆ ಕಾನೂನುಗಳನ್ನು ಮಾಡುವ ಸಲುವಾಗಿ ಆರ್ಟಿಕಲ್ ೩೭೧ನ್ನು ಉಪಯೋಗಿಸುತ್ತಾರೆ. ಮಹಾರಾಷ್ಟ್ರದಲ್ಲಿ ರೀಜನಲ್ ಡೆವಲಪ್‌ಮೆಂಟ್ ಬೋರ್ಡ್‌ನ್ನು ಮಾಡುವುದಕ್ಕೆ, ವಿದರ್ಭಾ ಮತ್ತು ಬೇರೆ ಬೋರ್ಡ್‌ಗಳನ್ನು ಮಾಡುವ ಸಲುವಾಗಿ ಆರ್ಟಿಕಲ್ ೩೭೧ನ್ನು ಜಾರಿಯಲ್ಲಿ ತಂದರು. ಆಂಧ್ರಪ್ರದೇಶದಲ್ಲಿ ಅಡ್ಮಿಷನ್ ಮತ್ತು ಎಂಪ್ಲಾಯ್‌ಮೆಂಟ್ ಸಲುವಾಗಿ ಆಯಾ ಜಿಲ್ಲಾವಾರು ಅಥವಾ ವಿಭಾಗ ಮಟ್ಟದಲ್ಲಿ ಮೆರಿಟ್ ತಯಾರು ಮಾಡಿ ಅಲ್ಲಿಯ ಜನರಿಗೆ, ಯುವಕರಿಗೆ, ವಿದ್ಯಾರ್ಥಿಗಳಿಗೆ ಅಡ್ಮಿಷನ್ ಕೊಡುವುದು, ಅದೇ ರೀತಿ ಸರ್ಕಾರಿ ನೌಕರಿಗಳಲ್ಲಿ ರೀಜನ್-ವೈಸ್, ಡಿಸ್ಟ್ರಿಕ್ಟ್ ವೈಸ್ ಎಂಪ್ಲಾಯ್‌ಮೆಂಟ್ ಕೊಡುವ ಸಲುವಾಗಿ

ಅದನ್ನು ತರಲಾಗಿದೆ. ಈ ರೀತಿ ಅದೇ ಭಾಗದಿಂದ ಬಂದವರು ನಾವೂ ಕೂಡ ಹೈದ್ರಾಬಾದ್ ರಾಜ್ಯದಿಂದ ಬಂದವರು, ಹೈದ್ರಾಬಾದ್ ಕರ್ನಾಟಕದಿಂದ, ಅಲ್ಲಿ ಮೊದಲಿನಿಂದಲೂ ನೂರಾರು ವರ್ಷದಿಂದಲೂ ಮುಲ್ಕಿ ರೂಲ್ ಎಂದು ಇತ್ತು. ಹೈದ್ರಾಬಾದ್ ರಾಜ್ಯದಲ್ಲಿ ನಿಜಾಮ್ ರಾಜ್ಯದಲ್ಲಿ, ಆ ರೂಲ್‌ನ ಪ್ರಕಾರ ಸ್ಥಳೀಯರಿಗೆ ಸರ್ಕಾರಿ ಸೇವೆಯಲ್ಲಿ ಅವಕಾಶ ಕೊಡಬೇಕೆಂದು ಇದೆ. ಅದು ಮುಲ್ಕಿ ರೂಲ್ಸ್ ಎಂದು. ನೂರಾರು ವರ್ಷದಿಂದ ನಡೆಯುತ್ತಾ ಬಂದಿದೆ. ಆದರೆ ದೇಶದ ಸ್ವಾತಂತ್ರ್ಯವಾಯಿತು, ಭಾಷಾವಾರು ಪ್ರಾಂತ್ಯ ರಚನೆಯಾದ ಮೇಲೆ ಕೂಡ ಅದು ಹಾಗೆಯೆ ಜಾರಿಯಲ್ಲಿತ್ತು. ಅದಕ್ಕೆ ಪುನಃ ಯಾರೋ ಚಾಲೆಂಜ್ ಮಾಡಿ ಸುಪ್ರಿಂ ಕೋರ್ಟ್ ಕೂಡ ಆರ್ಟಿಕಲ್ ೩೭೧ರಲ್ಲಿ ಆಂಧ್ರಕ್ಕೆ ಸೇರಿಸಬೇಕು, ಮುಲ್ಕಿ ರೂಲ್ಸನ್ನು ಅಪ್‌ಹೆಲ್ಡ್ ಮಾಡಬೇಕು ಎಂದು ಆರ್ಡರ್ ಮಾಡಿದ ನಂತರ ಅದನ್ನು ಇಡೀ ಆಂಧ್ರಪ್ರದೇಶಕ್ಕೆ ಎಕ್ಸಟೆಂಡ್ ಮಾಡಿದ್ದಾರೆ. ಕೇವಲ ತೆಲಂಗಾಣಕ್ಕೆ ಇಲ್ಲ, ಇಲ್ಲಿ ಕೂಡ ಕರ್ನಾಟಕದಲ್ಲಿ ನಾವು ಕೇವಲ ಹೈದ್ರಾಬಾದ್ ಕರ್ನಾಟಕದ ಸಲುವಾಗಿ ಆರ್ಟಿಕಲ್ ೩೭೧ನ್ನು ಕೇಳುತ್ತಿಲ್ಲ, It can be extended to throughout the Karnataka. ಎಲ್ಲಾ ವಿಭಾಗದಲ್ಲಿ ಸ್ಥಳೀಯರಿಗೆ ಅವಕಾಶ ಸಿಗುತ್ತದೆ. ಎಲ್ಲಾ ಜಿಲ್ಲೆಗಳಿಗೆ ಸಿಗಲಿ. ಅದು ಕೋಲಾರಕ್ಕೆ ತುಮಕೂರಿಗೂ ಸಿಗಲಿ ಎಂದು ಕೇಳುತ್ತಿದ್ದೇನೆ. ಅದು ಅಂದಕೂಡಲೆ ಈಗ ಹೈದ್ರಾಬಾದ್ ಕರ್ನಾಟಕದ ಸಲುವಾಗಿ ಏನೋ ಮಾಡುತ್ತಿದ್ದಾರೆ ಎಂದು ತಿಳಿಯುತ್ತಿದ್ದಾರೆ. ಅದು ಕೇವಲ ಹೈದ್ರಾಬಾದ್ ಕರ್ನಾಟಕದ ಸಲುವಾಗಲ್ಲ, ಆಂಧ್ರಪ್ರದೇಶದಂತೆ ಅಂಥ ಒಂದು ಪ್ರಾವಿಜನ್ ಇಲ್ಲೂ ಕೂಡ ಮಾಡಬೇಕು. ಅದನ್ನು ಮಾಡಬೇಕಾದರೆ ಕೇಂದ್ರ ಸರ್ಕಾರ ಮೊದಲು ತಳ್ಳಿಹಾಕಿದರು, ಈಗ ಮತ್ತೆ ಹೊಸ ಸರ್ಕಾರ ಬಂದಮೇಲೆ ಮಾನ್ಯ ಮುಖ್ಯಮಂತ್ರಿಗಳಾದ ಧರ್ಮಸಿಂಗ್‌ರವರ ನೇತೃತ್ವದಲ್ಲಿ ಮತ್ತೆ ಡೆಲಿಗೇಷನ್ ತೆಗೆದುಕೊಂಡು ಹೋಗಿ ಕೇಂದ್ರ ಸರ್ಕಾರಕ್ಕೆ ನಾವು ಮನವರಿಕೆ ಮಾಡಿಕೊಟ್ಟಿದ್ದೇವೆ. ಮಾನ್ಯ ಶಿವರಾಜ್ ಪಾಟೀಲ್‌ರವರು ಒಪ್ಪಿಕೊಂಡಿದ್ದರು, ಮಾನ್ಯ ಪ್ರಧಾನ ಮಂತ್ರಿಗಳೂ ಕೂಡ ಒಪ್ಪಿಕೊಂಡಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಏಕೋ ಅಪಸ್ವರ ಬರುತ್ತಿದೆ. ಅದಕ್ಕೆ ಇವತ್ತು ಒಪ್ಪಿಗೆ ಕೊಡುತ್ತಿಲ್ಲ. ಕೇಂದ್ರ ಸರ್ಕಾರದವರು ತಳ್ಳಿ ಹಾಕುವ ಒಂದು ಹೆದರಿಕೆ ಇವತ್ತು ನಮ್ಮನ್ನು ಕಾಡುತ್ತಿದೆ. ಕಾರಣವೇನೆಂದರೆ, ಇವರಿಗೊಬ್ಬರಿಗೆ ಕೊಟ್ಟ ಮೇಲೆ, ಬೇರೆ ರಾಜ್ಯಗಳೂ ಇದೇ ರೀತಿಯಲ್ಲಿ ಕೇಳಬಹುದು ಎಂದು ಹೋಂ ಮಿನಿಸ್ಟರ್ ಹೇಳುತ್ತಾರೆ. ಇದಕ್ಕೆ ಅರ್ಥವೇ ಇಲ್ಲ. ೧೯೪೭ರಲ್ಲಿ ಆ ಬ್ರಿಟಿಷ್ ಪ್ರಧಾನ ಮಂತ್ರಿ ಇದ್ದಾಗ ಹಿಂದೂಸ್ತಾನಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಹಿಂದೂಸ್ತಾನಕ್ಕೆ ಸ್ವಾತಂತ್ರ್ಯ ಸಿಕ್ಕಿದ ಮೇಲೆ, ಜಗತ್ತಿನ ಬೇರೆ ರಾಷ್ಟ್ರಗಳೂ ಕೇಳಬಹುದು, ಸಿಲೋನ್ ಕೇಳಬಹುದು, ಬರ್ಮಾ ಕೇಳಬಹುದು. ನೇಪಾಳ ಕೇಳಬಹುದು, ಆದ್ದರಿಂದ ಸ್ವಾತಂತ್ರ್ಯ ಕೊಡುವುದೇ ಇಲ್ಲವೆಂದು ಹೇಳಬಹುದಾಗಿತ್ತು. ಯಾವಾಗ ಏನು

ಕೊಡಬೇಕಾಗುತ್ತದೋ, ಅದನ್ನು ಕೊಡಲೇಬೇಕಾಗುತ್ತದೆ. ಜನರ ಅವಶ್ಯಕತೆ ಏನಿದೆಯೋ, ಅದನ್ನು ಈಡೇರಿಸಬೇಕಾಗುತ್ತದೆ. ಮತ್ತೊಬ್ಬರು ಕೇಳಬಹುದು, ಇನ್ನೊಬ್ಬರು ಕೇಳಬಹುದು ಎಂದರೆ, ಅದಕ್ಕೆ ಅರ್ಥವೇ ಇರುವುದಿಲ್ಲ, ಆ ದೃಷ್ಟಿಯಿಂದ.... ಏಕೆಂದರೆ ಕಾರಣಗಳೂ ಕೂಡ ಇವೆ. ಒಂದು ಐತಿಹಾಸಿಕ ಕಾರಣ ಇದೆ. ಹೈದರಾಬಾದ್ ಸ್ಟೇಟ್‌ನಲ್ಲಿದ್ದ ಆ ಜಿಲ್ಲೆಗಳಿಗೆ ಇವತ್ತು ಹೆಚ್ಚಿನ ಅನ್ಯಾಯವಾಗುತ್ತಿದೆ. ೨-೩ ವರ್ಷಗಳ ಹಿಂದೆ ಪೊಲೀಸ್ ಹುದ್ದೆಗೆ ಸೆಲೆಕ್ಷನ್ ಆಯಿತು. ೨೦೦ ಪೊಲೀಸ್ ಹುದ್ದೆಗಳಿಗೆ ಆದ ನೇಮಕಾತಿಯಲ್ಲಿ ೯ ಜನರೂ ಕೂಡ ಆ ಭಾಗದವರು ಸೆಲೆಕ್ಟ್ ಆಗಲಿಲ್ಲ, ನಿನ್ನೆ-ಮೊನ್ನೆ ಕೂಡ ೩೦೦ಕ್ಕಿಂತ ಹೆಚ್ಚು ಸೆಲೆಕ್ಷನ್ ಆಯಿತು. ಅದರಲ್ಲಿ ಸಿಂಗಲ್ ಡಿಜಿಟ್ಸ್ ದಾಟಿಲ್ಲ ಬರೀ ಹೈದರಾಬಾದ್-ಕರ್ನಾಟಕವಲ್ಲ, ಇಡೀ ಉತ್ತರ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಸಬ್ ಇನ್ಸ್‌ಪೆಕ್ಟರ್ ನೌಕರಿಯಲ್ಲಿ ಹೀಗಾಗಿದೆ. ಮೊನ್ನೆ ನಾಲ್ಕು ದಿವಸಗಳ ಮೊದಲು ಟೀಚರ್ಸ್ ಸೆಲೆಕ್ಷನ್ ಆಯಿತು. ಇದು ಕಳೆದ ೫-೬ ವರ್ಷಗಳಿಂದ ನಡೆದಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರೈಮರಿ ಟೀಚರ್ಸ್ ಸೆಲೆಕ್ಷನ್ ೨೪೦ಕ್ಕಿಂತ ಹೆಚ್ಚು ಆಗಿದ್ದರೆ, ಅಲ್ಲಿ ಲೋಕಲ್‌ದವರು ೪೦ ಕೂಡ ನಮ್ಮವರು ಇಲ್ಲ, ಎಲ್ಲಾ ಹೊರಗಿನವರೇ. ಇದಕ್ಕೆ ಕಾರಣವೇನು? ಸ್ಟೇಟ್ ಲೆವೆಲ್ ಮೆರಿಟ್ ಎನ್ನುವಂತಹ ಒಂದು ಪಾಲಿಸಿ. ೧೯೯೮-೯೯ರಲ್ಲಿ ಕರ್ನಾಟಕ ಹೈ ಕೋರ್ಟ್ ನಲ್ಲಿ ಒಂದು ಜಡ್ಜ್‌ಮೆಂಟ್ ಆಯಿತು. ಆ ಜಡ್ಜ್‌ಮೆಂಟ್ ಪ್ರಕಾರ ಇವತ್ತು ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸ್‌ನಲ್ಲಿ ರಿಜಿಸ್ಟ್ರೇಷನ್ ಮಾಡುವ ಅವಶ್ಯಕತೆ ಇಲ್ಲ, ಡೈರೆಕ್ಟ್ ಆಗಿ ಯಾರು ಎಲ್ಲಿಯಾದರೂ ಅಪ್ಲಿಕೇಷನ್ ಹಾಕಬಹುದು. ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸ್‌ನಲ್ಲಿ ರಿಜಿಸ್ಟ್ರೇಷನ್ ಮಾಡುವಂತಹ ಷರತ್ತು ಏನಿತ್ತೋ, ಆ ಷರತ್ತು ಪ್ರಕಾರ ಆಯಾ ಡಿಸ್ಟ್ರಿಕ್ಟ್‌ನವರು ಅಲ್ಲೇ ಎಂಪ್ಲಾಯ್‌ಮೆಂಟ್ ಪಡೆಯುತ್ತಿದ್ದರು. ಆದರೆ ಇವತ್ತು ಅದು ಗ್ಲೋಬಲೈಸೇಷನ್ ತರಹ ಆಗಿ ಬಿಟ್ಟಿದೆ. ಎಲ್ಲಾ ಡಿಸ್ಟ್ರಿಕ್ಟ್‌ಗಳವರು ಬಂದು ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಅರ್ಜಿ ಹಾಕಿಕೊಳ್ಳುತ್ತಾರೆ. ಸ್ಟೇಟ್ ಲೆವೆಲ್ ಮೆರಿಟ್ ಎಂದರೆ ಎಲ್ಲಾ ಅವರೇ ಬರುತ್ತಾರೆ. ಅಲ್ಲಿ ಅವರು ಸೆಲೆಕ್ಟ್ ಆಗಿದ್ದರೂ ಸಹ ಅವರು ಅಲ್ಲಿ ಉಳಿಯುವುದಿಲ್ಲ, ಅವರು ಮತ್ತೆ ಈ ಕಡೆಗೆ ತಮ್ಮ ತಮ್ಮ ಜಿಲ್ಲೆಗಳಿಗೆ ಬರುತ್ತಾರೆ. ಅಲ್ಲಿಯ ಶಾಲೆಗಳೆಲ್ಲಾ ಹಾಗೇ ಉಳಿಯುತ್ತವೆ. ಸ್ಟಾಂಡರ್ಡ್ ಹೆಚ್ಚಿಸಬೇಕಾದರೆ ಹೇಗೆ ಹೆಚ್ಚಿಸಬೇಕು? ಸಾಧ್ಯ ಹೇಗಿದೆ? ಗುಲ್ಬರ್ಗಾ ಯೂನಿವರ್ಸಿಟಿಯಲ್ಲಿ ಗೋಲ್ಡ್ ಮೆಡಲಿಸ್ಟ್ ಆಗಿದ್ದು ಬಿ.ಎ. ಪಾಸಾಗಿರುವ ಔರಾದ್ ತಾಲ್ಲೂಕಿನ ಒಬ್ಬ ವಿದ್ಯಾರ್ಥಿಗೆ ರಾಜ್ಯ ಮಟ್ಟದಲ್ಲಿ ಯಾವುದೋ ಒಂದು ಸೆಲೆಕ್ಷನ್‌ಗೆ ಅರ್ಜಿ ಹಾಕಿದರೆ, ಅವನಿಗೆ ಅಲ್ಲಿಗೆ ಇಂಟರ್‌ವ್ಯೂ ಕಾಲ್ ಕೂಡ ಬರಲಿಲ್ಲ, ಇದಕ್ಕೆ ಕಾರಣವೇನೆಂದರೆ, ಅವನು ಗುಲ್ಬರ್ಗಾ ಯೂನಿವರ್ಸಿಟಿನಲ್ಲಿ ಹೈಯೆಸ್ಟ್ ಮಾರ್ಕ್ಸ್ ಶೇಕಡ ೭೫ ತೆಗೆದುಕೊಂಡು ಉತ್ತೀರ್ಣನಾಗಿದ್ದರೆ, ಸ್ಟೇಟ್ ಮೆರಿಟ್ ಶೇಕಡ ೮೫ ಗೆ ಬಂದು ನಿಂತಿದೆ. ಗೋಲ್ಡ್ ಮೆಡಲಿಸ್ಟ್‌ಗೆ ಇಂಟರ್‌ವ್ಯೂ ಸಹ

ಬರುವುದಿಲ್ಲವೆಂದರೆ, ಇದು ಇಂಬ್ಯಾಲೆನ್ಸ್ ಹೇಗೆ ಆಗುವುದಿಲ್ಲ? ಇದೇ ತರಹ ಬೆಳೆಯುತ್ತಾ ಹೋಗುತ್ತದೆ. ಇದನ್ನು ಸರಿಪಡಿಸಿ ಎಂದರೆ, ಆರ್ಟಿಕಲ್ ೩೭೧ಗೆ ಅಮೆಂಡ್‌ಮೆಂಟ್ ಮಾಡಬೇಕು ಎನ್ನುತ್ತಾರೆ. ಕಳೆದ ಐದಾರು ವರ್ಷಗಳಿಂದ ಅದೇ ಮಾತನ್ನು ಹೇಳುತ್ತಿದ್ದಾರೆ. ಪಟೇಲರು ಇದ್ದಾಗ ನಾವು ಇದನ್ನು ಪ್ರಸ್ತಾಪಿಸಿದ್ದೆವು. ಆಮೇಲೆ ಎಸ್.ಎಂ.ಕೃಷ್ಣರವರ ನೇತೃತ್ವದಲ್ಲಿ ಹೊಸ ಸರ್ಕಾರ ಬಂತು. ಆಗಲೂ ಪ್ರಯತ್ನ ಮಾಡಿದೆವು. ಇವತ್ತೂ ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಅದು ಆಗುತ್ತಲೇ ಇಲ್ಲ, ಹೊಸ ಹೊಸ ರಾಜ್ಯಗಳನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ತಿದ್ದುಪಡಿ ಮಾಡುತ್ತಲೇ ಇದ್ದಾರೆ. ಶಿವರಾಜ್ ಪಾಟೀಲ್‌ಯವರಾಗಲಿ, ಅಡ್ವಾನಿಯವರಾಗಲಿ, "ಜಾರ್ಖಂಡ್ ರಾಜ್ಯ ರಚನೆ ಮಾಡಿದರೆ, ಮತ್ತೊಬ್ಬರು ಇನ್ನೊಂದು ರಾಜ್ಯ ರಚನೆ ಮಾಡಿ ಎಂದು ಕೇಳಬಹುದು" ಎಂದು ಯಾವತ್ತೂ ಸಹ ಹೇಳಿಯೇ ಇಲ್ಲ, ಆದರೆ ನಾವು ಆರ್ಟಿಕಲ್ ೩೭೧ಗೆ ಅಮೆಂಡ್‌ಮೆಂಟ್ ತನ್ನಿ ಎಂದರೆ, ಅದೇ ತರಹ ಮತ್ತೊಬ್ಬರು ಕೇಳಬಹುದು ಎಂದು ಹೇಳುತ್ತಾರೆ. ಇದರಿಂದಾಗಿ ಇವತ್ತು ದೇಶದಲ್ಲಿ ಪ್ರತ್ಯೇಕ ರಾಜ್ಯದ ಹೋರಾಟಗಳು ಶುರುವಾಗಿವೆ. ಮೊನ್ನೆ ನಾರ್ತ್-ಈಸ್ಟ್‌ನಲ್ಲಿ ಆಯಿತು, ಇವತ್ತು ಕಾಶ್ಮೀರದಲ್ಲೂ ಪ್ರಾಬ್ಲಮ್ಸ್ ಕ್ರಿಯೆಟ್ ಆಗುತ್ತಿದೆ. ಇದಕ್ಕೆ ಕಾರಣವೇನೆಂದರೆ, ಲೋಕಲ್ ಜನರಿಗೆ ನೀವು ಇವತ್ತು ಮಹತ್ವ ಕೊಡುತ್ತಿಲ್ಲ, ಲೋಕಲ್ ಯುವಕರು ಮತ್ತು ವಿದ್ಯಾರ್ಥಿಗಳಿಗೆ ಎಂಪ್ಲಾಯ್‌ಮೆಂಟ್ ಕೊಡುತ್ತಿಲ್ಲ, ಹೊರಗಿನ ಬ್ಯೂರಿಯೋಕ್ರಾಫ್ಟ್ ಇರುತ್ತಾರೆ, ಸಿಕ್ಕಾಪಟ್ಟೆ ಅನ್ಯಾಯ ಮಾಡುತ್ತಾರೆ. ತಮ್ಮ ಜನರನ್ನೇ ನೇಮಕಾತಿ ಮಾಡಿಕೊಳ್ಳುತ್ತಾರೆ. ಕರ್ನಾಟಕದಲ್ಲೂ ಅದೇ ತರಹ ಆಗುತ್ತಿದೆ. ಐಎಎಸ್ ಆಫೀಸರ್ಸ್‌ಗೆ ಕರ್ನಾಟಕದಲ್ಲಿ ಇರುವಷ್ಟು ರೆಡ್ ಕಾರ್ಪೆಟ್ ಬೇರೆ ಎಲ್ಲಿಯೂ ಸಹ ಇಲ್ಲ, Karnataka is the red carpet for the IAS people. ಎಲ್ಲಾ ಹೊರಗಿನಿಂದ ಬರುತ್ತಾರೆ, ಅವರ ಜೊತೆಗೆ ತಂದು ತುಂಬುತ್ತಾರೆ, ಬೇಕಾಗಿದ್ದನ್ನು ಮಾಡುತ್ತಾರೆ. ಇದರಿಂದ ಅಶಾಂತಿ ಬೆಳೆಯುತ್ತದೆ. North-east ನಲ್ಲಿ ಆಗಿದ್ದೂ ಅದೇ, ಕಾಶ್ಮೀರದಲ್ಲಿ ಆಗಿದ್ದೂ ಅದೇ. ನನಗೆ ನೆನಪಿದ್ದಂತೆ ೧೯೬೮ರಲ್ಲಿ National Integration Commission Chairman ಆಗಿದ್ದ ಅಶೋಕ್ ಮೆಹ್ತಾರವರು, Dis-integration ತಡೆಯಬೇಕಾದರೆ, ಅಶಾಂತಿ ತಡೆಯಬೇಕಾದರೆ, ಲೋಕಲ್ ಜನರಿಗೆ ಪ್ರಿಫರೆನ್ಸ್ ಕೊಡಬೇಕು ಎಂದು ಹೇಳಿದ್ದರು. ಆದರೆ ಇವತ್ತು ಅವರಿಗೆ ಕೊಡುತ್ತಿಲ್ಲ, ಇದರಿಂದ ಎಲ್ಲಾ ಕಡೆಗಳಲ್ಲೂ dis-integration ಬೆಳೆಯುತ್ತಿದೆ. ಎಂಪ್ಲಾಯ್‌ಮೆಂಟ್ ಒಂದರ ಸಲುವಾಗಿಯೇ ರಾಜ್ಯ ಒಡೆಯುವಂತಹ ಮಾತುಗಳು ಕೇಳಿ ಬರುತ್ತಿವೆ. ಅಂದಿನ ದಿನಗಳಲ್ಲಿ ಎಂಪ್ಲಾಯ್‌ಮೆಂಟ್ ಮತ್ತು ಇತರ ಎಲ್ಲಕ್ಕಿಂತ important factor ...... ದೇಶದಲ್ಲಿ ಮಂಡಲ ಆಯೋಗದ ರಿಪೋರ್ಟ್ ಬಂದಿತು. ಅದು ಯಾವುದರ ಸಲುವಾಗಿ ಬಂತು? ಸರ್ಕಾರಿ ನೌಕರಿಯ ಸಲುವಾಗಿಯೇ ಬಂತೇ?

ಅಲ್ಲ, ಬೇರೆ ಕಾರಣಗಳ ಸಲವಾಗಿಯೂ ಬಂತು. ಸರ್ಕಾರಿ ನೌಕರಿಗಳಲ್ಲಿ ಕೇವಲ 1-2% ಜನರು ಮಾತ್ರ ಕೆಲಸ ಮಾಡುತ್ತಾರೆ. ಅದಕ್ಕಿಂತ ಹೆಚ್ಚಿಗೆ ಮಾಡುವುದಿಲ್ಲ. ಏಕೆಂದರೆ, ಒಂದು secured income ಅದು. ಸರ್ಕಾರಿ ನೌಕರರ ಸಂಬಳದ ಮೇಲೆ ಎಷ್ಟು ಖರ್ಚಾಗುತ್ತದ್ದೆ? ನಮ್ಮ ಬಡ್ಜೆಟ್ಟಿನ ಅರ್ಧಕ್ಕಿಂತ ಹೆಚ್ಚು ಅವರಿಗೇ ಖರ್ಚಾಗುತ್ತದೆ. ಅದರಿಂದ ನಮಗೆ equitable share ಬೇಕು ಎಂದು ಇವತ್ತು ಎಲ್ಲರೂ ಕೇಳುತ್ತಾರೆ. ಆ ದೃಷ್ಟಿಯಿಂದ ನಾನು ಇವತ್ತು ಇವರಿಗೆ ಕೇಳುತ್ತಿದ್ದೇನೆ. ಕೇಂದ್ರದಲ್ಲಿ ಮನ್‌ಮೋಹನ್‌ಸಿಂಗ್ ಪ್ರಧಾನಿಯಾಗಿ ಹೊಸ ಸರ್ಕಾರ ಬಂದ ಮೇಲೆ ಎರಡು ಬಡ್ಜೆಟ್‌ಗಳಾದವು. ಆ ಎರಡು ಬಡ್ಜೆಟ್‌ಗಳಲ್ಲಿಯೂ ಕೂಡ ಆರ್ಟಿಕಲ್ ೩೭೧ ಬಗ್ಗೆ ಎಂದೂ ಅವರು ಆಶ್ವಾಸನೆ ಕೊಟ್ಟಿಲ್ಲ. ನಾವು ಡೆಲಿಗೇಷನ್ ತೆಗೆದುಕೊಂಡು ಹೋದಾಗ ಮಾತ್ರ ನಾವು ನೋಡುತ್ತೇವೆ ಎಂದು ಹೇಳಿದರು. ನಮ್ಮ ಮುಖ್ಯಮಂತ್ರಿಗಳಾದ ಧರ್ಮಸಿಂಗ್‌ರವರು leader of the legislature party ಆದ ಕೂಡಲೇ, ಇನ್ನೂ ಅವರು ಓತ್ ತೆಗೆದುಕೊಂಡಿರಲಿಲ್ಲ, ಅದಕ್ಕಿಂತ ಮೊದಲು ಅವರು, 'Article 371 amendment ಮಾಡಿಯೇ ಬಿಡುತ್ತೇವೆ' ಎಂದು ಹೇಳಿದ್ದರು. ಅವರಿಗೆ ಹೋಗಿ congratulations ಮಾಡಿದೆವು. ಅದನ್ನು ನಾವು ಸ್ವಾಗತ ಮಾಡಿದೆವು. ಪುನಃ ಪುನಃ ಅವರನ್ನು ಭೇಟಿಯಾದಾಗಲೆಲ್ಲಾ ಉರ್ದುವಿನಲ್ಲಿ ಹೇಳುವಂತೆ "ಮುಬಾರಕ್ ಬಾತ್" ಎಂದು ಅವರಿಗೆ ಹೇಳುತ್ತಿದ್ದವು. ಆದರೆ ದುರ್ದೈವದಿಂದ ಇತ್ತೀಚೆಗೆ ಏಕೋ ಮೆತ್ತಗಾಗಿದ್ದಾರೆ. ಅದಕ್ಕೆ ಕಾರಣವೇನೆಂಬುದು ಗೊತ್ತಾಗುತ್ತಿಲ್ಲ. "ಬರಾಬರ್ ಲಾಯೇಂಗೆ, ಸಬ್ ಲಾಯೇಂಗೆ" ಎಂದು ಅವರು ಹೇಳುತ್ತಿರುತ್ತಾರೆ. ನೌಕರಿಗಳು ಪ್ರತಿಯೊಂದು ಕಡೆಗೂ ನಡೆದಿವೆ. ಐದೈದು ಸಾವಿರ ಎಲ್ಲಾ ಕಡೆಗೂ ರಿಕ್ರ್ಯೂಟ್‌ಮೆಂಟ್ ಆಗುತ್ತಿದೆ. ಎಲ್ಲಾ ಬೇರೆ ಭಾಗದವರಿಗೆ ಮಾಡಿದರೆ ಹೇಗೆ? ಅಲ್ಲಿಯ ಜನರು ಯಾವ ಕಡೆಗೆ ಹೋಗಬೇಕು? ಅಲ್ಲಿಯ ಯುವಕರು ಯಾವ ಕಡೆಗೆ ಹೋಗಬೇಕು? ಅಲ್ಲೂ ಕೂಡ ಇವತ್ತು ಸಾಕಷ್ಟು ಎಜುಕೇಟೆಡ್ ಜನರಿದ್ದಾರೆ. ಅವರಿಗೆ ಅವಕಾಶ ಇಲ್ಲ. ಇದರಿಂದ ಕೆಲವೊಂದು ಸಲ ಅವರು ಸಿಟ್ಟಿಗೆದ್ದು ಪ್ರತ್ಯೇಕ ರಾಜ್ಯ ಕೇಳುತ್ತಾರೆ. "ಪ್ರತ್ಯೇಕ ರಾಜ್ಯ ಬೇಡ, ೩೭೧ ಇರಲಿ" ಎಂದು ನೀವು ಹೇಳುತ್ತೀರಿ. ಆದರೆ ೩೭೧ ಅಮೆಂಡ್‌ಮೆಂಟ್ ಮಾಡುವುದಿಲ್ಲ. ಪ್ರತ್ಯೇಕ ರಾಜ್ಯವನ್ನಂತೂ ಮಾಡುವುದಿಲ್ಲ. ಇದೇ ಪರಿಸ್ಥಿತಿ ಮುಂದುವರೆದಾಗ, ಕೊನೆಗೆ ಬರೇ ಹೈದರಾಬಾದ್-ಕರ್ನಾಟಕವಲ್ಲ, ಉತ್ತರ ಕರ್ನಾಟಕದ ಮೇಲೆ ಅನ್ಯಾಯವಾಗುತ್ತಿದೆ. ಹುಬ್ಬಳ್ಳಿಯಲ್ಲಿ ರೈಲ್ವೆ ವಲಯ ಬಂದಾಗ, ಅದರ ಬಗ್ಗೆ ಕೇಸ್ ಹಾಕಿ ಅಲ್ಲಿಂದ ಅದನ್ನು ಇಲ್ಲಿಗೆ ಬೆಂಗಳೂರಿಗೆ ತಂದು ಹಾಕಿದರು. ಪ್ರತಿಯೊಂದರಲ್ಲೂ ಈ ರೀತಿಯಾಗಿ ಮಾಡಿದರೆ ಹೇಗೆ? ರಾಜ್ಯ ಒಡೆಯುವ ಕೆಲಸವನ್ನು

ಅಧಿಕಾರದಲ್ಲಿ ಇರುವವರು ಮಾಡುತ್ತಿದ್ದಾರೆ, ಜವಾಬ್ದಾರಿ ಸ್ಥಾನದಲ್ಲಿ ಇದ್ದವರು ಮಾಡುತ್ತಿರ್ದ್ದಾರೆ. ನಾವು ಮಾಡುತ್ತಿಲ್ಲ, ಇದೇ ಪರಿಸ್ಥಿತಿ ಮುಂದವರೆದರೆ, ಬಹುಶಃ ಇಡೀ ಉತ್ತರ ಕರ್ನಾಟಕ ಒಂದು ರಾಜ್ಯ ಮಾಡಬೇಕಾಗುತ್ತದೆ ಎಂದು ಕೇಳುವಂತಹ ಪರಿಸ್ಥಿತಿ ಬರಬಹುದು. ಆ ದೃಷ್ಟಿಯಿಂದ ಇವತ್ತು ಆರ್ಟಿಕಲ್ ೩೭೧ಗೆ ಅಮೆಂಡ್‌ಮೆಂಟ್ ಅನ್ನು ಮಾಡಿ. ಅಮೆಂಡ್‌ಮೆಂಟ್ ಮಾಡದಿದ್ದರೂ ಕೂಡ ಅನೇಕ ದಾರಿಗಳಿವೆ. ಇವತ್ತು ಹೈಕೋರ್ಟ್‌ನಿಂದ ಜಡ್ಜ್‌ಮೆಂಟ್ ಏನಾಗಿದೆಯೋ, ಆ ಜಡ್ಜ್‌ಮೆಂಟ್ ಅನ್ನು ಕೂಡ ಈ ಅಧಿಕಾರಿಗಳು ತಪ್ಪಾಗಿ interpretation ಮಾಡಿ ಎಲ್ಲಾ ಕಡೆಗೂ ಆರ್ಡರ್ಸ್ ಹಂಚಿದ್ದಾರೆ. ಅದರ ಬಗ್ಗೆ ನಾವು ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಕೇಳಿಕೊಂಡಿದ್ದೇವೆ. ಜಡ್ಜ್‌ಮೆಂಟ್ ಇಂಟರ್‌ಪ್ರಿಟೇಷನ್ ಮಾಡಿ ೧೯೯೮ರಲ್ಲಿ ಏನೊಂದು ಆರ್ಡರ್ ಅನ್ನು ಕಳುಹಿಸಿದ್ದಾರೋ, ಏನೊಂದು ನೋಟಿಫಿಕೇಷನ್ ಮಾಡಿದ್ದಾರೋ, ಅದು wrong interpretation ಆಗಿದೆ. High Court judgement ನ wrong interpretation ಮಾಡಿ ಇವತ್ತು employment exchange ಆಫೀಸ್‌ಗಳನ್ನೆಲ್ಲಾ defunct ಮಾಡಿದ್ದಾರೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದರೆ, ಆ ಬಗ್ಗೆ ಒಂದು ಮೀಟಿಂಗ್ ಸಹಿತ ಕರೆಯಲು ಸಿದ್ಧರಿಲ್ಲ, ಪ್ರತಿಯೊಂದಕ್ಕೂ ಆಗುವುದಿಲ್ಲ ಎನ್ನುತ್ತಾರೆ. ಮೀಟಿಂಗ್ ಕರೆದು ಇದರ ಬಗ್ಗೆ ಚರ್ಚಿಸಿ. ನಿಮಗೆ ಗೊತ್ತಿಲ್ಲ, ಅದನ್ನು ಗೊತ್ತು ಪಡಿಸಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಮೀಟಿಂಗ್ ಕರೆದು ಚರ್ಚಿಸಿ ಎಂದು ಹೇಳಿದೆವು, ನಮ್ಮ ಜೊತೆ ಚರ್ಚಿಸಿ, ನಿಮಗೆ ಗೊತ್ತಿಲ್ಲ, ಗೊತ್ತುಪಡಿಸಲಿಕ್ಕೆ ಪ್ರಯತ್ನ ಮಾಡಿ ಎಂದು ಹೇಳಿದೆವು, ಪ್ರಯತ್ನ ಮಾಡಲಿಲ್ಲ, ಈ ದಿವಸದಿಂದ ಇದೇ ಪರಿಸ್ಥಿತಿ ಮುಂದುವರೆದಿದೆ. ಬೀದರ್‌ಗೆ ಒಂದು ವೆಟರ್ನರಿ ಯೂನಿವರ್ಸಿಟಿ ಮಾಡಿದ್ದಾರೆ. ಬೀದರ್‌ಗೆ ಒಂದು ಮೆಡಿಕಲ್ ಕಾಲೇಜು ಕೊಟ್ಟಿದ್ದಾರೆ. ಯಾರ ಸಲುವಾಗಿ ನಮ್ಮ ಜನರಿಗೆ ಅಲ್ಲಿ ಎಂಪ್ಲಾಯ್‌ಮೆಂಟ್ ಸಿಗುವುದಿಲ್ಲ, ಬೀದರ್ ಯೂನಿವರ್ಸಿಟಿಯಲ್ಲಿ ಓದುವವರು ನಮ್ಮವರು ಯಾರೂ ಇಲ್ಲ, ಓದಿಸುವವರೂ ನಮ್ಮವರು ಇಲ್ಲ. ಯೂನಿವರ್ಸಿಟಿ ವೈಸ್ ಛಾನ್ಸಲರ್ ಇಲ್ಲ, ಸುಮ್ಮನೆ ಬಿಲ್ಡಿಂಗ್ ನೋಡಿ ಖುಷಿ ಪಡಬೇಕು. ಮುಖ್ಯಮಂತ್ರಿಗಳು ಹೋಗಿ ಉದ್ಘಾಟನೆ ಮಾಡಿದ್ದಾರೆ. ಯಾವುದರ ಸಲುವಾಗಿ ಬೇಕು? ಅಂತಹ ಯೂನಿವರ್ಸಿಟಿ ಬರೀ ಬಿಲ್ಡಿಂಗ್ ಸಲುವಾಗಿ ಬೇಕಾ? ಅಲ್ಲಿ ನಮ್ಮ ಜನರಿಗೆ ಚಪ್ರಾಸಿ ನೌಕರಿ ಕೂಡ ಸಿಗುವುದಿಲ್ಲ ಏತಕ್ಕೋಸ್ಕರ ಅಂತಹ ಯೂನಿವರ್ಸಿಟಿ ಬೇಕು? ಇಂತಹ ಮೆಡಿಕಲ್ ಕಾಲೇಜುಗಳು ಯಾವುದರ ಸಲುವಾಗಿ ಬೇಕು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅಲ್ಲಿ ಮೆಡಿಕಲ್ ಕಾಲೇಜು ಏಕೆ ಬೇಕು ಎಂದರೆ, ನೀವು ಅಲ್ಲಿಂದ ಬಂದಿದ್ದೀರಿ, ಬಂಡೆಪ್ಪ ಖಾಶೆಂಪುರ್ ಬಂದಿದ್ದಾರೆ, ನಿಮ್ಮ ನೇಟಿವ್ ಪ್ಲೇಸ್, ಆದಕ್ಕೆ ನಿಮಗೆ ಗೌರವ ಕೊಡಬೇಕು ಎನ್ನತಕ್ಕಂತಹ ದೃಷ್ಟಿಯಿಂದ ಬೀದರ್‌ಗೆ ಒಂದು ಮೆಡಿಕಲ್ ಕಾಲೇಜ್ ಮಾಡಿದ್ದಾರೆ. ಏಕೆ ಮಾಡಿದ್ದೀರಿ ಎಂದು ಹೇಳಿದರೆ ಏನು ಹೇಳಬೇಕು?

ಶ್ರೀ ಬಂಡೆಪ್ಪ ಖಾಶೆಂಪುರ್ : ಮೆಡಿಕಲ್ ಕಾಲೇಜ್ ಮತ್ತು ವೆಟರ್ನರಿ ಆಸ್ಪತ್ರೆ ಮಾಡಿರುವುದರಿಂದ ಬಹಳ ಉಪಯೋಗ ಆಗಿದೆ.

ಶ್ರೀ ವೈಜನಾಥ್ ಪಾಟೀಲ್ : ಆದರೆ ಉಪಯೋಗವಾಗುತ್ತಿಲ್ಲ. ಬೀದರ್ ಸಲುವಾಗಿ ಮೆಡಿಕಲ್ ಕಾಲೇಜ್ ಉಪಯೋಗ ಆಗುತ್ತಿಲ್ಲ. ಅಂತಹ ಮೆಡಿಕಲ್ ಕಾಲೇಜ್ ಅವಶ್ಯಕತೆ ಇಲ್ಲ, ಅಂತಹ ವೆಟರ್ನರಿ ಯೂನಿವರ್ಸಿಟಿ ಅವಶ್ಯಕತೆ ಇಲ್ಲ, ಯಾವ ತನಕ ಈ ಸಿಸ್ಟಮ್ ಏನಿದೆ, ರಾಜ್ಯಮಟ್ಟದ ಸಿಸ್ಟಮ್, ಈ ಸಿಸ್ಟಮ್ ಮೆರಿಟ್ ಸಿಸ್ಟಮ್ ಅದು ಬದಲಾವಣೆ ಮಾಡುವ ಹಾಗೆ ಇಲ್ಲ, ಆ ತನಕ ಅಂತಹ ಯೂನಿವರ್ಸಿಟಿ ಯಾವುದರ ಸಲುವಾಗಿ ನಮಗೆ ಬೇಕು. ಬಿಲ್ಡಿಂಗ್ ನೋಡಿ ಖುಷಿ ಆಗುವ ಸಲುವಾಗಿ ಯಾವುದರ ಸಲುವಾಗಿ ಬೇಕು ತಾವೇ ಹೇಳಿ. ತಾವೂ ಕೂಡ ಬಿಲ್ಡಿಂಗ್ ಉದ್ಘಾಟನೆಗೆ ಹೋಗಿದ್ದಿರಿ. ವಿದ್ಯಾರ್ಥಿಗಳಲ್ಲಿ ಒಂದು ಸೈಕಲಾಜಿಕಲ್ ಸ್ಯಾಟಿಸ್‌ಫ್ಯಾಕ್ಷನ್ ನಾವು ಬೀದರ್‌ನಿಂದ ಬಂದಿದ್ದೇವೆಂದು ಹೇಳುವುದು.

ತಾವೂ ಬೀದರ್‌ನಿಂದ ಬಂದವರು. ನಾನು ಒಬ್ಬ ಅಲ್ಲ, ತಾವೂ ಕೂಡ ಬೀದರ್‌ನಿಂದ ಬಂದವರು. ೧೯೯೩ ರಿಂದ ೧೯೯೮ರವರೆಗೆ ಒಂದು ಗೆಜೆಟ್ ನೋಟಿಫಿಕೇಷನ್ ಹೊರಡಿಸಿದ್ದಾರೆ. ಅದರಲ್ಲಿ ಏನು ಇತ್ತು ಎಂದರೆ, ಮೆಡಿಕಲ್ ಅಡ್ಮಿಷನ್ ರಿಸರ್ವ್ ಮಾಡುವುದು. 85% for urban students, 15% for rural, ಹಳ್ಳಿಯ ಜನಸಂಖ್ಯೆ ಹೆಚ್ಚು ಇರುತ್ತದೆ, ಅವರಿಗೆ ೧೫ ಪರ್ಸೆಂಟ್ ಎಂದು ಪಟ್ಟಣಗಳ ಜನಸಂಖ್ಯೆ ಹೆಚ್ಚು ಇರುತ್ತದೆ ಅದಕ್ಕೆ ೮೫ ಪರ್ಸೆಂಟ್ ಎಂದು ರಿಸರ್ವ್ ಮಾಡಿದರು. ಜನರಲ್‌ನಲ್ಲಿ ಇಟ್ಟಿಲ್ಲ, ಅದು ಸುಮಾರು ಐದಾರು ವರ್ಷಗಳಿಂದ ಹಾಗೆ ನಡೆಯಿತು. ಯಾವ ಕೋರ್ಟ್ ಎದುರಿಗೆ ಬರಲಿಲ್ಲ, ಯಾರೂ ಕೋರ್ಟಿಗೆ ಹೋಗಲಿಲ್ಲ, ಆದರೆ ಇವತ್ತು ಅಧಿಕಾರದಲ್ಲಿ ಇದ್ದವರು ಯಾರೇ ಇರಲಿ, ಕೋರ್ಟ್ ಆರ್ಡರ್ ಬರುತ್ತದೆ ಎಂದು ನೆಪ ಹೇಳುತ್ತಾರೆ. ಆರ್ಟಿಕಲ್ ೩೭೧ ಬೇಕಾಗುತ್ತದೆ. ಪ್ರತಿಯೊಂದು ಯೂನಿವರ್ಸಿಟಿವೈಸ್ ಪಿಯುಸಿ ಬೋರ್ಡ್ ಮಾಡಿದರೆ ಅದಕ್ಕೆ ಯಾವ ಕೋರ್ಟ್ ಅಡ್ಡ ಬರುವುದಿಲ್ಲ, ಆದರೆ ಸುಮ್ಮನೆ ತಳ್ಳುವ ಸಲುವಾಗಿ ೩೭೧ ಎಂದು ಹೇಳುತ್ತಾರೆ.

ಇವತ್ತು ರಾಜ್ಯ ಮಟ್ಟದಲ್ಲಿ ಒಂದೇ ಒಂದು ಪಿಯುಸಿ ಬೋರ್ಡ್ ಇದೆ. ಬೇರೆ ರಾಜ್ಯಗಳಲ್ಲಿ ಮಹಾರಾಷ್ಟ್ರದಲ್ಲಿ ಪಿಯುಸಿ ಬೋರ್ಡ್ ಕೂಡ ಬೇರೆ ಇದೆ. ಪಿಯುಸಿ ಬೋರ್ಡ್ ಬೇರೆ ಇದೆ ಎಂದರೆ ವ್ಯವಸ್ಥೆ ಕೂಡ ಬೇರೆ ಇದೆ. ಮೆರಿಟ್ ಹಾಗೂ ಬೇರೆ ಬೇರೆ ಕಲಿಯುವ ಪದ್ಧತಿ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದಲ್ಲಿ ಇದೆ. ಆ ದೃಷ್ಟಿಯಿಂದ ಇಂತಹ ಒಂದು ಬದಲಾವಣೆ ಮಾಡಿ ಎಂದು ಕೇಳಿದರೆ ತಳ್ಳಿ ಹಾಕುತ್ತಾರೆ. ಕೇಂದ್ರ ಸರ್ಕಾರದವರು ದಿನ ೧೦ ಹೊಸ ಅಮೆಂಡ್‌ಮೆಂಟ್ ತರುತ್ತಾರೆ. ಈ ದೇಶದಲ್ಲಿ ಸಾಕಷ್ಟು ಅಮೆಂಡ್‌ಮೆಂಟ್ ಬಂದಿವೆ. ಉತ್ತರಾಂಚಲ ಜಾರ್ಖಂಡ್ ಇಂತಹ ಅನೇಕ ರಾಜ್ಯಗಳು ನಿರ್ಮಾಣ ಆಗಿವೆ. ಅದು ಕೂಡ ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಪಾರ್ಲಿಮೆಂಟ್‌ನಲ್ಲಿ ಬಿಲ್ ತಂದು ಮಾಡುವುದು, ಅದೇ ರೀತಿ ಆರ್ಟಿಕಲ್ ೩೭೧ ಮತ್ತು ಇದರಲ್ಲಿ ಯಾರ ಜನರ ವಿರೋಧ ಇಲ್ಲ, ಕೆಲವು ಜನರ ಕಲ್ಪನೆ ಇದೆ ಇದು. ಇದು ಕೇವಲ ಹೈದರಾಬಾದ್ ಕರ್ನಾಟಕದ ಸಲುವಾಗಿ. ಇದು ಪೂರಾ ಕರ್ನಾಟಕ ಎಕ್ಸ್‌ಚೇಂಜ್ ಎಂದು ಮಾಡಿದ್ದಾರೆ. Karnataka should be included in Article 371. ಈ ತರಹ ಅಮೆಂಡ್‌ಮೆಂಟ್ ಮಾಡಿದ್ದಾರೆ. ಆದರೆ ಲೋಕಲ್ ಜನರಿಗೆ ಅವಕಾಶ ಸಿಗುತ್ತದೆ. ಯಾರೂ ವಿರೋಧ ಅಲ್ಲ, ಆದರೆ ಅವರು ಶ್ರೀಮಾನ್ ಶಿವರಾಜ್ ಪಾಟೀಲ್‌ರವರು ಏಕೆ ಹಿಂಜರಿಯುತ್ತಿದ್ದಾರೆ ಗೊತ್ತಿಲ್ಲ, ಅಥವಾ ನಮ್ಮ ಮುಖ್ಯಮಂತ್ರಿಗಳು ಏಕೆ ಹಿಂಜರಿಯುತ್ತಿದ್ದಾರೆ ಗೊತ್ತಿಲ್ಲ, ನಮ್ಮ ಭಾಗದಿಂದ ಆರಿಸಿ ಬಂದವರು ಮೊದಲನೇ ಸಾರಿ ಅವರಲ್ಲಿ ಏನು ಜೋಶ್ ಇತ್ತು ಏನು ಸ್ಫೂರ್ತಿ ಇತ್ತು ಅದು ಕಾಣುತ್ತಿಲ್ಲ, ಇದು ಕೊನೆ ಬಜೆಟ್. ನಾವು ಹೇಳಿದ್ದೇವೆ, ಈ ಬಜೆಟ್‌ನಲ್ಲಿ ಪಾರ್ಲಿಮೆಂಟನಲ್ಲಿ ಬಜೆಟ್ ಸೆಷನ್‌ನಲ್ಲಿ ಆರ್ಟಿಕಲ್ ೩೭೧ ಅಮೆಂಡ್‌ಮೆಂಟ್ ಮಾಡದೆ ಇದ್ದರೆ ನಮ್ಮ ಉಗ್ರವಾದ ಹೋರಾಟ ಪ್ರಾರಂಭ ಮಾಡಬೇಕಾಗುತ್ತದೆ ಎಂದು ಹೇಳಿದೆವು. ಬಹುಶಃ ನಾಲ್ಕೈದು ದಿವಸಗಳಲ್ಲಿ ಸೆಷನ್ ಕನ್‌ಕ್ಲೂಡ್ ಆಗುತ್ತದೆ. ಆಗದೆ ಇದ್ದರೆ ಆ ಭಾಗದ ಜನ ಉಗ್ರ ಹೋರಾಟಕ್ಕೆ ಇಳಿಯಬಹುದು ಎಂದು ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಬಿ. ಕೃಷ್ಣ ಬೇರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೆ, ಪ್ರಥಮವಾಗಿ ೨೦೦೫-೦೬ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ತಿಳಿಸುತ್ತಾ ಪ್ರಥಮವಾಗಿ ಈ ಬಾರಿ ಮಂಡನೆ ಆಗಿರತಕ್ಕಂತಹ ಆಯವ್ಯಯ ಹಿಂದಿನ ಸರ್ಕಾರ ಪ್ರಾರಂಭ ಮಾಡಿದಂತಹ ಅನೇಕ ಉತ್ತಮ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬರುವುದರ ಜೊತೆಗೆ ತನ್ನ ಹೊಸ ನಿಲುವುಗಳನ್ನು ಸಹ ವ್ಯಕ್ತಪಡಿಸುತ್ತಾ ಆ ಹೊಸ ನಿಲುವುಗಳಲ್ಲಿ ಅತಿ ಮುಖ್ಯವಾದುದು ರೈತರಿಗೆ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಹೆಚ್ಚು ಒತ್ತು ಕೊಡತಕ್ಕಂಥದ್ದು ಸ್ಪಷ್ಟವಾಗಿ

ಈ ಆಯವ್ಯಯದಲ್ಲಿ ನಮಗೆಲ್ಲರಿಗೂ ಕಂಡುಬಂದಿದೆ. ಈ ಸರ್ಕಾರದ ಸಾಧನೆಗಳನ್ನು ಎತ್ತಿ ಹಿಡಿಯತಕ್ಕಂತಹ ಕೆಲಸವನ್ನು ಸಹ ಈ ಆಯವ್ಯಯ ಮಾಡಿದೆ. ಸರ್ಕಾರ ಸಾಕಷ್ಟು ಹೊಸ ಯೋಜನೆಗಳನ್ನು ಭೂ ಪತ್ರಗಳನ್ನು ಗಣಕೀಕರಣ ಮಾಡುವುದಾಗಲಿ, ಭೂ ದಾಖಲೆಗಳನ್ನು ಗಣಕೀಕರಣ ಯಂತ್ರಗಳ ಮೂಲಕ ಕೊಡುವುದಾಗಲಿ ಹಾಗೂ ಮಧ್ಯಾಹ್ನ ಬಿಸಿ ಊಟ ಕಾರ್ಯಕ್ರಮಗಳನ್ನು ಏಳನೇ ತರಗತಿಯುವರೆಗೆ ಹೆಚ್ಚುವರಿ ಮಾಡತಕ್ಕಂಥದ್ದಾಗಲಿ ಅದನ್ನು ೧೦ನೇ ತರಗತಿಯವರೆಗೆ ಹೆಚ್ಚುವರಿ ಮಾಡತಕ್ಕಂತಹ ಒಂದು ಕಾರ್ಯಕ್ರಮವನ್ನು ವ್ಯಕ್ತಪಡಿಸುವುದಾಗಲಿ ಈ ಎಲ್ಲ ಇಂತಹ ಉತ್ತಮ ಕಾರ್ಯಕ್ರಮಗಳನ್ನು ಈ ಸರ್ಕಾರ ಮುಂದುವರೆಸಿಕೊಂಡು ಹೋಗುತ್ತಿದೆ.

(ಶ್ರೀ ಎ.ಟಿ. ರಾಮಸ್ವಾಮಿಯುವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇದರ ಜೊತೆ ನಾವು ಏನು ಇಂದು ಅಬಕಾರಿಯಿಂದ ಸರ್ಕಾರ ಏನು ಅಧಿಕ ವರಮಾನವನ್ನು ಸಾಧಿಸಿದೆ ಅದು ಬಹುಶಃ ನಮ್ಮ ಕರ್ನಾಟಕ ಸರ್ಕಾರದ ಇತಿಹಾಸದಲ್ಲಿ ಒಂದು ಉತ್ತಮ ಸಾಧನೆ ಎಂದು ಹೇಳಬಹುದು. ಇಂಡಿಯನ್ ಮೇಡ್, ಫಾರೀನ್ ಲಿಕ್ಕರ್ ಎಂದು ಏನು ಇದೆ, ಅದರಲ್ಲಿ ಹಿಂದಿನ ಎರಡು ವರ್ಷಗಳಿಗೆ ಹಿಂದೆ ಹೋಲಿಸಿದರೆ ಸುಮಾರು ೬೦೦ ಕೋಟಿ ರೂಪಾಯಿಗಳ ಅಧಿಕ ವರಮಾನವನ್ನು ಸರ್ಕಾರ ಪಡೆಯುತ್ತಿದೆ. ಆದೇ ಸಾರಾಯಿಗೆ ಹೋಲಿಸಿದಾಗ ಸಾರಾಯಿಯಲ್ಲಿ ಸಹ ಆದೇ ರೀತಿಯ ಅಭಿವೃದ್ಧಿ ಇಂಟ್ರಡ್ಯೂಸ್ ಮಾಡಿದಾಗ ಸುಮಾರು ೩೦೦ ಕೋಟಿ ರೂಪಾಯಿಗಳ ಅಧಿಕ ವರಮಾನ ಬರುತ್ತದೆ ಎಂದು ಸರ್ಕಾರ ನಿರೀಕ್ಷಿಸಿತ್ತು, ಆದರೆ ಅದಕ್ಕೂ ಮೀರಿ ೪೦೦ ಕೋಟಿ ರೂಪಾಯಿಗಳ ಅಧಿಕ ವರಮಾನ ಸರ್ಕಾರ ಸಾಧಿಸಿದೆ. ಎಂದರೆ ಯಾವ ರೀತಿಯ ಪ್ರಗತಿ ನಾವು ಸಾಧಿಸುತ್ತಿದ್ದೇವೆ ಎಂದು ಹೇಳುವುದಕ್ಕೆ ಇದು ಒಂದು ಸ್ಪಷ್ಟ ನಿದರ್ಶನ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಹಾಗೆ ಇನ್ನು ಅನೇಕ ಇಂತಹ ಸಾಧನೆಗಳ ಮಧ್ಯೆ ಈ ಸರ್ಕಾರ ತನ್ನ ದೃಢವಾದ ಹೆಜ್ಜೆಗಳನ್ನು ಇಡುತ್ತಿರುವುದು ನಮಗೆಲ್ಲರಿಗೂ ಸಹ ಸ್ಪಷ್ಟವಾಗಿ ಗೋಚರವಾಗಿದೆ. ಆದರೆ ಎಲ್ಲಕ್ಕಿಂತ ಮುಖ್ಯವಾಗಿ ಆಯವ್ಯಯದ ಬಗ್ಗೆ ನಾನು ಮಾತನಾಡುವುದಾದರೆ ಇದು ಅತ್ಯಂತ ಜವಾಬ್ದಾರಿಯುತ ಆಯವ್ಯಯ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಕ್ಕಿಂತ ಹೆಚ್ಚಿಗೆ ಇವತ್ತು ನಾವು ಗ್ರಾಮೀಣ ಪ್ರದೇಶಗಳಿಗೆ ಹೆಚ್ಚು ಒತ್ತು ಕೊಡುವುದು ಒಂದು ಅಂಶ ಆದರೆ ಅಷ್ಟೇ ಮುಖ್ಯವಾದ ಅಂಶ ಎಂದರೆ ಆಡಳಿತದಲ್ಲಿ ಸುಧಾರಣೆ ತರಬೇಕು. ಹಾಗೂ ಆಡಳಿತವನ್ನು ಅತಿ ಜವಾಬ್ದಾರಿಯುತವಾಗಿ ನಿಯಂತ್ರಿಸಬೇಕು. ಹಣಕಾಸಿನ ಪರಿಸ್ಥಿತಿಯನ್ನು ಅತಿ ಜವಾಬ್ದಾರಿಯುತವಾಗಿ ನಿಭಾಯಿಸಬೇಕು ಎನ್ನತಕ್ಕಂತಹ ಸಂಕಲ್ಪ ಏನು ಇದೆ ಅದು ಇದರಲ್ಲಿ ಸ್ಪಷ್ಟವಾಗಿ ನಮಗೆ ಎದ್ದು ಕಾಣುತ್ತದೆ. ಅದರಲ್ಲಿಯೂ ಮುಖ್ಯವಾಗಿ ಅಭಿವೃದ್ಧಿಯೇತರ ವೆಚ್ಚ ೨೦೦೨-೦೩ನೇ

ಸಾಲಿನಲ್ಲಿ ಸುಮಾರು ನಮ್ಮ ಆಯುವ್ಯಯುದಲ್ಲಿ ಶೇಕಡ ೬೨ರಷ್ಟು ಇತ್ತು. ಅದನ್ನು ಸುಮಾರು ಶೇಕಡ ೪೫ಕ್ಕೆ ಇಳಿಸಿರುವಂತಹ ಒಂದೇ ಒಂದು ಈ ಕ್ರಮದಿಂದ ನಮ್ಮ ರಾಜ್ಯದ ಅಭಿವೃದ್ಧಿಗೆ ಎಷ್ಟು ಹೆಚ್ಚಿನ ಮೊತ್ತವನ್ನು ನಮ್ಮ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಮಂತ್ರಿಗಳು ಮೊಬಲೈಸ್ ಮಾಡಿದ್ದಾರೆ ಎಂದು ನಾವು ಊಹೆ ಮಾಡಬೇಕಾಗುತ್ತದೆ. ಅಂತಹ ಒಂದು ಅತಿ ಕ್ರಾಂತಿಕಾರಿಯಾದ ಸಾಧನೆಗಳನ್ನು ನಮ್ಮ ಸರ್ಕಾರ ಸಾಧಿಸುತ್ತದೆ ಎಂದು ಹೇಳಿಕೊಳ್ಳುವುದಕ್ಕೆ ನನಗಂತೂ ಭಾರೀ ಹೆಮ್ಮೆಯಾಗುತ್ತಿದೆ. ಅದರ ಜೊತೆಗೆ ಸುಮಾರು ಆಯುವ್ಯಯದಲ್ಲಿ ಏನು ಡಿಫಿಸಿಟ್ ಟಾರ್ಗೆಟ್ ಇತ್ತು ಆ ಎಲ್ಲ ಟಾರ್ಗೆಟನ್ನು ಸಹ ನಾವು ಸಮಯಕ್ಕೆ ಮೊದಲು ಸಾಧಿಸತಕ್ಕಂತಹ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ. ತಮಗೆ ಗೊತ್ತಿದ್ದ ಹಾಗೆ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಆಯುವ್ಯಯುದ ಕೊರತೆಯನ್ನು ಆಂತರಿಕ ಉತ್ಪನ್ನದಲ್ಲಿ ಸುಮಾರು ಮೂರು ಅಥವಾ ಮೂರಕ್ಕೂ ಕಡಿಮೆ ಇರಬೇಕೆಂದು ಕೇಂದ್ರ ಸರ್ಕಾರ ಸೂಚನೆ ಹೊರಡಿಸಿದೆ. ಆದರೆ ನಾವು ಕಳೆದ ಸಾಲಿನಲ್ಲಿ ಆ ಸೂಚನೆಯನ್ನು ನಾವು ಸಾಧಿಸಿ ತೋರಿಸಿದ್ದೇವೆ. ಸಾಧಿಸಿ ತೋರಿಸಿರುವುದರ ಜೊತೆಗೆ ನಮ್ಮ ರಾಜ್ಯಕ್ಕೆ ಸುಮಾರು ೧೬೫ ಕೋಟಿ ರೂಪಾಯಿಗಳ ಒಂದು ಕೊಡುಗೆಯನ್ನು ಕೂಡ ಈಗಾಗಲೇ ಕೇಂದ್ರ ಸರ್ಕಾರದಿಂದ ನಾವು ಪಡೆದುಕೊಂಡಿದ್ದೇವೆ. ಇದರಿಂದಲೂ ಸಹ ಹೆಚ್ಚಿನ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೂ ಕೂಡ ಸಾಧ್ಯವಾಗುತ್ತಿದೆ. ಇನ್ನು ತೆರಿಗೆ ವರಮಾನಗಳನ್ನು ಏನಿತ್ತು ಅದರಲ್ಲಿ ಸುಮಾರು ೧೪೯೫೨ ಕೋಟಿ ರೂಪಾಯಿಗಳ ತೆರಿಗೆ ವರಮಾನವನ್ನು ನಾವು ನಿರೀಕ್ಷಿಸಿದ್ದೆವು. ಆದರೆ ನಮ್ಮ ಆಡಳಿತದಲ್ಲಿ ಆಗಿರತಕ್ಕಂಥ ಸುಧಾರಣೆಗಳಿಂದ ಹಾಗೂ ನಮ್ಮ ಮುಖ್ಯಮಂತ್ರಿಗಳು ಹಾಗೂ ನಮ್ಮ ಉಪಮುಖ್ಯಮಂತ್ರಿಗಳು ಸಾಧಿಸಿರತಕ್ಕಂಥ ಒಂದು ಆಡಳಿತದ ವ್ಯವಸ್ಥೆಯಲ್ಲಿ ಸುಮಾರು ೧೫,೨೪೨ ಕೋಟಿ ರೂಪಾಯಿಗಳ ತೆರಿಗೆ ವರಮಾನವನ್ನು ತಂದು ಸಾಧಿಸಿದ್ದೇವೆ. ನಾನು ಏಕೆ ಇದನ್ನು ಕೇಳುತ್ತಿದ್ದೇನೆಂದರೆ ಹಿಂದೆ ಸಾಮಾನ್ಯವಾಗಿ ಆಯುವ್ಯಯು ಎಂದರೆ ನಮ್ಮದು ಗುರಿ ಹೊಂದಿರುತ್ತಿತ್ತು. ಆದರೆ ಸಾಧನೆ ಸಾಮಾನ್ಯವಾಗಿ ಗುರಿಗಿಂತ ಶೇಕಡ ೧೦ರಷ್ಟು ಕಡಿಮೆ ಇರುತ್ತಿತ್ತು. ಆದರೆ ಅನ್‌ಪ್ರೆಸಿಡೆಂಟೆಡ್ ಎಂದು ಏನು ಹೇಳುತ್ತಿದ್ದೇವೆ ಹಿಂದೆ ಎಂದೂ ಕಾಣದಂಥ ಸಾಧನೆಗಳನ್ನು ನಾವು ಸಾಧಿಸುತ್ತಿದ್ದೇವೆ. ಇದು ನಮಗೆಲ್ಲರಿಗೂ ಸಹ ಸ್ಪಷ್ಟವಾಗಿ ಕಾಣುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ ಆಯುವ್ಯಯುದ ಬಗ್ಗೆ ಒಂದು ಮಾತಿನಲ್ಲಿ ಹೇಳುವುದಾದರೆ ಪುಟ ೧೩ ರಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಸಾಲವನ್ನು ತೆಗೆದುಕೊಂಡು ರಾಜ್ಯದ ಆಡಳಿತವನ್ನು ನಡೆಸುತ್ತೇವೆ ಎನ್ನುವುದು ಮುಖ್ಯವಲ್ಲ ಸಾಲವನ್ನು ತೀರಿಸತಕ್ಕಂಥ ಶಕ್ತಿಯನ್ನು ಆಧರಿಸಿ ಸಾಲವನ್ನು ತೆಗೆದುಕೊಳ್ಳುತ್ತೇವೆಯೇ ಹೊರತು ಸಾಲ ಸಿಗುತ್ತದೆ ಎಂದು ಎಂದು ಸಾಲ ಮಾಡುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ.

ಇದನ್ನು ನಾವೆಲ್ಲರೂ ಕೂಡ ಮುಕ್ತ ಮನಸ್ಸಿನಿಂದ ಸ್ವಾಗತಿಸಬೇಕಾಗುತ್ತದೆ. ಇದು ಯಾವುದರ ಸಂಕೇತವೆಂದರೆ ಒಂದು ಪ್ರಬುದ್ಧ ಮಂತ್ರಿ ಮಂಡಲದ, ಪ್ರಬುದ್ಧ ಮುಖ್ಯಮಂತ್ರಿಗಳ, ಎಲ್ಲಕ್ಕಿಂತ ಮುಖ್ಯವಾಗಿ ಪ್ರಬುದ್ಧ ರಾಜ್ಯದ ಸಂಕೇತವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇನ್ನು ನಮ್ಮ ಜಿಲ್ಲೆಯ ಬಗ್ಗೆ ಹೇಳುವುದಾದರೆ ನಮ್ಮ ಜಿಲ್ಲೆಯಿಂದ ನಾವು ಅನೇಕ ಬೇಡಿಕೆಗಳನ್ನು ಸಲ್ಲಿಸಿದ್ದೆವು. ಕೋಲಾರ ಜಿಲ್ಲೆಯ ಕೆಲವೊಂದು ಬೇಡಿಕೆಗಳು ಈ ಆಯವ್ಯಯದಲ್ಲಿ ಸೇರಿಕೊಂಡಿವೆ. ಅದರಲ್ಲಿ ಮುಖ್ಯವಾಗಿ ನಮ್ಮ ಜಿಲ್ಲೆಗೆ ಸಾಫ್ಟ್‌ವೇರ್ ಪಾರ್ಕ್ ವತಿಯಿಂದ ಒಂದು ಕೇಂದ್ರವನ್ನು ತೆರೆಯುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಅದರ ಜೊತೆಗೆ ಮುಖ್ಯವಾಗಿ ಕೋಲಾರ ಹಾಗೂ ಬಿಜಾಪುರ ಜಿಲ್ಲೆಗಳು ಹೆಚ್ಚು ತೋಟಗಾರಿಕಾ ಬೆಳೆಗಳನ್ನು ಬೆಳೆಯುವುದನ್ನೇ ಆಧರಿಸಿರತಕ್ಕಂಥ ಜಿಲ್ಲೆಗಳಾಗಿವೆ. ನಮ್ಮ ಭಾಗದಲ್ಲಿ ಹನಿ ನೀರಾವರಿ ಪದ್ಧತಿ ಏನಿದೆ ಅಲ್ಲಿರತಕ್ಕಂಥ ಸಮಸ್ಯೆಯನ್ನು ಗುರುತಿಸಿ ಹನಿ ನೀರಾವರಿ ಪದ್ಧತಿಗೆ ಶೇಕಡ ೧೦೦ಕ್ಕೆ ೧೦೦ರಷ್ಟು ಸಹಾಯಧನವನ್ನು ಕೊಡುತ್ತೇವೆ ಎಂದು ಹೇಳಿ ಅದನ್ನು ಸರ್ಕಾರ ಮುಂದುವರಿಸಿಕೊಂಡು ಹೋಗುತ್ತೇವೆ ಎಂದು ಹೇಳಿ ಮುಂದೆ ಬಂದಿದೆ. ಹಾಗೆಯೇ ಈ ಸದನದಲ್ಲಿರತಕ್ಕಂಥ ಎಲ್ಲರೂ ದಿವಂಗತ ಹೆಚ್.ಎನ್.ನರಸಿಂಹಯ್ಯನವರ ಬಗ್ಗೆ ಇರತಕ್ಕಂಥ ಗೌರವವನ್ನು ಗುರುತಿಸಿ ಅವರ ಸ್ಮಾರಕಾರ್ಥವಾಗಿ ಗೌರಿಬಿದನೂರಿನಲ್ಲಿ ಒಂದು ಸ್ಮಾರಕ ಭವನವನ್ನು ನಿರ್ಮಿಸುತ್ತೇವೆ ಎಂದು ಸರ್ಕಾರ ಈ ಸಂದರ್ಭದಲ್ಲಿ ವ್ಯಕ್ತಮಾಡಿದೆ. ಇದೆಲ್ಲವುಗಳನ್ನೂ ಕೂಡ ನಮ್ಮ ಜಿಲ್ಲೆಯ ಪರವಾಗಿ ನಾನು ಈ ಸಂದರ್ಭದಲ್ಲಿ ಸ್ವಾಗತ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಹಾಗೆಯೇ ಜಲ ಸಂವರ್ಧನೆ ಯೋಜನೆ ಕೂಡ ನಮ್ಮ ಜಿಲ್ಲೆಯಲ್ಲಿ ತ್ವರಿತಗತಿಯಲ್ಲಿ ಸಾಗುತ್ತಿದೆ. ಮಾನ್ಯ ಖರ್ಗೆಯವರು ಕೂಡ ಸರ್ಕಾರದಲ್ಲಿ ಆ ಇಲಾಖೆಯನ್ನು ವಹಿಸಿಕೊಂಡ ನಂತರ ಹೆಚ್ಚು ಒತ್ತು ಕೊಟ್ಟು ಆ ಕಾರ್ಯಕ್ರಮವನ್ನು ತ್ವರಿತಗತಿಯಲ್ಲಿ ಸಾಗಿಸುತ್ತಿದ್ದಾರೆ. ಇದರ ಜೊತೆಗೆ ಇನ್ನೂ ಹೆಚ್ಚಿನ ಕೆರೆಗಳನ್ನು ಸಹ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಅವರು ಕೊಟ್ಟಿದ್ದಾರೆ. ಈ ಎಲ್ಲಾ ವಿಷಯಗಳನ್ನು ನಾನು ಈ ಸಂದರ್ಭದಲ್ಲಿ ಸ್ವಾಗತ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಆದರೆ ಮುಖ್ಯವಾಗಿ ನಾನು ಕೇವಲ ಹಲವು ವಿಚಾರಗಳನ್ನು ಸ್ವಾಗತ ಮಾಡುವುದರ ಜೊತೆಗೆ ಕೆಲವೊಂದು ನಮ್ಮ ಜಿಲ್ಲೆಯ ಬೇಡಿಕೆಗಳು ಈ ಬಜೆಟ್‌ನಲ್ಲಿ ಸೇರಿಲ್ಲದವುಗಳ ಬಗ್ಗೆ ಹೇಳಬಯಸುತ್ತೇನೆ. ಮುಖ್ಯವಾಗಿ ನಮ್ಮ ಕೋಲಾರ ಜಿಲ್ಲೆಯಾಗಲಿ, ತುಮಕೂರು ಜಿಲ್ಲೆಯಾಗಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚಿತ್ರದುರ್ಗ ಜಿಲ್ಲೆಗಳೇನಿವೆ ಈ ಎಲ್ಲಾ ಜಿಲ್ಲೆಗಳು ಶಾಶ್ವತ ಬರಕ್ಕೆ ತುತ್ತಾಗತಕ್ಕಂಥ ಜಿಲ್ಲೆಗಳೇ ಆಗಿವೆ. ಈ ಜಿಲ್ಲೆಗಳಿಗೆ ಶಾಶ್ವತವಾಗಿ ಕುಡಿಯುವ ನೀರನ್ನು ಕೊಡತಕ್ಕಂಥ ಒಂದು ಯೋಜನೆಗೆ ಡಾ.

ಪರಮಶಿವಯ್ಯನವರ ವರದಿಯನ್ನಾಧರಿಸಿ ಆ ಯೋಜನೆಯನ್ನು ಪರಿವೀಕ್ಷಣೆ ಮಾಡುವುದಕ್ಕೆ ಹಿಂದಿನ ಎಸ್.ಎಂ. ಕೃಷ್ಣರವರ ಸರ್ಕಾರ ಒಂದು ಸಂಸ್ಥೆಗೆ ಅದನ್ನು ಸರ್ವೆ ಮಾಡುವುದಕ್ಕೆ ಒಪ್ಪಿಸಿತ್ತು. ಈ ಸರ್ವೆ ಕಾರ್ಯಕ್ಕಾಗಿ ಆಗ ಎರಡೂವರೆ ಕೋಟಿ ರೂಪಾಯಿಗಳನ್ನು ಸಹ ಬಿಡುಗಡೆ ಮಾಡಿತ್ತು. ಈ ಯೋಜನೆಯನ್ನು ಸರ್ವೆ ಮಾಡುವುದಕ್ಕೆ ಮಾತ್ರ ಇನ್ನೂ ಹನ್ನೆರಡೂವರೆ ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಇದು ಯೋಜನೆಗೆ ಪೂರ್ಣ ಸರ್ವೆ ಕಾರ್ಯ ಯೋಜನೆ ಮುಂದೆ ಬರುತ್ತದೆ. ಸರ್ವೆ ಕಾರ್ಯಕ್ಕಾಗಿ ಬೇಕಾಗಿರುವ ಹನ್ನೆರಡೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ನಾವೆಲ್ಲರೂ ರಕ್ಷಾತೀತವಾಗಿ ಆ ಭಾಗದ ಶಾಸಕರುಗಳು, ಜನ ಪ್ರತಿನಿಧಿಗಳೆಲ್ಲರೂ ಸೇರಿ ಸರ್ಕಾರಕ್ಕೆ ಮನವಿಯನ್ನು ಮಾಡಿದ್ದೆವು. ಏಕೋ, ಏನೋ ಗೊತ್ತಿಲ್ಲ, ಸರ್ಕಾರ ಯೋಜನೆಯ ಸರ್ವೆ ಕಾರ್ಯಕ್ಕಾಗಿ ಹಣವನ್ನು ಬಜೆಟ್‌ನಲ್ಲಿ ಕಾದಿರಿಸಿಲ್ಲ. ಈ ಬಾರಿ ಸುಮಾರು ೩೯೪೨ ಕೋಟಿ ರೂಪಾಯಿಗಳನ್ನು ನೀರಾವರಿ ಯೋಜನೆಗಳಿಗೆ ಸರ್ಕಾರ ಕಾದಿರಿಸಿದೆ. ಅದರಲ್ಲೂ ಸಣ್ಣ ನೀರಾವರಿಗೆ ೨೮೭ ಕೋಟಿ ರೂಪಾಯಿಗಳಿಂದ ೪೪೧ ಕೋಟಿ ರೂಪಾಯಿಗಳಿಗೆ ಅನುದಾನವನ್ನು ಸರ್ಕಾರ ಏರಿಸಿದೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ನೀರಾವರಿಗೆ ಸಾಕಷ್ಟು ಒತ್ತನ್ನು ಕೊಟ್ಟು ಹಿಂದೆಂದೂ ಬಿಡುಗಡೆ ಮಾಡದಷ್ಟು ಹಣವನ್ನು ಈ ಬಾರಿ ಬಜೆಟಿನಲ್ಲಿ ಕಾದಿರಿಸಿದ್ದಾರೆ. ಅದು ನಿಜವಾಗಲೂ ಸ್ವಾಗತ ಮಾಡತಕ್ಕಂಥ ಕಾರ್ಯಕ್ರಮವೇ ಆಗಿದೆ. ಆದರೂ ಕೂಡ ನಾವು ಕೇಳಿದ್ದು ಯೋಜನೆಯ ಸರ್ವೆ ಕಾರ್ಯಕ್ಕಾಗಿ ಕೇವಲ ಹನ್ನೆರಡೂವರೆ ಕೋಟಿ ರೂಪಾಯಿಗಳು ಮಾತ್ರ. ಈ ಹಣವನ್ನು ಯೋಜನೆಯನ್ನು ಸರ್ವೆ ಮಾಡುವುದಕ್ಕಾಗಿ ಮಾತ್ರ ನಾವು ಕೇಳಿದ್ದೆವು. ಯೋಜನೆಯನ್ನು ಶುರು ಮಾಡುವುದಕ್ಕಲ್ಲ, ಅದರ ಸಾಧ್ಯಾಸಾಧ್ಯತೆಗಳನ್ನು ಪರೀಕ್ಷೆ ಮಾಡುವುದಾದರೆ, ಕೇವಲ ಹನ್ನೆರಡೂವರೆ ಕೋಟಿ ರೂಪಾಯಿಗಳನ್ನು ಸರ್ಕಾರ ನಿಗದಿಪಡಿಸಬೇಕು ಎಂದು ನಾವು ಕೇಳಿದ್ದೆವು. ಆದರೆ ಅದನ್ನು ಗಣನೆಗೆ ತೆಗೆದುಕೊಂಡಿಲ್ಲ. ಆದರೆ ನಾನು ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯಲ್ಲಿ ನೀರಿನ ಪರಿಸ್ಥಿತಿ ಹೀಗಿದೆ ಎಂಬುದನ್ನು ಒಂದೆರಡು ಮಾತುಗಳಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರನ್ನು ಸರಬರಾಜು ಮಾಡಲು ಶೇಕಡ ೧೦೦ಕ್ಕೆ ೧೦೦ರಷ್ಟು ಕೊಳವೆ ಬಾವಿಗಳನ್ನೇ ಆಧರಿಸಿದ್ದೇವೆ. ಇತ್ತೀಚೆಗೆ ನಮ್ಮ ಬೆಂಗಳೂರಿನಲ್ಲಿ ಇನ್ಸ್ಟಿಟ್ಯೂಟ್ ಫಾರ್ ಸೋಶಿಯೋ ಎಕನಾಮಿಕ್ ಎನ್ನುವ ಸಂಸ್ಥೆ ಏನಿದೆ ಆ ಸಂಸ್ಥೆಯವರು ಸರ್ಕಾರದ ಸಹಯೋಗದೊಂದಿಗೆ ಕೋಲಾರದಲ್ಲಿ ಕುಡಿಯುವ ನೀರಿನ ಸಮಸ್ಯೆ ಕುಡಿಯುವ ನೀರಿನ ಬಗ್ಗೆ ಸಮೀಕ್ಷೆ ಮಾಡಿದ್ದಾರೆ. ಅವರೂ ಸರ್ಕಾರಕ್ಕೂ ಸಹ ವರದಿಯನ್ನು ಸಲ್ಲಿಸಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರನ್ನು ನೂರಕ್ಕೆ ನೂರರಷ್ಟು ಕೊಳವೆ ಬಾವಿಗಳಿಂದಲೇ ಸರಬರಾಜು ಮಾಡಲಾಗುತ್ತಿದೆ, ಈ

ಜಿಲ್ಲೆಯಲ್ಲಿ ಈಗ ಲಭ್ಯವಿರತಕ್ಕಂತ ಶೇಕಡ ೯೭ರಷ್ಟು ನೀರು ಕುಡಿಯುವುದಕ್ಕೆ ಯೋಗ್ಯವಾದಂಥ ನೀರು ಅಲ್ಲ ಎನ್ನತಕ್ಕಂಥ ವರದಿಯನ್ನು ಸರ್ಕಾರಕ್ಕೆ ಅವರು ಕೊಟ್ಟಿದ್ದಾರೆ. ಇದಕ್ಕೆ ಮುಖ್ಯ ಕಾರಣ ಕೊಳವೆ ಬಾವಿಗಳು ದಿನದಿಂದ ದಿನಕ್ಕೆ ಬಹಳ ಆಳವಾಗಿ ಹೋಗುತ್ತಿರುವುದು. ಆ ರೀತಿ ಅಷ್ಟು ಆಳದಲ್ಲಿ ಸಿಗತಕ್ಕಂಥ ನೀರು ಕುಡಿಯುವುದಕ್ಕೆ ಯೋಗ್ಯವಾದುದು ಅಲ್ಲ ಎನ್ನತಕ್ಕಂಥ ವರದಿಯನ್ನು ಅವರು ಸ್ಪಷ್ಟವಾಗಿ ಸರ್ಕಾರಕ್ಕೆ ಕೊಟ್ಟಿದ್ದಾರೆ. ತಾವು ಅನುಮತಿಯನ್ನು ಕೊಟ್ಟರೆ ಆ ವರದಿಯಲ್ಲಿರುವ ಒಂದೆರಡು ಸಾಲುಗಳನ್ನು ಸದನದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

"The water available - the total hardness, calcium nitrate, iron are the major contaminants. The contamination levels are alarming because of the deeper depths to which the tubewells are being dug increasingly. Bicarbonate exceeds permissible limits in major areas of the district. Total hardness and excessive chlorine and calcium were found in all places".

ಈ ರೀತಿಯಾಗಿ ಇನ್ನೂ ಹೇಳಿದ್ದಾರೆ. ಇದು ಒಂದು ಸಾಂಕೇತಿಕ ವರದಿ. ಇದೇ ರೀತಿ ಎಲ್ಲಾ ವರದಿಗಳೂ ಕೂಡ ಈಗಾಗಲೇ ಸರ್ಕಾರಕ್ಕೆ ಬಂದಿವೆ. ಇದರಲ್ಲಿ ನಾವು ಪ್ರಶ್ನೆ ಮಾಡಬೇಕಾಗಿರುವುದು ಏನೆಂದರೆ ಇದೇ ಪರಿಸ್ಥಿತಿ ಮುಂದುವರಿದರೆ ಕೇವಲ ಕೋಲಾರ ಜಿಲ್ಲೆಯೊಂದೇ ಅಲ್ಲ, ಬಹುಶಃ ತುಮಕೂರು, ಚಿತ್ರದುರ್ಗ, ಈ ಎಲ್ಲಾ ಜಿಲ್ಲೆಗಳಲ್ಲಿರುವ ಸಾರ್ವಜನಿಕರ ಆರೋಗ್ಯದ ಪರಿಸ್ಥಿತಿಯಲ್ಲಿ ಅತಂತ್ರ ಪರಿಸ್ಥಿತಿಯೇ ಸರ್ಕಾರದ ಮುಂದೆ ಉದ್ಭವವಾಗತಕ್ಕಂಥ ಸಾಧ್ಯತೆಗಳಿವೆ. We may face a major health crisis in this part of the country. - ಹೀಗಾಗಿ ಇಂಥ ಎಲ್ಲಾ ಸಮಸ್ಯೆಗಳನ್ನು ಎದುರಿಸಿ ನಾವು ಸರ್ಕಾರದ ಮೇಲೆ ಸಾಕಷ್ಟು ಒತ್ತಡವನ್ನು ತರುತ್ತಾ ಬಂದಿದ್ದೇವೆ. ನಮ್ಮ ಜಿಲ್ಲೆಗೆ ಶಾಶ್ವತವಾಗಿ ಕುಡಿಯುವ ನೀರಿಗಾಗಿ ಒಂದು ಶಾಶ್ವತ ಯೋಜನೆಯನ್ನು ಕೊಡಬೇಕು ಎಂದು ಕೇಳುತ್ತಿದ್ದೇವೆ. ಆ ಕುಡಿಯುವ ನೀರಿನ ಯೋಜನೆ ಮುಂದೆ ಬಂದರೂ ಕೂಡ ಈಗ ಕೇವಲ ಹನ್ನೆರಡೂವರೆ ಕೋಟಿ ರೂಪಾಯಿಗಳನ್ನು ಕೊಟ್ಟರೆ ಆ ಯೋಜನೆಯ ಸರ್ವೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಸರ್ಕಾರ ನೀರಾವರಿಗಾಗಿ ೩೯೪೨ ಕೋಟಿ ರೂಪಾಯಿಗಳನ್ನು ನಿಗದಿಪಡಿಸಿರುವಾಗ ಈ ಹನ್ನೆರಡೂವರೆ ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಏಕೆ ಹಿಂದೆ ನೋಡುತ್ತಿದೆ ಎಂದು ನಾನು ಬಾರಿ ದುಃಖದಿಂದ ಈ ಮಾತನ್ನು ಕೇಳಬೇಕಾಗುತ್ತದೆ. ಭಾರಿ ದೊಡ್ಡ ಮನಸ್ಸು ಮಾಡಿ ನೀರಾವರಿಗೆ ಇಷ್ಟು ಹಣವನ್ನು

ನಿಗದಿಪಡಿಸಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಹಾಗೂ ಸರ್ಕಾರದವರಿಗೆ ನಾನು ಮನವಿ ಮಾಡುವುದೇನೆಂದರೆ ದಯಮಾಡಿಟ್ಟು ಈ ಹನ್ನೆರಡೂವರೆ ಕೋಟಿ ರೂಪಾಯಿಗಳನ್ನು ಕೂಡ ಸರ್ವೆ ಕಾರ್ಯಕ್ಕೆ ತಾವು ದೊಡ್ಡ ಮನಸ್ಸು ಮಾಡಿ ಕೊಡಬೇಕು. ಇಲ್ಲದಿದ್ದರೆ ಇವೊತ್ತು ಯಾವ ರೀತಿಯಲ್ಲಿ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ನಿರಂತರವಾಗಿ ಹೋರಾಟ ಏನು ನಡೆಯುತ್ತಿದೆಯೋ, ಧಾರವಾಡದಲ್ಲಿ ಹೈಕೋರ್ಟ್ ಪೀಠಕ್ಕೆ ಯಾವ ರೀತಿ ಹೋರಾಟ ನಡೆಯುತ್ತಿದೆಯೋ ಅದೇ ರೀತಿಯ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲೂ ಕೂಡ ಉದ್ಭವವಾಗುತ್ತದೆ. ಅದೇ ರೀತಿಯಲ್ಲಿ ಕಾನೂನು ಪರಿಸ್ಥಿತಿ ಹದಗೆಡುವ ಪರಿಸ್ಥಿತಿ ನಮಗೆ ಕಾಣುತ್ತಿದೆ. ಜನ ಪ್ರತಿನಿಧಿಗಳಾಗಿ ನಾವು ಸರ್ಕಾರದಲ್ಲಿ ಮನವಿ ಮಾಡುತ್ತಿದ್ದೇವೆ, ದಯಮಾಡಿಟ್ಟು ಈ ಸರ್ವೆ ಕಾರ್ಯಕ್ಕೆ ಹನ್ನೆರಡೂವರೆ ಕೋಟಿ ರೂಪಾಯಿಗಳನ್ನು ನಿಗದಿಪಡಿಸಬೇಕು. ಸರ್ವೆ ಕಾರ್ಯವನ್ನು ಮುಂದುವರಿಸುವುದಕ್ಕೆ ಹಾಗೂ ಇದೇ ವರ್ಷದಲ್ಲಿ ಆ ಸರ್ವೆಯನ್ನು ಪೂರೈಸಿ ಕೊಡಬೇಕು. ಇಲ್ಲದೇ ಹೋದ ಪಕ್ಷದಲ್ಲಿ ನಮ್ಮ ಜಿಲ್ಲೆಯಲ್ಲೂ ಕೂಡ ಹೋರಾಟವನ್ನು ಪ್ರಾರಂಭ ಮಾಡತಕ್ಕಂಥ ವಾತಾವರಣ ಕಾಣುತ್ತಿದೆ ಎಂಬ ವಿಷಯವನ್ನು ಸಹ ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ನಾನು ಇಚ್ಛೆಪಡುತ್ತೇನೆ. ಹಾಗೆಯೇ ನಮ್ಮ ಆಯವ್ಯಯದಲ್ಲಿ ಅತಿ ಮುಖ್ಯವಾದ ಅಂಶ ಏನೆಂದರೆ ಸಹಕಾರ ಸಂಸ್ಥೆಗಳಿಂದ, ಸಹಕಾರ ಬ್ಯಾಂಕ್‌ಗಳಿಂದ ಪಡೆದಿರತಕ್ಕಂಥ ಸಾಲಗಳ ಮೇಲೆ ಬಡ್ಡಿ ಹಾಗೂ ಸುಸ್ತಿ ಬಡ್ಡಿಯನ್ನು ಸರ್ಕಾರ ಮನ್ನಾ ಮಾಡಿದೆ. ನಾನು ಒಬ್ಬ ರೈತ ಕುಟುಂಬದಿಂದ ಬಂದವನಾಗಿ ಇದನ್ನು ಸಂಪೂರ್ಣವಾಗಿ ನಾವೆಲ್ಲರೂ ಸಹ ಸ್ವಾಗತವನ್ನು ಮಾಡಬೇಕು. ಈ ವಿಚಾರದಲ್ಲಿ ನಾವು ಯಾವುದೇ ಪಕ್ಷದವರಾಗಲಿ, ನಾವೆಲ್ಲರೂ ಸಹ ಇದನ್ನು ಒಕ್ಕೊರಲಿನಿಂದ ಸ್ವಾಗತಿಸಬೇಕಾದುದೇ ಆಗಿದೆ. ಆದರೂ ಸಹ ಮತ್ತೊಂದು ಅಂಶವನ್ನು ನಾನು ಸರ್ಕಾರದ ಹಾಗೂ ಹಣಕಾಸಿನ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಅದೇನೆಂದರೆ ನಾವು ಮೊದಲಿನಿಂದಲೂ ಕೂಡ ಇಂಥ ವಿಷಯಗಳಲ್ಲಿ ಯಾರು ಸಾಲ ಪಡೆದಂಥ ವಿಷಯಗಳಲ್ಲಾಗಲಿ ಅಥವಾ ವಿದ್ಯುತ್ ಕಂಪನಿಗಳಿಗೆ ಸಮಯಕ್ಕೆ ಸರಿಯಾಗಿ ಹಣವನ್ನು ಪಾವತಿ ಮಾಡುವಂಥ ವಿಷಯದಲ್ಲಾಗಲಿ ಯಾರು ಡಿಫಾಲ್ಟ್ ಮಾಡುತ್ತಾ ಬಂದಿದ್ದಾರೆ, ಯಾರು ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡುತ್ತಿಲ್ಲವೋ ಅಂಥವರಿಗೆ ಮಾತ್ರ ಉತ್ತೇಜನವನ್ನು ಕೊಡುತ್ತಾ ಬಂದಿದ್ದೇವೆ. ಮೊದಲಿನಿಂದಲೂ ಸಹ ಸಾಲ ಪಡೆದಂತಹ ವಿಷಯದಲ್ಲಾಗಲಿ ಅಥವಾ ವಿದ್ಯುತ್ ಇಲಾಖೆಗೆ ಸಮಯಕ್ಕೆ ಸರಿಯಾಗಿ ಹಣವನ್ನು ಪಾವತಿ ಮಾಡುವಂಥ ವಿಚಾರದಲ್ಲಿ ಯಾರು ಡಿಫಾಲ್ಟ್ ಮಾಡುತ್ತಾ ಬಂದಿದ್ದಾರೆ, ಸೌಲಭ್ಯಗಳನ್ನು ಪಡೆದುಕೊಂಡು ಸಮಯಕ್ಕೆ ಸರಿಯಾಗಿ ಕೊಡುತ್ತಿಲ್ಲ ಅಂತಹವರಿಗೆ ಉತ್ತೇಜನ ಕೊಡುತ್ತಾ ಬಂದಿದ್ದೇವೆ. ಆದುದರಿಂದ ನಾವು ಜವಾಬ್ದಾರಿಯುತವಾದಂತಹ ನಡವಳಿಕೆಗಳನ್ನು ಮಾಡುವಂತಹ

ವಿಚಾರದಲ್ಲಿ ಎನ್‌ಕರೇಜ್ ಮಾಡುವಂತಹ ಅವಶ್ಯಕತೆ ಇದೆ. ಯಾರು ಸಾಲವನ್ನು ಸಮಯಕ್ಕೆ ತಕ್ಕ ಹಾಗೆ ಮರುಪಾವತಿ ಮಾಡುತ್ತಾರೆ, ಯಾರು ಸರಿಯಾಗಿ ವಿದ್ಯುತ್ ಕರವನ್ನು ಕಟ್ಟುತ್ತಾರೆ ಅಂತಹವರಿಗೂ ಸಹ ಸರ್ಕಾರ ಏನಾದರೂ ಉತ್ತೇಜನ ಕೊಡುವಂತಹ ವಿಚಾರದಲ್ಲಿ ಯೋಚನೆ ಮಾಡಬೇಕಾಗುತ್ತದೆ. ಇಲ್ಲದೆ ಇದ್ದರೆ ಎಲ್ಲರೂ ಕೂಡ ನಾನು ಕಟ್ಟಿ ಏನು ಪ್ರಯೋಜನ ಹೇಗಿದ್ದರೂ ಒಂದು ದಿನ ಸಾಲ ಮನ್ನಾ ಆಗುತ್ತದೆ ಎಂದು ಹಣ ಕಟ್ಟುವುದನ್ನೇ ನಿಲ್ಲಿಸಿ ಬಿಡುತ್ತಾರೆ. ಆದುದರಿಂದ ಇದರ ಬಗ್ಗೆ ಉತ್ತೇಜನವನ್ನು ಕೊಟ್ಟಾಗ ಜವಾಬ್ದಾರಿಯಾಗಿ ನಡೆದುಕೊಳ್ಳುವವರಿಗೆ ಸರ್ಕಾರ ಸಹಾಯ ಮಾಡಿದ ಹಾಗೆ ಆಗುತ್ತದೆ. ಸರ್ಕಾರ ಈ ಬಾರಿ ಆಯವ್ಯಯದಲ್ಲಿ ಒಂದು ದಿಟ್ಟ ತೀರ್ಮಾನವನ್ನು ತೆಗೆದುಕೊಂಡಿದೆ. ವ್ಯಾಟ್ ಏನಿದೆ, ಇದನ್ನು ಹಿಂದಿನ ಕೇಂದ್ರದಲ್ಲಿದ್ದ ಎನ್‌ಡಿಎ ಸರ್ಕಾರದವರು ತರಬೇಕೆಂದು ಯೋಚನೆ ಮಾಡಿದ್ದರು. ಆದರೆ ಇವತ್ತು ಕಾಂಗ್ರೆಸ್ ಯುಪಿಎ ಸರ್ಕಾರ ಕೇಂದ್ರದಲ್ಲಿ ಆಡಳಿತಕ್ಕೆ ಬಂದಾಗ, ಹಾಗೂ ಇಲ್ಲಿ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಬಂದಮೇಲೆ ಇದರ ಬಗ್ಗೆ ಎರಡೂ ಸರ್ಕಾರಗಳು ಸಹ ದಿಟ್ಟವಾದ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ನಾವು ವ್ಯಾಟ್ ಅನ್ನು ಅಳವಡಿಸಿ, ತೆರಿಗೆ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ತರಬೇಕೆಂದು ಇವತ್ತು ದೃಢ ನಿರ್ಧಾರವನ್ನು ತೆಗೆದುಕೊಂಡು ಇವತ್ತು ನಾವು ಮುಂದಿನ ಹೆಜ್ಜೆ ಇಡುತ್ತಿದ್ದೇವೆ. ಆದರೆ ಇದರ ವಿಚಾರದಲ್ಲಿ ಹಿಂದೆ ಆಡಳಿತದಲ್ಲಿ ಇದ್ದಂತಹವರು ಅದನ್ನು ಅಡ್ಡಿ ಪಡಿಸುವುದಕ್ಕೆ ನಾನಾ ತಂತ್ರಗಳನ್ನು ಹುಡುಕುತ್ತಿದ್ದಾರೆ ಕೆಲವು ಹಿತಾಸಕ್ತಿಗಳನ್ನು ತಮ್ಮ ಹಿಂದೆ ಇಟ್ಟುಕೊಂಡು ಇವತ್ತು ಮೌಲ್ಯಾಧಾರಿತ ತೆರಿಗೆಯನ್ನು ಅಡ್ಡಿಪಡಿಸುವುದಕ್ಕೆ ಎಲ್ಲರೂ ಕೆಲವೊಂದು ಭಾಗಗಳಲ್ಲಿ ಪ್ರಯತ್ನಗಳು ನಡೆದಿದ್ದನ್ನು ಇತ್ತೀಚೆಗೆ ನಾವು ಕಂಡಿದ್ದೇವೆ. ಆದರೆ ನಾವು ಅದ್ಯಾವುದಕ್ಕೂ ಕೂಡ ಮಣಿಯದೆ ಇವತ್ತು ಇಲ್ಲೊಂದು ಅತ್ಯುತ್ತಮ ಸುಧಾರಣೆ ತೆರಿಗೆ ವ್ಯವಸ್ಥೆ ಎನ್ನುವುದನ್ನು ನಾವು ಮನಗಂಡು ನಮ್ಮ ಸರ್ಕಾರ ಇವತ್ತು ದಿಟ್ಟವಾದಂತಹ ಒಂದು ತೀರ್ಮಾನವನ್ನು ತೆಗೆದುಕೊಂಡು ಈ ರಾಜ್ಯದಲ್ಲಿ ಮೌಲ್ಯಾಧಾರಿತ ತೆರಿಗೆಯನ್ನು ತರುತ್ತಿದೆ ಅದನ್ನು ನಾವೆಲ್ಲರೂ ಸಹ ಸ್ವಾಗತಿಸಬೇಕೆಂದು ಸಹ ನಾನು ಹೇಳುತ್ತೇನೆ. ಅದರ ಜೊತೆಗೆ ನಾನು ಒಂದು ಪತ್ರಿಕೆಯನ್ನು ಓದುತ್ತಿರುವಾಗ ಒಂದು ಅಂಶ ಗಮನಕ್ಕೆ ಬಂದಿತು. ಅದೇನೆಂದರೆ ನಬಾರ್ಡ್‌ನಿಂದ ಯೋಜನೆಗೆ ನಮ್ಮ ರಾಜ್ಯಕ್ಕೆ ಕೊಟ್ಟಂತಹ ಹಣ ಸ್ವಲ್ಪ ಬಳಕೆಯಾಗದೆ ಅದು ಕೇಂದ್ರ ಸರ್ಕಾರಕ್ಕೆ ಮರಳುತ್ತದೆ ಎನ್ನುವ ಪತ್ರಿಕಾ ವರದಿ ಓದಿದೆ.

ಮಾನ್ಯ ಸಿದ್ಧರಾಮಯ್ಯನವರು ಉಪಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಸಚಿವರು ಆಗಿರತಕ್ಕಂಥ ಸಂದರ್ಭದಲ್ಲಿ ಯಾವರೀತಿ ನಮ್ಮ ರಾಜ್ಯಕ್ಕೆ ಮೀಸಲಿಟ್ಟಿರತಕ್ಕಂಥ

ಹಣ ಕೇಂದ್ರ ಸರ್ಕಾರಕ್ಕೆ ಹೋಗುತ್ತದೆಂದು ನನಗಂತೂ ನಂಬಿಕೆ ಬರುತ್ತಿಲ್ಲ, ಏಕೆಂದರೆ ಹಣವನ್ನು ಬಳಕೆ ಮಾಡುವಂತಹ ವಿಚಾರದಲ್ಲಿ ಒಂದು ಪೈಸೆಯನ್ನು ಕೂಡ ಬಿಟ್ಟುಕೊಡತಕ್ಕಂಥವರು ಅಲ್ಲ, ಇನ್ನು ಹೆಚ್ಚಿನ ಅನುದಾನವನ್ನು ಕೇಂದ್ರದಿಂದ ನಾವು ಪಡೆದುಕೊಳ್ಳುತ್ತಿದ್ದೇವೆ. ಅಂತಹ ಸಂದರ್ಭದಲ್ಲಿ ಬಹುಶಃ ಕೆಲವು ಅಧಿಕಾರಿಗಳು ಮಾಡಿದಂತಹ ಬೇಜವಾಬ್ದಾರಿ ತನದಿಂದ ಆಗಾಗ ನಮ್ಮ ರಾಜ್ಯಸರ್ಕಾರ ಸ್ವಲ್ಪ ಹಣವನ್ನು ಕಳೆದುಕೊಳ್ಳುವಂತಹ ಸಂಗತಿ ಆಗಿಂದಾಗ್ಗೆ ನಡೆದುಕೊಂಡು ಬಂದಿದೆ. ಇದು ಕೇವಲ ಬೆಂಗಳೂರಿಗೆ ಸೀಮಿತವಾಗಿ ಆಗುತ್ತಿರುವುದಲ್ಲ, ನಮ್ಮ ಕೋಲಾರ ಜಿಲ್ಲಾ ಪರಿಷತ್ತಿಗೆ ಹೋದರೂ ಕೂಡ ಇದೇ ರೀತಿಯ ವಾಡಿಕೆಯಾಗಿದೆ. ಕೇಂದ್ರದಿಂದ ಬಂದಂತಹ ಹಣದ ಬಗ್ಗೆ ಅಲ್ಲಿ ಜನಪ್ರತಿನಿಧಿಗಳ ಗಮನಕ್ಕೂ ತರುವುದಿಲ್ಲ ಹಾಗೂ ಅದು ಸರಿಯಾಗಿ ಬಳಕೆ ಕೂಡ ಆಗುವುದಿಲ್ಲ, ಆ ಹಣ ಸಮಯದ ಮಿತಿ ಮೀರಿದಾಗ ವಾಪಸ್ಸು ಹೋಗತಕ್ಕಂಥ ಸಂಗತಿ ಆಗಿಂದಾಗ್ಗೆ ನಡೆದುಕೊಂಡು ಬಂದಿದೆ. ಆದುದರಿಂದ ಮಾನ್ಯ ಹಣಕಾಸಿನ ಸಚಿವರು ಇದರ ಬಗ್ಗೆ ಹೆಚ್ಚಿನ ಗಮನವನ್ನು ವಹಿಸಿ ಯಾವುದೇ ಕಾರಣಕ್ಕೂ ಸಹ ನಮ್ಮ ರಾಜ್ಯಕ್ಕೆ ಮೀಸಲಿಟ್ಟಂತಹ ಹಣ ಸಂಪೂರ್ಣವಾಗಿ ಬಳಕೆ ಮಾಡುವಂತಹ ವಿಚಾರದಲ್ಲಿ ಎಚ್ಚರಿಕೆ ವಹಿಸಬೇಕೆಂದು ಸಹ ಈ ಸಂದರ್ಭದಲ್ಲಿ ನಾನು ಅವರಲ್ಲಿ ಮನವಿ ಮಾಡುತ್ತೇನೆ.

ಇನ್ನು ಗ್ರಾಮಾಂತರ ರಸ್ತೆಗೆ ನೀಡುವಂತಹ ಹಣವನ್ನು ಸಹ ಖರ್ಚು ಮಾಡುವುದರ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಮಾತನಾಡುವಾಗ ಹೇಳಿದರು. ಗ್ರಾಮಾಂತರ ರಸ್ತೆಗಳ ನಿರ್ವಹಣೆಗೆ ಮೀಸಲಿಟ್ಟರತಕ್ಕಂಥ ಹಣ ಏನಿದೆ, ಅದು ಕೊಡುವಾಗ ಒಂದು ತಾಲ್ಲೂಕಿನಲ್ಲಿ ರಸ್ತೆಗಳ ಉದ್ದ ಎಷ್ಟು ಹಾಗೂ ಅದರ ಅಗಲವನ್ನು ಅನುಸರಿಸಿ ಅದರ ಅನುಪಾತದಂತೆ ಹಣವನ್ನು ನೀಡದೆ ಬೇರೆ ರೀತಿಯಲ್ಲಿ ಹಣವನ್ನು ವಿತರಿಸಲಾಗುತ್ತಿದೆ. ನಿಜವಾಗಿ ಆ ರಸ್ತೆಗಳ ನಿರ್ವಹಣೆಗೆ ವೈಜ್ಞಾನಿಕವಾಗಿ ಹಣದ ವಿತರಣೆಯಾಗಬೇಕಾದರೆ ಯಾವುದೇ ತಾಲ್ಲೂಕಿನಲ್ಲಿ ಎಷ್ಟು ಕಿಲೋಮೀಟರ್ ರಸ್ತೆ ಇದೆ ಎನ್ನುವುದನ್ನು ನೋಡಿ, ಆ ಅನುಪಾತದಂತೆ ರಸ್ತೆಗಳ ನಿರ್ವಹಣೆಗೆ ಹಣವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಛೇರ್‌ಮನ್‌ರವರೆ, ಕೇವಲ ಉದ್ದ ಅಲ್ಲ, ಇಂಟೆನ್‌ಸಿಟಿ ಆಫ್ ಟ್ರಾಫಿಕ್ ಹಾಗೂ ಕ್ಲೈಮೆಟಿಕ್ ಕಂಡಿಷನ್ ಇದೆಲ್ಲ ಕೂಡ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಕೇವಲ ಎಷ್ಟು ಉದ್ದದ ರಸ್ತೆ ಇದೆ ಎನ್ನುವುದನ್ನು ನೋಡಿ ಅಷ್ಟು ಹಣ ಕೊಟ್ಟರೆ ಸಾಕಾಗುವುದಿಲ್ಲ, ದಯವಿಟ್ಟು ಆ ರಸ್ತೆಯಲ್ಲಿ ವಾಹನ ಸಂಚಾರ ಎಷ್ಟು ಇದೆ ಹಾಗೂ ಆ ಭಾಗದ ಹವಾಮಾನವನ್ನು ಕೂಡ ಲೆಕ್ಕ ಹಾಕಿ ಹಣವನ್ನು ಕೊಡಬೇಕಾಗುತ್ತದೆ. ಇದನ್ನು ಕೇವಲ ಯಾವುದೋ ಒಂದು ವರದಿ ಪ್ರಕಾರ ಮಾಡುತ್ತಾ ಹೋಗುವುದು ಸರಿಯಾಗುವುದಿಲ್ಲ.

ಶ್ರೀ ಸಿ.ಟಿ. ರವಿ : ಮಾನ್ಯ ಚೇರ್‌ಮನ್‌ರವರೆ, ಇದು ಕೇವಲ ವರದಿ ಆಧರಿಸಿ ಕೊಟ್ಟಿಲ್ಲ. ನಾನು ಮುಖ್ಯಮಂತ್ರಿ ಸಡಕ್ ಯೋಜನೆಯಲ್ಲಿ ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಹಣ ಕೊಟ್ಟಿದ್ದಾರೆ ಎಂದು ತೆಗೆದು ನೋಡುತ್ತಿದ್ದೆ. ವರದಿ ಆಧರಿಸಿ ಕೊಟ್ಟಿದ್ದರೆ ಆ ವರದಿಯೆ ಅಂತಿಮ ಎಂದು ತಿಳಿದುಕೊಂಡು ಬಿಡುತ್ತಿದ್ದೆವು. ಆದರೆ ಅದು ಆ ರೀತಿಯಾಗಿಲ್ಲ. ಇದು ಪ್ರಭಾವಿಗಳಿಗೆ ತಕ್ಕಂತೆ ಮರ್ಜಿಗಳಿಗೆ ತಕ್ಕಂತೆ ಇದು ಹಂಚಿಕೆಯಾಗಿದೆ. ಪಾಪ ಎಂಎಲ್‌ಎಗಳು ಇರುವ ಕಡೆ ೮ ಲಕ್ಷ ರೂಪಾಯಿ, ಪ್ರಭಾವಿಗಳು ಇರುವ ಕಡೆ ೫೦ ಲಕ್ಷ ರೂಪಾಯಿಗಳಿಂದ ೨ ಕೋಟಿ ರೂಪಾಯಿಯವರೆಗೆ ಕೊಟ್ಟಿದ್ದಾರೆ. ಹಾಗಾಗಿ ನಂಜುಂಡಪ್ಪ ವರದಿ ಏನೂ ಗೊತ್ತಿಲ್ಲದೆ ಇರುವವರಿಗೆ ಕಣ್ಣೊರೆಸುವುದಕ್ಕೆ ಮಾತ್ರ ಅದು ವರದಿಯಾಗಿ ಉಳಿದಿದೆ. ಅದು ನಿಜವಾಗಿ ಅಸಮತೋಲನವನ್ನು ಸರಿಪಡಿಸುವಂತಹ ವಿಚಾರದಲ್ಲಿ ಆಧಾರವಾಗಿದೆ ಎನ್ನುವ ವಿಚಾರ ಇಲ್ಲಿ ಇಲ್ಲ.

ಶ್ರೀ ಸಿ.ಜಿ.ಕೃಷ್ಣಬೈರೇಗೌಡ : ಹಾಗಾಗಿ ಸರ್ಕಾರ ಇದರ ಬಗ್ಗೆ ಗಮನ ಹರಿಸಿ ರಸ್ತೆಗಳ ನಿರ್ವಹಣಾ ವೆಚ್ಚವನ್ನು ಎಲ್ಲಿ ಹೊಸದಾಗಿ ರಸ್ತೆಗಳ ನಿರ್ಮಾಣ ಮಾಡಬೇಕಾಗಿದೆ, ಎಲ್ಲಿ ಹಿಂದುಳಿದ ಪ್ರದೇಶಗಳು ಇದೆ ಅಲ್ಲಿ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಆ ಮಾತನ್ನು ಕೂಡ ಒಪ್ಪಬೇಕಾಗುತ್ತದೆ. ರಸ್ತೆಗಳ ನಿರ್ವಹಣೆಗೆ ಮಾನ್ಯ ಹೆಗಡೆಯವರು ಹೇಳಿದ ಹಾಗೆ ಕನಿಷ್ಟ ಕಿಲೋಮೀಟರ್ ಆಧಾರದ ಮೇಲೆ ನೀಡದೆ ಆ ರಸ್ತೆಯ ವಾಹನ ದಟ್ಟಣೆಯನ್ನು ಆಧರಿಸಿ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಇವತ್ತು ಹಾಗೆ ಅಭಿವೃದ್ಧಿಯೇತರ ವೆಚ್ಚವನ್ನು ೬೨ ರಿಂದ ಶೇಕಡ ೪೫ಕ್ಕೆ ಇಳಿಸಿದ್ದೇವೆ, ಅದರಲ್ಲಿ ಉಳಿತಾಯವಾದಂತಹ ಹಣವನ್ನು ಉಪಯೋಗಿಸಿ ಕೃಷಿ ಹಾಗೂ ಸಮಾಜ ಕಲ್ಯಾಣ ಇಲಾಖೆಗೆ ಹೆಚ್ಚಿನ ಅನುದಾನವನ್ನು ಸರ್ಕಾರ ಇವತ್ತು ನಿಗದಿಪಡಿಸಿದೆ. ಅದರಲ್ಲೂ ಸಹ ಗಂಗಾ ಕಲ್ಯಾಣ ಯೋಜನೆ ಏನಿದೆ, ಕಳೆದ ವರ್ಷ ಸುಮಾರು ೩೦ ಕೋಟಿ ರೂಪಾಯಿ ಅನುದಾನ ಇತ್ತು. ಆದರೆ ಈ ಬಾರಿ ದುಪ್ಪಟಕ್ಕಿಂತ ಹೆಚ್ಚು ಮಾಡಿ ೬೭ ಕೋಟಿ ರೂಪಾಯಿಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಇದನ್ನು ಏರಿಸಿದ್ದಾರೆ. ಇದು ಅತ್ಯಂತ ಸ್ವಾಗತ ಮಾಡತಕ್ಕಂಥ ಒಂದು ಯೋಜನೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಮುಖ್ಯವಾಗಿ ನಮ್ಮ ಜಿಲ್ಲೆಯಲ್ಲಿ ಅನುಭವಿಸಿರುವಂತಹ ಸಮಸ್ಯೆ ಬಗ್ಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಯೋಜನೆಯಲ್ಲಿ ಕೊಳವೆ ಬಾವಿಯನ್ನು ೩೫೦ ಅಡಿಯವರೆಗೆ ಕೊರೆಯುವುದಕ್ಕೆ ಮಾತ್ರ ಯೋಜನಾ ವೆಚ್ಚವನ್ನು ತಯಾರು ಮಾಡುತ್ತಾರೆ. ಅದಕ್ಕೆ ಬೇಕಾಗುವಂತಹ ಪಂಪ್ ಮತ್ತು ಮೋಟಾರ್ ಅಳವಡಿಸುವುದಕ್ಕೆ ಏಳೂವರೆ ಹೆಚ್‌ಪಿ ಯವರೆಗೆ ಮಾತ್ರ ಹಾಕಬೇಕೆನ್ನುವ ವಿಚಾರವನ್ನು ಗಮನಕ್ಕೆ ತೆಗೆದುಕೊಳ್ಳುತ್ತಾರೆ.

ಆದರೆ ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಕೊಳವೆ ಬಾವಿಯನ್ನು ೬೦೦ ಅಡಿಯವರೆಗೆ ಆಳವಾಗಿ ಕೊರೆಸುತ್ತಿದ್ದೇವೆ. ಆದರೆ ರೈತರು ೧೨೦೦ ಅಡಿಯವರೆಗೂ ಕೊಳವೆ ಬಾವಿಯನ್ನು ನಮ್ಮ ಜಿಲ್ಲೆಯಲ್ಲಿ ಕೊರೆಸುವಂತಹ ಪರಿಸ್ಥಿತಿ ಉದ್ಭವವಾಗಿದೆ. ಇಂತಹ ಸಂದರ್ಭದಲ್ಲಿ ಕೇವಲ ೩೫೦ ಅಡಿ ಆಳದವರೆಗೆ ಕೊಳವೆ ಬಾವಿಗಳನ್ನು ಕೊರೆಸುವುದಕ್ಕೆ ಹಣವನ್ನು ಮೀಸಲಿಟ್ಟಿದ್ದಾರೆ, ಈ ಗಂಗಾ ಕಲ್ಯಾಣ ಯೋಜನೆಯ ಅನುಕೂಲವನ್ನು ಪಡೆಯತಕ್ಕಂಥವರು ಅತೀ ಕಡುಬಡವರು. ಅವರ ಕೈಯಲ್ಲಿ ಐದು ರೂಪಾಯಿ ಹಣ ಸಹ ಇರುವುದಿಲ್ಲ. ಹಾಗಿದ್ದಾಗ ನೀವು ಕೇವಲ ೩೫೦ ಅಡಿ ಕೊರೆಯುವುದಕ್ಕೆ ಮಾತ್ರ ಹಣ ಕೊಡುತ್ತೇವೆ, ಇನ್ನು ಉಳಿದಂತಾದ್ದಕ್ಕೆ ನೀವೇ ಏನಾದರೂ ಮಾಡಿಕೊಳ್ಳಿ ಎಂದು ಹೇಳಿದರೆ ಇದರ ಅನುಕೂಲ ಅವರಿಗೆ ಸಿಗುವುದಿಲ್ಲ, ಹಾಗಾಗಿ ಯಾವ್ಯಾವ ಜಿಲ್ಲೆಯಲ್ಲಿ ಇಂತಹ ಸಮಸ್ಯೆ ಇದೆ, ಎಷ್ಟು ಅವಶ್ಯಕತೆ ಇದೆ, ಅದರ ಆಧಾರದ ಮೇಲೆ ಈ ಯೋಜನೆಗಳನ್ನು ತಯಾರು ಮಾಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಬಯಲು ಸೀಮೆ ಅಭಿವೃದ್ಧಿ ಬಗ್ಗೆ ಮೈದಾನ ಅಭಿವೃದ್ಧಿ ಮಂಡಲಿ ಎಂದು ಕರೆದಿದ್ದಾರೆ. ಬಹುಶಃ ಬಯಲು ಸೀಮೆ ಅಭಿವೃದ್ಧಿ ಮಂಡಲಿಗೆ ಆ ರೀತಿ ಕರೆದಿದ್ದಾರೆ ಎಂದು ನಾನು ಭಾವಿಸುತ್ತಾ, ಅದಕ್ಕೆ ಕೇವಲ ೫ ಕೋಟಿ ರೂಪಾಯಿ ಅನುದಾನವನ್ನು ಈ ಬಾರಿ ಸರ್ಕಾರ ನಿಗದಿಪಡಿಸಿದೆ. ಆದರೆ ಸುಮಾರು ೭೨ ತಾಲ್ಲೂಕುಗಳು ನನಗೆ ಗೊತ್ತಿದ್ದ ಹಾಗೆ ಆ ಬಯಲು ಸೀಮೆ ಅಭಿವೃದ್ಧಿ ಮಂಡಲಿಯ ವ್ಯಾಪ್ತಿಗೆ ಬರುತ್ತದೆ. ಆ ೫ ಕೋಟಿ ರೂಪಾಯಿಯನ್ನು ಬಯಲು ಸೀಮೆ ವ್ಯಾಪ್ತಿಗೆ ಬರತಕ್ಕಂಥ ತಾಲ್ಲೂಕುಗಳಿಗೆ ಹಂಚಿದರೆ, ಅದರಿಂದ ಅಲ್ಲಿ ಯಾವ ಕೆಲಸ ಕೂಡ ಆಗುವುದಿಲ್ಲ, ಆ ೫ ಕೋಟಿ ರೂಪಾಯಿಯನ್ನು ೭೨ ತಾಲ್ಲೂಕುಗಳಿಗೆ ಹಂಚಿದರೆ ಒಂದೊಂದಕ್ಕೆ ೨ ರಿಂದ ೩ ಲಕ್ಷ ರೂಪಾಯಿ ಬರಬಹುದು. ಆಗ ಅಲ್ಲಿ ಏನೂ ಆಸ್ತಿಯನ್ನು ಸೃಷ್ಟಿಸುವುದಕ್ಕಾಗುವುದಿಲ್ಲ, ಇದರಲ್ಲಿ ಮಿಸ್‌ಯೂಸ್ ಆಗುವುದಕ್ಕೆ ಸಾಕಷ್ಟು ಅವಕಾಶ ಇರುತ್ತದೆ. ಹಾಗಾಗಿ ಸರ್ಕಾರ ಇದರ ಅನುದಾನವನ್ನು ಇನ್ನು ಹೆಚ್ಚು ಮಾಡಬೇಕು, ಇಲ್ಲವಾದರೆ ಬಯಲು ಸೀಮೆ ಅಭಿವೃದ್ಧಿ ಮಂಡಲಿ ಕೊಟ್ಟಿರತಕ್ಕಂಥ ೫ ಕೋಟಿ ರೂಪಾಯಿಯನ್ನು ಯಾವುದಾದರೂ ಬೇರೆ ಮಂಡಲಿಗೆ ಕೊಟ್ಟರೆ ಅಲ್ಲಿಯಾದರೂ ಕೆಲಸವಾಗುತ್ತದೆ. ಕೊಟ್ಟಿರುವಂತಹ ೫ ಕೋಟಿ ರೂಪಾಯಿಯನ್ನು ೭೨ ತಾಲ್ಲೂಕುಗಳಿಗೆ ಹಂಚಿದರೆ ಅದರಿಂದ ಅಲ್ಲಿ ಏನೂ ಕೆಲಸವಾಗುವುದಿಲ್ಲ, ಅದರ ಬಗ್ಗೆ ಸರ್ಕಾರ ದಯವಿಟ್ಟು ಗಮನಹರಿಸಬೇಕೆಂದು ಹೇಳುತ್ತಾ, ಹಾಗೆ ಇವತ್ತು ಕೆಲವು ಕಡೆ ಸರ್ಕಾರ ನೌಕರರನ್ನು ತೆಗೆದುಕೊಳ್ಳುವಂತಹ ವಿಚಾರದಲ್ಲಿ ಹಿಂದಿನಿಂದಲೂ ಕೂಡ ನೌಕರರನ್ನು ತೆಗೆದುಕೊಳ್ಳಬಾರದು ಎನ್ನುವ

ಧೋರಣೆಯನ್ನು ಸರ್ಕಾರ ವ್ಯಕ್ತಪಡಿಸುತ್ತಾ ಬಂದಿದೆ. ಇದನ್ನು ನಾನು ಸ್ವಾಗತಿಸಿದರೂ ಕೂಡ ಕೆಲವೊಂದು ಸೇವೆಗಳಲ್ಲಿ, ನಾವು ವಿಭಿನ್ನವಾಗಿ ಯೋಚನೆ ಮಾಡಬೇಕಾಗುತ್ತದೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ವೈದ್ಯಕೀಯ ಸೇವೆಯನ್ನು ಒದಗಿಸುವುದಾಗಲಿ, ಪಶು ವೈದ್ಯಾಧಿಕಾರಿಯನ್ನು ಒದಗಿಸುವುದಾಗಲಿ, ಗ್ರಾಮಾಂತರ ಪ್ರದೇಶದಲ್ಲಿ ಇರುವಂತಹ ಜೂನಿಯರ್ ಕಾಲೇಜು ಹಾಗೂ ಡಿಗ್ರಿ ಕಾಲೇಜುಗಳಿಗೆ ಬೇಕಾದಂತಹ ಲೆಕ್ಚರರ್‌ಗಳ ವಿಷಯಗಳಲ್ಲಿ ಸರ್ಕಾರ ಧೋರಣೆಯನ್ನು ಸಡಿಲಗೊಳಿಸಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ. ಅವುಗಳಿಗೆ ಲೆಕ್ಚರರ್‌ಗಳನ್ನು ಒದಗಿಸುವಂತಹ ವಿಷಯಗಳಲ್ಲಿ ಸರ್ಕಾರ ಧೋರಣೆಯನ್ನು ಸ್ವಲ್ಪ ಸಡಿಲಗೊಳಿಸಬೇಕೆಂದು, ಈ ಸಂದರ್ಭದಲ್ಲಿ ಮನವಿ ಮಾಡಲಿಚ್ಛಿಸುತ್ತೇನೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಸುಮಾರು ಕಾಲೇಜುಗಳು ಇವೆ. ಈ ಕಾಲೇಜುಗಳಲ್ಲಿ ಸರ್ಕಾರ ಹೊಸ ಕೋರ್ಸ್‌ಗಳನ್ನು ಮಂಜೂರು ಮಾಡಿದೆ. ಆದರೆ ಆ ಕೋರ್ಸ್‌ಗಳಿಗೆ ಲೆಕ್ಚರರ್‌ಗಳನ್ನು ಕೊಡುವುದಕ್ಕೆ ಆಗುತ್ತಾ ಇಲ್ಲ. ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ನಾನು ಅನೇಕ ಬಾರಿ ಕಂಡು ಮಾತನಾಡಿದ್ದೇನೆ. ಅವರು ಸಹ ಹೌದು, ಇದು ಬಹಳ ಅವಶ್ಯಕತೆ ಇದೆ. ಇದನ್ನು ಕೊಡಲೇಬೇಕು. ಇದನ್ನು ಕೊಡಬೇಕೆಂದರೆ, ನಾವು ಏನು ಮಾಡುವುದಕ್ಕೆ ಆಗುವುದಿಲ್ಲ. ಹೊಸದಾಗಿ ಲೆಕ್ಚರರ್‌ಗಳನ್ನು ನಾವು ಹೈರ್ ಮಾಡಬೇಕಾಗುತ್ತದೆ. ಆದರೆ ಏನು ಮಾಡುವುದು? ಸರ್ಕಾರದಲ್ಲಿ ಸಾಕಷ್ಟು ನಿಬಂಧನೆಗಳು ಇವೆ, ಎಂದು ಅವರು ಆಗಾಗ ಅವರು ವ್ಯಕ್ತಪಡಿಸಿರುತ್ತಾರೆ. ಹಾಗಾಗಿ ನಾನು ಸರ್ಕಾರದಲ್ಲಿ ಮನವಿ ಮಾಡುವುದೇನೆಂದರೆ, ಇವತ್ತು ಪಶುವೈದ್ಯ ಅಧಿಕಾರಿಗಳ ವಿಷಯದಲ್ಲಾಗಲಿ, ಅಥವಾ ಈ ಮೂಲಭೂತ ಸೇವೆಗಳು ಏನು ಇವೆ. ಇದು ಗ್ರಾಮಾಂತರ ಪ್ರದೇಶಗಳಲ್ಲಿ ಸಿಗತಕ್ಕಂಥ ಸೇವೆಗಳು, ನಗರ ಪ್ರದೇಶಗಳಲ್ಲಿ ಗವರ್ನಮೆಂಟ್ ಕಾಲೇಜುಗಳು ಇಲ್ಲದೇ ಇದ್ದರೆ, ಪ್ರೈವೇಟ್ ಕಾಲೇಜುಗಳು ಇನ್ನು ಒಳ್ಳೆಯ ಕಾಲೇಜುಗಳು ಇದೆ. ಆದರೆ ಇಲ್ಲಿ ಮಕ್ಕಳು ಎಲ್ಲಿ ಬೇಕಾದರೂ ಹೋಗಿ ಸೇರಿಕೊಳ್ಳುತ್ತಾರೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ನಮಗೆ ಇರುವಂಥಾದ್ದು ಒಂದೇ ಗವರ್ನಮೆಂಟ್ ಕಾಲೇಜು, ಒಂದೇ ಪಶು ವೈದ್ಯಕೀಯ ಕೇಂದ್ರ, ಒಂದೇ ಆಸ್ಪತ್ರೆ, ನಮ್ಮ ಹಳ್ಳಿಗಳಲ್ಲಿ ಇರುವಂಥಾದ್ದು. ಇಂತಹ ಅಂಶಗಳಲ್ಲಿ ಸರ್ಕಾರ ಅಲ್ಲಿ ಏನೇ ಕಷ್ಟಗಳು ಬರಲಿ, ಅಲ್ಲಿಗೆ ವೈದ್ಯರುಗಳನ್ನು ಒದಗಿಸುವುದಾಗಲಿ, ಅಥವಾ ಸೂಕ್ತ ಉಪನ್ಯಾಸಕರನ್ನು ಒದಗಿಸುವುದರಲ್ಲಿ ಸರ್ಕಾರ ಯಾವುದೇ ರೀತಿಯಲ್ಲಿ ಹಿಂದೆ ನೋಡಬಾರದು. ಗ್ರಾಮಾಂತರ ಪ್ರದೇಶಗಳಲ್ಲಿ ಇಂತಹ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು, ನಾನು ಸರ್ಕಾರದಲ್ಲಿ ಒತ್ತಾಯ ಮಾಡಲಿಚ್ಛಿಸುತ್ತೇನೆ. ಇನ್ನು ಅರಣ್ಯ ಇಲಾಖೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಇವತ್ತು ಅರಣ್ಯ ಪರಿಸರ ಸಂರಕ್ಷಣೆ, ನಮ್ಮ ಸರ್ಕಾರದ ಮಟ್ಟಿಗೆ ನಾನು ಹೇಳುವುದಿಲ್ಲ, ಇವತ್ತು ನಮ್ಮ ಸಮಾಜದಲ್ಲಿ, ಕೊನೆಯ ಹಂತದಲ್ಲಿ ಇದೆ. ನಾವು ನಮ್ಮ ಆದ್ಯತಾ ಪಟ್ಟಿಗಳು

ಏನೆಂಬ ಬಗ್ಗೆ ಪಟ್ಟಿಯನ್ನು ಮಾಡುತ್ತಾ ಹೋದರೆ, ಅರಣ್ಯ ಸಂರಕ್ಷಣೆ ಹಾಗೂ ಪರಿಸರ ಸಂರಕ್ಷಣೆ ನಮ್ಮ ಸಮಾಜದಲ್ಲಿ ಕೆಳಮಟ್ಟಕ್ಕೆ ಬಂದು ಬಿಟ್ಟಿದೆ. ನಾವು ಎಲ್ಲಕ್ಕೂ ಆದ್ಯತೆಗಳನ್ನು ಕೊಡುತ್ತಾ ಹೋಗುತ್ತೇವೆ. ಎಲ್ಲದಕ್ಕೂ ಆದ್ಯತೆಯನ್ನು ಕೊಟ್ಟು ನಂತರ ನಾವು ಪರಿಸರವನ್ನು ತೆಗೆದುಕೊಳ್ಳುತ್ತಿದ್ದೇವೆ ಹಿಂದೆ ನಮ್ಮ ದೇಶದ ಪ್ರಧಾನ ಮಂತ್ರಿಗಳಾಗಿದ್ದ ಪಂಡಿತ್ ನೆಹರುರವರು, ಇಂದಿರಾಗಾಂಧಿಯವರು ರಾಜೀವ್ ಗಾಂಧಿಯವರು, ಇವರೆಲ್ಲರೂ ಸಹ ಪರಿಸರ ಹಾಗೂ ಅರಣ್ಯದ ಬಗ್ಗೆ ಆದ್ಯ ಕಾಳಜಿಯುನ್ನು ಇಟ್ಟುಕೊಂಡಿದ್ದಂಥವರು. ಇವತ್ತು ಸಹ ನಮ್ಮ ಪ್ರಧಾನಮಂತ್ರಿಗಳಾಗಿರುವ ಶ್ರೀ ಮನಮೋಹನಸಿಂಗ್‌ರವರು, ಇತ್ತೀಚೆಗೆ ರಾಜಸ್ಥಾನದಲ್ಲಿ ನಡೆದಂತಹ ಘಟನೆಯ ಬಗ್ಗೆ ಸಾಕಷ್ಟು ಕಾಳಜಿಯನ್ನು ಅವರು ಸಹ ವ್ಯಕ್ತಪಡಿಸಿದ್ದಾರೆ. ಇವತ್ತು "ಹಿಂದೂ ಪತ್ರಿಕೆ"ಯನ್ನು ಓದುತ್ತಾ ಇದೆ. ಇದರಲ್ಲಿ ಒರಿಸ್ಸಾ ಹಾಗೂ ಮಧ್ಯಪ್ರದೇಶಗಳಲ್ಲಿ ಹುಲಿಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇಳಿಯುತ್ತಿದೆಯೆಂಬ ವಿಷಯ ಇವತ್ತಿನ ಪತ್ರಿಕೆಯಲ್ಲಿ ಬಂದಿದೆ. ಇದೇ ಪರಿಸ್ಥಿತಿ ನಮ್ಮ ರಾಜ್ಯಕ್ಕೂ ಬರಬಾರದೆಂದು ನನ್ನ ಕಾಳಜಿಯಾಗಿದೆ. ನಾನು ನಾಲ್ಕು ದಿವಸ ಬಂಡಿಪುರ, ನಾಗರಹೊಳೆಯೊಳಗೆ ಇದ್ದೆ.

ಆ ಸಂದರ್ಭದಲ್ಲಿ ಅಲ್ಲಿನ ಅಧಿಕಾರಿಗಳೊಡನೆ ಮಾತನಾಡುವಾಗ ಸಮಸ್ಯೆ ಏನು ಗೊತ್ತಾಯಿತೆಂದರೆ, ಅಲ್ಲಿ ಐ.ಎಫ್.ಎಸ್ (ಇಂಡಿಯನ್ ಫಾರೆಸ್ಟ್ ಸರ್ವೀಸ್ ಅಧಿಕಾರಿಗಳು) ಸಂಖ್ಯೆ ಏನು ನಿಗದಿಪಡಿಸಿದ್ದರು. ಅದಕ್ಕಿಂತ ಹೆಚ್ಚಿನ ಐ.ಎಫ್.ಎಸ್. ಸರ್ವೀಸ್ ಅಧಿಕಾರಿಗಳು ಇದ್ದಾರೆ. ಆದರೆ ಅತೀ ಕೆಳಮಟ್ಟದ ಕಾಡನ್ನು ರಕ್ಷಣೆ ಮಾಡತಕ್ಕಂಥ ಕಾವಲುಗಾರರು ಏನು ಇದ್ದಾರೆ. ಅವರು ವಾಚರ್ಸ್ ಅಂಡ್ ಗಾರ್ಡ್ಸ್, ಆ ಮಟ್ಟದಲ್ಲಿ ಸುಮಾರು ಶೇ. ೪೦ ರಿಂದ ೬೦ರಷ್ಟು ಹುದ್ದೆಗಳು ಖಾಲಿ ಇದೆ. ಇಲ್ಲಿ ನಿಜವಾಗಿ ಯಾರು ಅರಣ್ಯವನ್ನು ಕಾಪಾಡುತ್ತಾರೆ. ಆ ಸೊಲ್ಜರ್ಸ್ ಯಾರು ಇದ್ದಾರೆ, ಅವರು ವಾಚರ್ಸ್ ಅಂಡ್ ಗಾರ್ಡ್ಸ್ ಆ ಮಟ್ಟದಲ್ಲಿ ಸುಮಾರು ಶೇ. ೪೦ ರಿಂದ ಶೇ. ೬೦ರಷ್ಟು ಹುದ್ದೆಗಳು ಖಾಲಿ ಇದೆ. ಅವರು ಕಾಡಿನ ಒಳಗೆ ಇರಬೇಕಾಗುತ್ತದೆ. ಅವರು ಸಂಪೂರ್ಣವಾಗಿ ಸಮಾಜದ ಸಂಪರ್ಕವನ್ನು ಕಡಿದುಕೊಂಡು, ಕಾಡಿನ ಒಳಗಡೆ ಇರಬೇಕಾಗುತ್ತದೆ. ಅವರು ಕಾಡಿನಿಂದ ೧೫ ದಿವಸಗಳು ಹೊರಗಡೆ ಬರುವ ಹಾಗೆ ಇಲ್ಲ. ಅವರಿಗೆ ಆ ೧೫ ದಿವಸಗಳು ಕುಟುಂಬದವರ ಜೊತೆಗೆ ಸಂಪರ್ಕವಿರುವುದಿಲ್ಲ. ಅವರ ಮಕ್ಕಳ ಜೊತೆಗೆ ಸಂಪರ್ಕವಿರುವುದಿಲ್ಲ. ಇಷ್ಟೆಲ್ಲಾ ಕಷ್ಟದಲ್ಲೂ ಅವರು ಇಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಹಿಂದೆ ೨೦೦೨ನೇ ಇಸವಿಯಲ್ಲಿ, ಹೊರರಾಜ್ಯದ ಒಂದು ತಂಡ ಹುಲಿಗಳನ್ನು ಬೇಟೆ ಮಾಡುತ್ತಿದ್ದಂಥವರನ್ನು ಹಿಡಿದರು. ಆ ತಂಡದವರನ್ನು ನಿಜವಾಗಿ ಹಿಡಿದವರು ಆ ವಾಚರ್ಸ್ ಅಂಡ್ ಗಾರ್ಡ್ಸ್‌ಗಳು, ಅಂಥವರಿಗೆ ನಾವು ಹೆಚ್ಚಿನ ಒತ್ತನ್ನು ಕೊಡಬೇಕು. ಆ ವಾಚರ್ಸ್

ಮತ್ತು ಗಾರ್ಡ್ಸ್‌ಗಳ ಹುದ್ದೆಗಳು ಏನು ಖಾಲಿ ಇವೆ, ಅದನ್ನು ಸಹ ಭರ್ತಿ ಮಾಡುವ ವಿಚಾರವಾಗಿ ಸರ್ಕಾರ ಯೋಚನೆ ಮಾಡಬೇಕು. ಪರಿಸರ ಮತ್ತು ಅರಣ್ಯಕ್ಕೆ ಮಾನ್ಯ ಮನಮೋಹನ್ ಸಿಂಗ್‌ರವರು ಯಾವ ರೀತಿಯಲ್ಲಿ ರಾಷ್ಟ್ರಮಟ್ಟದಲ್ಲಿ ಹೆಚ್ಚಿನ ಒತ್ತನ್ನು ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ನಾವು ರಾಜ್ಯದಲ್ಲೂ ಹೆಚ್ಚಿನ ಒತ್ತನ್ನು ಕೊಟ್ಟು ಪರಿಸರ ಹಾಗೂ ಅರಣ್ಯ ಸಂರಕ್ಷಣೆಯು ನಮ್ಮ ರಾಜ್ಯದ ಹೆಮ್ಮೆಯ ಸಂಕೇತವನ್ನಾಗಿ ಮಾಡಬೇಕೆನ್ನುವಂಥಾದ್ದು, ನನ್ನ ಮನವಿಯಾಗಿದೆ. ಇನ್ನು ಗ್ರಾಮ ಪಂಚಾಯಿತಿಗಳಿಗೆ ಇತ್ತೀಚೆಗೆ ಚುನಾವಣೆಗಳು ನಡೆದಿವೆ. ಹೊಸ ಸದಸ್ಯರುಗಳು ಆಯ್ಕೆಯಾಗಿದ್ದಾರೆ. ಈ ಹೊಸ ಸದಸ್ಯರುಗಳು ಅವರ ಅವಧಿಯಲ್ಲಿ ಇನ್ನು ಹೆಚ್ಚಿನ ಜವಾಬ್ದಾರಿಯನ್ನು ಮತ್ತು ಅನುದಾನವನ್ನು ಬಿಡುಗಡೆ ಮಾಡುವಂಥಾದ್ದು ಇವತ್ತು ರಾಷ್ಟ್ರಮಟ್ಟದಲ್ಲಿ ತೀರ್ಮಾನವಾಗಿದೆ. ಅದೇ ರೀತಿಯ ತೀರ್ಮಾನವನ್ನು ನಮ್ಮ ರಾಜ್ಯದಲ್ಲೂ ತೆಗೆದುಕೊಂಡಿದ್ದೇವೆ. ಇದು ನಮ್ಮ ವೈಯಕ್ತಿಕವಾದಂತಹ ಅಭಿಪ್ರಾಯಗಳು ಏನೇ ಇದ್ದರೂ ಸಹ, ಈ ಅಧಿಕಾರ ವಿಕೇಂದ್ರೀಕರಣವಾಗಬೇಕಾಗಿದೆ. ಅದರಲ್ಲಿ ನಮ್ಮದು ಯಾರದು ಮತ್ತೊಂದು ಅಭಿಪ್ರಾಯಗಳು ಇಲ್ಲ, ಆದರೆ ಆ ವಿಕೇಂದ್ರಿಕರಣವಾಗುವಂತಹ ಅಧಿಕಾರವನ್ನು ಹಾಗೂ ಹಣವನ್ನು ಸದುಪಯೋಗಪಡಿಸಿ ಕೊಳ್ಳುವಂಥಾದ್ದನ್ನು, ಖಾತರಿ ಮಾಡಬೇಕಾದ್ದು ಸರ್ಕಾರದ ಜವಾಬ್ದಾರಿಯಾಗುತ್ತದೆ. ಹಿಂದೆ ಮಾನ್ಯ ಮಂತ್ರಿಯವರು ಸಹ ಒಂದು ಘೋಷಣೆಯನ್ನು ಹೊರಡಿಸಿದ್ದರು. ಒಬ್ಬ ಮೇಲ್ವಿಚಾರಕನನ್ನು ಅಂದರೆ ombudsman ಇದಕ್ಕೆ ನೇಮಕ ಮಾಡುತ್ತೇವೆಂದು ಸರ್ಕಾರ ತನ್ನ ಧೋರಣೆಯನ್ನು ವ್ಯಕ್ತಪಡಿಸಿತು. ಇದು ಅತಿ ಸ್ವಾಗತ ಮಾಡುವಂತಹ ಕ್ರಮವಾಗಿದೆ. ಆದರೆ ಈ ಆಯವ್ಯಯದಲ್ಲಿ ಇದರ ಬಗ್ಗೆ ಏನು ವ್ಯಕ್ತಪಡಿಸಿಲ್ಲ. ನಾನು ಸರ್ಕಾರದಲ್ಲಿ ಮನವಿ ಮಾಡುವುದೇನೆಂದರೆ ಈ ombudsman ಗಳನ್ನು ಖಂಡಿತವಾಗಿ, ಈಗ ಜಡ್.ಪಿ.ಯಲ್ಲಿ ಡೆಪ್ಯುಟಿ ಸೆಕ್ರೆಟರಿ ಎಂದು ಹೇಗೆ ಇರುತ್ತಾರೆ. ಆ ಮಟ್ಟದ Ombudsman ಗಳನ್ನು ಸರ್ಕಾರ ನಿಯೋಜಿಸಬೇಕು. ಈ ಗ್ರಾಮ ಪಂಚಾಯತ್‌ಗಳಲ್ಲಿ ಆಗುವಂತಹ ಅವ್ಯವಹಾರಗಳನ್ನು ತಕ್ಷಣ ತಡೆ ಹಿಡಿಯಲೇಬೇಕು, ಏಕೆಂದರೆ ಈಗ ಹೊಸ ಅವಧಿಗಳು ಪ್ರಾರಂಭವಾಗುತ್ತಿದೆ. ಈಗಲೇ ನಾವು ಮುನ್ನೆಚ್ಚರಿಕೆಯನ್ನು ವಹಿಸಿ ಕೆಲಸವನ್ನು ಮಾಡಿದರೆ, ಈ ಪಂಚಾಯತ್‌ಗಳಿಂದ ಇನ್ನು ಹೆಚ್ಚಿನ ಕೆಲಸಗಳನ್ನು ಮಾಡುವುದಕ್ಕೆ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಸಾಧನೆಗಳನ್ನು ಸಾಧಿಸುವುದಕ್ಕೆ ಅನುವು ಮಾಡಿಕೊಟ್ಟ ಹಾಗೆ ಆಗುತ್ತದೆ. ಇದರ ಬಗ್ಗೆ ಒಂದೇ ಅಲ್ಲ, ಇದರ ಜೊತಗೆ ಹಣದ ಸದುಪಯೋಗವಾಗಬೇಕಾದರೆ, ಏನೆಲ್ಲಾ ಮಾಡಬೇಕು. ಇವತ್ತು ನಮ್ಮಲ್ಲಿ ಸರಿಯಾದಂತಹ ಆಡಿಟ್ ವ್ಯವಸ್ಥೆ ಇಲ್ಲ, ಚೆಕ್ಸ್ ಅಂಡ್ ಬ್ಯಾಲೆನ್ಸ್‌ಗಳಿಲ್ಲ. ಇವುಗಳನ್ನೆಲ್ಲ

ತಾವು ಸೂಕ್ತ ಜಾಗದಲ್ಲಿ ಪರಿಚಯಿಸುವುದರ ಮುಖಾಂತರ, ಹಣದ ಸದುಪಯೋಗ ಆಗಬೇಕು. ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ಈ ಗ್ರಾಮ ಪಂಚಾಯತ್‌ಗಳು ಇನ್ನು ಹೆಚ್ಚಿನ ರೀತಿಯಲ್ಲಿ ಜವಾಬ್ದಾರಿಯಿಂದ ಕೆಲಸವನ್ನು ಮಾಡುವುದಕ್ಕೆ ಏನೇನು ಮಾಡಬೇಕೆಂದು ಇದೆ, ಅದೆಲ್ಲವನ್ನು ಮಾಡಬೇಕೆಂದು ಹೇಳುವುದರ ಜೊತೆಗೆ ತರಬೇತಿಯನ್ನು ಕೊಡುವಂಥಾದ್ದರ ಸದಸ್ಯರುಗಳ ಬಗ್ಗೆ, ಹಿಂದಿನ ಅವಧಿಯಲ್ಲಿ ಏನು ಆಗಿತ್ತು, ಮೊನ್ನೆ ಇನ್ನೇನು ಗ್ರಾಮ ಪಂಚಾಯತ್‌ಗಳ ಚುನಾವಣೆಗೆ ಹೋಗಬೇಕೆಂದು ಇನ್ನು ಎರಡು ತಿಂಗಳು ಇದೆ ಎನ್ನುವಾಗ, ಅದುವರೆಗೂ ತರಬೇತಿಯನ್ನು ಕೊಡುತ್ತಿದ್ದರು.

ಈ ತರಬೇತಿಯನ್ನು ಏತಕ್ಕೆ ಕೊಡುತ್ತಿದ್ದರೆಂಬುದು ನನಗೆ ಗೊತ್ತಿಲ್ಲ. ಈ ತರಬೇತಿ ಎನ್ನುವಂಥಾದ್ದನ್ನು ೪-೫ ತಿಂಗಳುಗಳಲ್ಲಿ ಪಂಚಾಯಿತನ ಎಲ್ಲಾ ಸದಸ್ಯರಿಗೆ ತರಬೇತಿಯನ್ನು ಕೊಟ್ಟು, ಅವರು ಜವಾಬ್ದಾರಿಯುತವಾಗಿ ಕೆಲಸವನ್ನು ಮಾಡುವಂಥಾದ್ದಕ್ಕೆ, ಸುಸಜ್ಜಿತರನ್ನಾಗಿ ಮಾಡಬೇಕೆಂದು, ನಾನು ಈ ಸಂದರ್ಭದಲ್ಲಿ ಮನವಿ ಮಾಡಲಿಚ್ಛಿಸುತ್ತೇನೆ. ಇನ್ನು ಕೊನೆಯದಾಗಿ ನಾನು ಈ ರಾಜ್ಯದ ಎಲ್ಲಾ ಭಾಗಗಳಿಗೆ ಸಂಬಂಧಪಟ್ಟ ಹಾಗೆ ನಾನು ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದರ ಜೊತೆಗೆ, ನಾವೆಲ್ಲರೂ ಸದನದ ಶಾಸಕರಾಗಿದ್ದೇವೆ. ನಮಗೆ ಎಲ್ಲರಿಗೂ ಸಂಬಂಧಿಸಿದ ಒಂದು ವಿಷಯವನ್ನು ಹೇಳಲಿಚ್ಛಿಸುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಯವರು, ಮಾನ್ಯ ಮುಖ್ಯಮಂತ್ರಿಯವರು ಹಾಗೂ ಸರ್ಕಾರದ ಎಲ್ಲರೂ ಸಹ ನಮ್ಮ ಶಾಸಕರ ಬೇಡಿಕೆಯಾಗಿದ್ದಂತಹ ಶಾಸಕರ ಅನುದಾನದ ಬೇಡಿಕೆಯನ್ನು ಇಟ್ಟಿದ್ದೆವು. ಅದನ್ನು ಇವತ್ತು ಪರಿಗಣಿಸಿ ಎಲ್ಲರಿಗೂ ೫೦ ಲಕ್ಷ ರೂಪಾಯಿಗಳನ್ನು ಕ್ಷೇತ್ರ ಅಭಿವೃದ್ಧಿ ನಿಧಿಯನ್ನು ಮಾನ್ಯ ಉಪ ಮುಖ್ಯಮಂತ್ರಿಯವರು ನಿಗದಿಪಡಿಸಿದ್ದಾರೆ. ಅದನ್ನು ಸಹ ನಾವು ಸ್ವಾಗತ ಮಾಡುತ್ತೇವೆ. ಇದರ ಜೊತೆಗೆ ಹಿಂದೆ ಸಪ್ಲಿಮೆಂಟರಿ ಎಸ್ಟಿಮೇಟ್ ಅನ್ನು ಸದನದಲ್ಲಿ ಮಂಜೂರು ಮಾಡುವಂತಹ ಸಂದರ್ಭದಲ್ಲಿ, ನಾವೆಲ್ಲರೂ ಮಾನ್ಯ ಉಪ ಮುಖ್ಯಮಂತ್ರಿಯವರಲ್ಲಿ, ಒಂದು ಮನವಿಯನ್ನು ಮಾಡಿದ್ದೆವು. ನಾವು ಶಾಸಕರು ಬೆಳಿಗ್ಗೆಯಿಂದ ರಾತ್ರಿಯವರೆಗೂ ಕಷ್ಟ ಪಟ್ಟು ಕೆಲಸವನ್ನು ಮಾಡುತ್ತೇವೆ. ನಮ್ಮ ಕ್ಷೇತ್ರದ ಜನರ ಕಷ್ಟ ಸುಖಗಳಲ್ಲಿ ನಾವು ಭಾಗಿಯಾಗುತ್ತೇವೆ. ನಮಗೂ ಯಾವತ್ತಾದರೂ ಸಾಯಂಕಾಲದ ವೇಳೆಯಲ್ಲಿ ಕುಳಿತುಕೊಳ್ಳುವುದಕ್ಕೆ ಅಥವಾ ಆಟ ಆಡುವಂಥಾದ್ದಕ್ಕೆ ಜಾಗವನ್ನು ನಿಗದಿ ಮಾಡಿಕೊಡಬೇಕೆಂದು ಕೇಳಿದ್ದೇವೆ. ತಾವು ಬಾಲಬ್ರೂಯಿಯಲ್ಲಿ.....

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ಈಗ ಬಾಲಬ್ರೂಯಿ....

ಶ್ರೀ ಸಿ.ಬಿ.ಕೃಷ್ಣ ಬೈರೇಗೌಡ : ಇದರ ಬಗ್ಗೆ ಒಂದು ಮಾತನ್ನು ಹೇಳಿ ಬಿಟ್ಟರೆ....

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಬಹಳ ವರ್ಷದ ಬೇಡಿಕೆಯಾಗಿದೆ. ಇದು ಇವತ್ತು ನಿನ್ನೆಯದು ಅಲ್ಲ.

ಶ್ರೀ ಸಿದ್ಧರಾಮಯ್ಯ: ಈಗ ಬೇಡಿಕೆ ಏನೋ ಹಳೆಯದೆ, ಆದರೆ ಮಾಡಬೇಕೆಂದು ತೀರ್ಮಾನ ಮಾಡಿರುವಂಥಾದ್ದು.

ಶ್ರೀ ಅರಗ ಜ್ಞಾನೇಂದ್ರ : ಇದಕ್ಕೆ ಅಧಿಕಾರಿಗಳು ಅವಕಾಶವನ್ನು ಕೊಡುವುದಿಲ್ಲವೆಂದು ಬಹಳ ಸಲ ಈ ರೀತಿಯಾಗಿ ಆಗುತ್ತಿತ್ತು.

ಶ್ರೀ ಸಿದ್ಧರಾಮಯ್ಯ : ನಾವೇ ತೀರ್ಮಾನ ಮಾಡುವಂಥಾದ್ದು, ಅಧಿಕಾರಿಗಳು ಏಕೆ ತೀರ್ಮಾನ ಮಾಡುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ : ಸರಿ ಸಾರ್.

ಶ್ರೀ ಸಿದ್ಧರಾಮಯ್ಯ : ಏಕೆ ಅನುಮಾನ ಇದೆಯಾ ?

ಶ್ರೀ ಅರಗ ಜ್ಞಾನೇಂದ್ರ : ನೀವು ಹೇಳಿದ ಮೇಲೆ ಅನುಮಾನ ಇಲ್ಲ.

ಶ್ರೀ ಹೆಚ್.ಡಿ. ಬಸವರಾಜು : ನಿಮ್ಮ ಮಾತಿನ ಮೇಲೆ ನಮಗೆ ಭರವಸೆ ಇದೆ. ಇದು ಯಾವಾಗ ಪ್ರಾರಂಭವಾಗುತ್ತದೆಂದು ಈ ಸದನದಲ್ಲಿ ಹೇಳಿದರೆ, ಇನ್ನು ಸಂತೋಷ ಪಡುತ್ತೇವೆ.

ಶ್ರೀ ಸಿದ್ಧರಾಮಯ್ಯ : ಹೇಳುತ್ತೇವೆ.

ಶ್ರೀ ಸಿ.ಬಿ.ಕೃಷ್ಣ ಬೈರೇಗೌಡ : ನಾವು ಸಹ ಹಿಂದೆ ತೆರಿಗೆ ಅಧಿಕಾರಿಗಳು ತೆರಿಗೆಯನ್ನು ಸಾಕಷ್ಟು ಹೆಚ್ಚು ಮಾಡಿದ್ದಾರೆಂದು, ಅವರು ಭವನವನ್ನು ಕಟ್ಟುವುದಕ್ಕೆ ಮಾನ್ಯ ಉಪಮುಖ್ಯಮಂತ್ರಿಯವರು, ಒಂದು ಕೋಟಿ ರೂಪಾಯಿಯನ್ನು ಕೊಟ್ಟಿದ್ದರು. ನಮಗೂ ಸಹ, ನಾವು ಕಷ್ಟಪಟ್ಟು ಕೆಲಸವನ್ನು ಮಾಡುತ್ತೇವೆ. ಅದಕ್ಕೆ ನಾವು ಹೇಳುತ್ತಿರುವಂಥಾದ್ದು, ಇನ್ನು ಏನು ಇಲ್ಲ, ನಾವು ಯಾವಾಗಲೊ ಒಮ್ಮೆ ಬ್ಯಾಡ್ಮಿಂಟನ್ ಆಡುವುದಕ್ಕೊ, ಪುಸ್ತಕವನ್ನು ಓದುವುದಕ್ಕೊ, ಯಾರಾದರೂ ಸ್ನೇಹಿತರ ಜೊತೆಗೆ ಮಾತನಾಡುತ್ತಾ ಕಾಫಿ ಕುಡಿಯಬೇಕೆಂದರೆ ನಮಗೆ ಸ್ಥಳವಿಲ್ಲ, ನಾವೆಲ್ಲರೂ ಗ್ರಾಮಾಂತರ ಪ್ರದೇಶದಿಂದ ಬಂದಂಥವರು. ಯಾವದೋ ಕ್ಲಬ್‌ಗಳಲ್ಲಿ ನಾವು ಸದಸ್ಯರು ಅಲ್ಲ.

ಶ್ರೀ ಕೆ.ಆರ್.ರಮೇಶ್ ಕುಮಾರ್ : Don't be apologetic. We are human beings. ನಾವು ಸೋಷಿಯಲ್ ಲೈಫ್ ಮಾಡಬೇಕು. get togethers ಮಾಡಬೇಕು. parties host ಮಾಡಬೇಕು. conference ಮಾಡಬೇಕು. we

need a club. ನೀವು ಬರೀ ಕಾಫಿಯನ್ನು ಕುಡಿಯುವುದಕ್ಕೆ ಎಂದು ಏಕೆ ಹೇಳುತ್ತೀರಿ. Be frank. we are human beings. ಇದು ಐ.ಎ.ಎಸ್. ಆಫೀಸರ್ಸ್‌ಗೆ ಬೇಕು, ಕೆ.ಎ.ಎಸ್. ಆಫೀಸರ್ಸ್‌ಗೆ ಬೇಕು. ಊರಿನವರೆಲ್ಲರಿಗೂ ಬೇಕು, ನಮಗೆ ಒಂದು ಕ್ಲಬ್ ಬೇಡವಾ? we want social life. we need a club. ಕೇಳಿ Put forth effectively. Why do you try to be apologetic?

ಶ್ರೀ ಸಿ.ಬಿ.ಕೃಷ್ಣಬೈರೇಗೌಡ : ನಾವು ಜನರ ಬಗ್ಗೆಯೂ ಕಾಳಜಿ ವಹಿಸಿ ಕೆಲಸವನ್ನು ಮಾಡುತ್ತಿದ್ದೇವೆ. ಇಲ್ಲಿ ಬೇರೆಯವರು ಹೇಳುವಂತಹ ಮಾತು ಏನೇ ಆಗಿರಬಹುದು. ಆದರೆ ನಮ್ಮ ನಿಷ್ಠೆಗೆ ಅನುಗುಣವಾಗಿ ನಾವು ಜನರ ಬಗ್ಗೆ ಕಾಳಜಿ ವಹಿಸಿ ಕೆಲಸ ಮಾಡುತ್ತಿರುತ್ತೇವೆ. ನಮಗೂ ಸಹ ಎಲ್ಲಾದರೂ ಒಂದು ಕಡೆ, ಏಕೆಂದರೆ ನಾವು ಕ್ಲಬ್‌ಗಳಲ್ಲೋ ಅಲ್ಲಿ ಇಲ್ಲಿ ಕಾಣಿಸಿಕೊಂಡರೆ ಒಂದೊಂದು ಸಂದರ್ಭದಲ್ಲಿ ನಮಗೇ ಮುಜುಗರವಾಗುತ್ತದೆ. ಆದಕ್ಕಾಗಿ ಇಲ್ಲಿಯೇ ಒಂದು ಅಂತರದಲ್ಲಿ ಜಾಗವಿದ್ದರೆ ನಾವು ಸಹ ಕುಳಿತು ಮಾತನಾಡುವುದಕ್ಕೆ ಅವಕಾಶವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತಾ ಇನ್ನು ಮುಖ್ಯವಾಗಿ ನಾನು ಸರ್ಕಾರವನ್ನು ಮತ್ತೊಮ್ಮೆ ಒತ್ತಾಯ ಮಾಡಲಿಕ್ಕೆ ಇಚ್ಛಿಪಡುತ್ತೇನೆ. ಈ ಬಾರಿ ನೀರಾವರಿಗೆ ೩೯೪೨ ಕೋಟಿ ರೂಪಾಯಿಗಳ ಅನುದಾನವನ್ನು ಸರ್ಕಾರ ನಿಗದಿಪಡಿಸಿದೆ. ಕೇವಲ ೧೨.೫ ಕೋಟಿ ರೂಪಾಯಿಗಳನ್ನು ಈ ಡಾ. ಪರಮಶಿವಯ್ಯನವರ ವರದಿಯಂತೆ ಏನು ಸರ್ವೆ ನಡೆಯುತ್ತಿದೆ ಆ ಯೋಜನೆಗೆ ದಯವಿಟ್ಟು ಹಣ ಕೊಡಲೇ ಬೇಕು. ಇಲ್ಲವೆಂದರೆ ಜನಪ್ರತಿನಿಧಿಗಳಾದ ನಮಗೆಲ್ಲರಿಗೆ ಸಹ ಭಾರೀ ಕಷ್ಟಕರವಾದ ವಾತಾವರಣ ಸೃಷ್ಟಿಯಾಗುತ್ತಿದೆ. ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡು ೧೨.೫ ಕೋಟಿ ರೂಪಾಯಿಗಳನ್ನು ನಿಗದಿಪಡಿಸಬೇಕೆಂದು ಹೇಳುವುದರ ಜೊತೆಗೆ ಈ ಸರ್ಕಾರದ ಹಾಗೂ ಆಯವ್ಯಯದ ಅತಿ ಜವಾಬ್ದಾರಿಯುತ ಒಂದು ದೃಷ್ಟಿ ಏನಿದೆ, ಆ ದೃಷ್ಟಿಯನ್ನು ಹಾಗೂ ಗ್ರಾಮಾಂತರ ಮತ್ತು ರೈತರ ಮೇಲೆ ಕೊಟ್ಟಿರುವ ಒತ್ತು ಇವೆರಡನ್ನೂ ಸಹ ನಾನು ಸ್ವಾಗತ ಮಾಡುತ್ತಾ ಈ ಒಂದು ಆಯವ್ಯಯವನ್ನು ಮಂಡಿಸಿದಂಥ ಮಾನ್ಯ ಉಪಮುಖ್ಯಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

ಶ್ರೀ ಎಸ್. ಬಾಲರಾಜು (ಕೊಳ್ಳೇಗಾಲ) : ಮಾನ್ಯ ಚೇರ್‌ಮನ್‌ರವರೆ, ಈ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕೆ ಮೊಟ್ಟಮೊದಲಬಾರಿಗೆ ನಿಮಗೆ ನನ್ನ ಕೃತಜ್ಞತೆಗಳನ್ನರ್ಪಿಸಿ ನನ್ನ ಮಾತನ್ನು ಪ್ರಾರಂಭಿಸುತ್ತೇನೆ. ಈಗಾಗಲೇ ಮಾನ್ಯ ಉಪಮುಖ್ಯಮಂತ್ರಿಗಳ ಬಗ್ಗೆ ಬಹಳಷ್ಟು ಒಳ್ಳೆಯ ಅಭಿಪ್ರಾಯವನ್ನು ಈ ಸದನದಲ್ಲಿ ಎಲ್ಲರು ವ್ಯಕ್ತಪಡಿಸಿದ್ದಾರೆ. ಈ ಆಯವ್ಯಯ ಅಂದಾಜನ್ನು

ಏನು ಸಲ್ಲಿಸಿದ್ದಾರೆ ಇದು ನನಗೂ ಕೂಡ ಬಹಳ ಸಂತೋಷವನ್ನು ನೀಡಿದೆ. ಅದರಲ್ಲೂ ವಿಶೇಷವಾಗಿ ಚಾಮರಾಜನಗರ ಜಿಲ್ಲೆಗೆ ವಿಶೇಷವಾದಂಥ ಯೋಜನೆಗಳು, ಅದು ಈಗಾಗಲೇ ಉಪಗ್ರಹ ಆಧಾರದ ಶಿಕ್ಷಣ ಇರಬಹುದು, ಮೊನ್ನೆ ಉದ್ಘಾಟನೆಗೊಂಡಿರತಕ್ಕಂಥ tele-medicine dialysis ಘಟಕ ಇರಬಹುದು. ಮುಂದೆ ಜಿಲ್ಲಾಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಿರತಕ್ಕಂಥದ್ದು ಮತ್ತು ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸತಕ್ಕಂಥದ್ದು ಬಹಳಷ್ಟು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಕ್ರೀಡಾಂಗಣವನ್ನು ಪೂರ್ಣಗೊಳಿಸುವುದಕ್ಕೆ ಕೂಡ ಅವರು ಕ್ರಮ ತೆಗೆದುಕೊಂಡು ಒಂದು ಒಳ್ಳೆಯ ಉದ್ದೇಶವನ್ನಿಟ್ಟು ನಮಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಹಾಗೆಯೇ ನೂತನ ತಂತ್ರಜ್ಞಾನ ಮತ್ತು ಉದ್ಯಮಗಳ ಪಾರ್ಕ್ ಅನ್ನು ಕೂಡ ಚಾಮರಾಜನಗರದಲ್ಲಿ ಸ್ಥಾಪಿಸಬೇಕೆಂದು ಹೇಳಿರುವಂಥದ್ದು ಚಾಮರಾಜನಗರ ಜಿಲ್ಲೆಗೆ ಒಂದು ಹೊಸ ದಿಕ್ಕನ್ನು ನೀಡುವ ನಿಟ್ಟಿನಲ್ಲಿ ಈ ಒಂದು ಯೋಜನೆ ಕಾರ್ಯಾರಂಭ ಮಾಡಿದೆ ಎಂದು ನಾನು ಭಾವಿಸುತ್ತೇನೆ. ಅಲ್ಲದೆ ವಿಶೇಷವಾಗಿ ಡಾ। ನಂಜುಂಡಪ್ಪನವರ ಸಮಿತಿ ಏನು ಶಿಫಾರಸ್ಸು ಮಾಡಿದೆ ಅದರಲ್ಲಿ ಏನು ಈಗಾಗಲೇ ಕೃಷಿಗೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲೂ ಬಹಳಷ್ಟು ಒಳ್ಳೆಯದನ್ನು ಹೇಳಿದ್ದಾರೆ. ಇನ್ನು ನಮ್ಮಲ್ಲಿರುವ ಒಳನಾಡು ಮೀನುಗಾರಿಕೆ ಬಗ್ಗೆ ಹೇಳಬಯಸುತ್ತೇನೆ. ಇಡೀ ಒಳನಾಡು ಮೀನುಗಾರಿಕೆಯಲ್ಲಿ ಸುಮಾರು ೬ ಲಕ್ಷ ಹೆಕ್ಟೇರ್‌ನಲ್ಲಿ ಇವತ್ತು reservoir tank ಗಳ ಮುಖಾಂತರ ಸಾಮಾನ್ಯವಾಗಿ ಮೀನುಗಾರರು ಮೀನುಗಾರಿಕೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಆದರೆ ಮೀನುಗಾರರಿಗೆ ಯಾವುದೇ ರೀತಿಯ ಸೂಕ್ತವಾದಂಥ ಸೌಲಭ್ಯಗಳನ್ನು ಸರಿಯಾಗಿ ಇದುವರೆಗೂ ಕೊಟ್ಟಿಲ್ಲ ಮತ್ತು ಕೊಡುತ್ತಿಲ್ಲ, ಸಾಮಾನ್ಯವಾಗಿ ಯಾವುದೋ ಕೆಲವು ಸಹಕಾರ ಸಂಘಗಳಿಗೆ ಸ್ವಲ್ಪ ಅನುಕೂಲವಾಗಿರಬಹುದು. ಆದರೆ ಮೀನುಗಾರರಿಗೆ ಬೇಕಾದಂಥ ಮೂಲಭೂತ ಸೌಕರ್ಯಗಳ ಬಗ್ಗೆ ಎಲ್ಲೂ ಉಲ್ಲೇಖ ಮಾಡಿಲ್ಲ ಮತ್ತು ಅದಕ್ಕೆ ಅವಕಾಶವನ್ನೂ ಕೊಡಲಿಲ್ಲ. ಸುಮಾರು ಒಂದು ಲಕ್ಷ ಮೀನುಗಾರರು ಅದಕ್ಕೆ ಅವಲಂಬಿತರಾಗಿದ್ದಾರೆ ಮತ್ತು ಅದನ್ನೇ ನಂಬಿ ಬದುಕುತ್ತಿದ್ದಾರೆ. ಈಗ ಒಂದು ಕೆರೆಯನ್ನು ಗುತ್ತಿಗೆ ಕೊಡುವಾಗ ೧೫೦ ರೂಪಾಯಿಗಳು ಒಂದು ಎಕರೆಗೆ ಎಂಬ ಅಂಶವನ್ನು ಸರ್ಕಾರ ನಿಗದಿಪಡಿಸಿದೆ. ಈ ೧೫೦ ರೂಪಾಯಿಗಳು ಒಂದು ಎಕರೆ ಪ್ರದೇಶಕ್ಕೆ ಸೀಮಿತವಾಗಿರುವ ಸಂದರ್ಭದಲ್ಲಿ ಆ ಲೀಸ್ ಅಮೌಂಟ್ ಇರತಕ್ಕಂಥ ಸಂದರ್ಭದಲ್ಲಿ ಇಡೀ ಕೆರೆಗಳು ಬಹುತೇಕ ಹೂಳು ತುಂಬಿ ಮುಚ್ಚಿ ಹೋಗಿವೆ. ಹಾಗೆಯೇ ಕೆರೆಯ ಸುತ್ತಮುತ್ತಲಿನ ಜಮೀನು ಇರತಕ್ಕಂಥವರು ಆ ಕೆರೆಯ ಜಾಗವನ್ನು ಒತ್ತುವರಿ ಮಾಡಿಕೊಂಡು ಯಾವುದೇ ತೆರವನ್ನು ಮಾಡದೆ ಕೆರೆಗಳು ಬಹಳಷ್ಟು ಕಿರುದಾಗಿವೆ. ಆದರೆ ಲೀಸ್ ಅಮೌಂಟ್ ಅನ್ನು ನಿಗದಿ ಮಾಡುವ ಸಂದರ್ಭದಲ್ಲಿ ಪೂರ್ತಿ ಕೆರೆಗೆ ನಿಗದಿ ಮಾಡುವುದರಿಂದ ರೈತ,

ಸಹಕಾರ ಸಂಘಗಳು, ಬಡ ಮೀನುಗಾರರು ಆ ಹೆಚ್ಚು ಹಣವನ್ನು ಹೇಗೆ ಭರಿಸುವುದಕ್ಕೆ ಸಾಧ್ಯವಾಗುತ್ತದೆ? ಸುಮಾರು ವರ್ಷಗಳ ಸತತ ಬರಗಾಲದಿಂದ ಕೆರೆಯಲ್ಲಿ ನೀರು ಬರಲಿಲ್ಲ. ಆದರೆ ಆ ಲೀಸ್ ಅಮೌಂಟ್‌ನ ಹೆಚ್ಚುವರಿ ೧೦ ಪರ್ಸೆಂಟ್ ಹಣವನ್ನು ಕಟ್ಟಬೇಕು. ಆ ಹೆಚ್ಚುವರಿ ೧೦ ಪರ್ಸೆಂಟ್ ಹಣವನ್ನು ಕಟ್ಟುತ್ತ ಬಂದಂಥ ಸಂದರ್ಭಗಳಲ್ಲಿ ಕೂಡ ಅವರಿಗೆ ಒಂದೇ ಒಂದು ವರ್ಷಕ್ಕೆ ಮಾತ್ರ ಆ ಲೀಸ್ ಹಣವನ್ನು ಏನು ನಿಗದಿ ಮಾಡಿತ್ತು ಅದಕ್ಕೆ ಸರ್ಕಾರ ರಿಯಾಯಿತಿಯನ್ನು ತೋರಿಸಿತ್ತು. ಆದರೆ ಉಳಿದಂಥ ಎರಡು ವರ್ಷಗಳಲ್ಲಿಯೂ ಅವರಿಗೆ ಯಾವುದೇ ತರಹದ ರಿಯಾಯಿತಿಗಳನ್ನು ಕೊಡಲಿಲ್ಲ. ಈಗ ಕೆರೆಗೆ ಸ್ವಲ್ಪ ನೀರು ಬಂದಾಕ್ಷಣಕ್ಕೆ ಮೊದಲನೇ ಪ್ರಾಮುಖ್ಯತೆ ಯಾವಾಗಲೂ ರೈತರಿಗೆ ಇರುತ್ತದೆ. ಆದರೆ ನೀರು ಎತ್ತತಕ್ಕಂಥ ಸಂದರ್ಭದಲ್ಲಿ ಸಂಪೂರ್ಣ ನೀರು ಹೊರಟು ಹೋಗಿಬಿಡುತ್ತದೆ. ಅವನು ಮೀನುಗಾರಿಕೆ ಮಾಡುವ ಸಂದರ್ಭದಲ್ಲಿ ಮೀನು ಮರಿ ತಂದು ಬಿಟ್ಟಿದ್ದರೂ ಕೂಡ ಕೇವಲ ೩-೪ ತಿಂಗಳಲ್ಲಿ ಅವನು ಎಲ್ಲ ಹಣವನ್ನು ಕಳೆದುಕೊಳ್ಳುವ ಸಾಧ್ಯತೆಗಳಿರುತ್ತವೆ. ಆದಕಾರಣದಿಂದ ಮೀನುಗಾರಿಕೆ ಇಲಾಖೆಯಿಂದಲೇ ಆ ಕೆರೆಯಿಂದ ಹೂಳನ್ನು ಎತ್ತಿಸತಕ್ಕಂಥದ್ದು ಅಂದರೆ ಸರ್ಕಾರದ ವತಿಯಿಂದ ನೀರಾವರಿ ಇಲಾಖೆಯಲ್ಲಿ ರೈತರಿಗೆ ನೀರು ಕೊಡುವ ನಿಟ್ಟಿನಲ್ಲಿ ಸಿಲ್ಟ್ ಅನ್ನು ಡಿ-ಸಿಲ್ಟಿಂಗ್ ಮಾಡುವ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಅದಕ್ಕೂ ಕೆಳಗೆ ಹೋಗಿ ಒಂದು ಮೀಟರ್‌ನಷ್ಟು ಅಂದರೆ ಕನಿಷ್ಠ ಪಕ್ಷ ೩ ಅಡಿ ನೀರನ್ನಾದರೂ ನಿಲ್ಲಿಸುವ ವ್ಯವಸ್ಥೆಯನ್ನು ಮೀನುಗಾರಿಕೆ ಇಲಾಖೆ ಮಾಡಿದರೆ ಆ ಬಡ ಮೀನುಗಾರರಿಗೆ ವರ್ಷಪೂರ್ತಿ ಆ ಮೀನುಗಾರಿಕೆಯಿಂದ ಬದುಕುವ ಅವಕಾಶವನ್ನು ಕಲ್ಪಿಸಿಕೊಟ್ಟ ಹಾಗೆ ಆಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ಭಾವಿಸುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಾನ್ಯ ಛೇರ್ಮನ್‌ರವರೆ, ಶ್ರೀ ಬಾಲರಾಜುರವರು ಹೇಳಿದ್ದು ನಿಜ. ಈ ಮೀನುಗಾರಿಕೆ ಇಲಾಖೆಯಲ್ಲಿರುವ ಅಧಿಕಾರಿಗಳು ಅಲ್ಲಿ ಕೆಲಸ ಮಾಡಲಿಕ್ಕೆ ಇರುವುದಲ್ಲ! ಶಾಶ್ವತವಾಗಿ ಬೆಂಗಳೂರಿನಲ್ಲಿ ಕುಳಿತುಕೊಳ್ಳುವುದು ಹೇಗೆ? ಎಂಬುದರ ಬಗ್ಗೆ ಬೇಕಾದಂಥ ಕಾಯಕದಲ್ಲಿ ನಿರತರಾಗಿರುತ್ತಾರೆ. ಮಾನ್ಯ ಛೇರ್ಮನ್‌ರವರೇ, ಈ ಮೀನುಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡುವಂಥ ಅಧಿಕಾರಿ ನೌಕರರು ಯಾರ್‍ಯಾರು ಎಲ್ಲೆಲ್ಲಿ ಎಷ್ಟೆಷ್ಟು ವರ್ಷ ಇದ್ದರು ಎನ್ನುವ ಒಂದು ಪಟ್ಟಿಯನ್ನು ತರಿಸಬೇಕು. ಕೆಲವರಿಗೆ ಈ ಇಲಾಖೆಯಲ್ಲಿ ೧೬ ವರ್ಷ ಸರ್ವೀಸ್ ಆಗಿದ್ದರೆ ಅದರಲ್ಲಿ ೧೫ ವರ್ಷ ಬೆಂಗಳೂರಿನಲ್ಲಿಯೇ ಸೇವೆ ಸಲ್ಲಿಸಿರುತ್ತಾರೆ. ಅವರಿಗೆ ಬೇರೆ ಸ್ಥಳಕ್ಕೆ ವರ್ಗಾವಣೆಯಾದರೆ ಅಲ್ಲಿಗೆ ಹೋಗದೆ ರಜೆ ತೆಗೆದುಕೊಂಡು ಹೋಗುತ್ತಾರೆ. ಪುನಃ ಯಾರಾದರೂ ವ್ಯಕ್ತಿಗಳನ್ನು ಹಿಡಿದುಕೊಂಡು ವರ್ಗಾವಣೆಯನ್ನು ಕ್ಯಾನ್ಸಲೇಷನ್

ಮಾಡಿಕೊಂಡು ಅದೇ ಸ್ಥಳಕ್ಕೆ ಬರುತ್ತಾರೆ. ಏಕೆಂದರೆ ಒಬ್ಬ ವ್ಯಕ್ತಿ ಇದ್ದಾನೆ. ಅವನು ತನ್ನ ಮಾವನಿಗೆ ಹುಷಾರಿಲ್ಲವೆಂದು ಹೇಳಿ ಶಾಶ್ವತವಾಗಿ ಒಂದೇ ಕಡೆ ಇದ್ದಾನೆ. ಮಾವನಿಗೆ ಹುಷಾರಿಲ್ಲವೆಂದು ಒಂದೇ ಕಡೆ ಇರುವುದಾದರೆ ಅಂಥವರು ಈ ಸರ್ವೀಸ್ ನಲ್ಲಿ ಇರಬೇಕೇ? ಕೆಲಸಕ್ಕೆ ರಾಜೀನಾಮೆ ಕೊಟ್ಟು ಅಲ್ಲಿ ಅವನ ಮಾವನನ್ನೇ ನೋಡಿಕೊಂಡು ಇರಲಿ. ಮೊನ್ನೆ ಪುನಃ ವರ್ಗಾವಣೆ ಆದುದನ್ನು ಕ್ಯಾನ್ಸಲೇಷನ್ ಮಾಡಿಸಿಕೊಂಡು ಬಂದಿದ್ದಾನೆ. ಇಂಥ ಪರಿಸ್ಥಿತಿ ಆ ಇಲಾಖೆಯಲ್ಲಿದೆ. ಅಲ್ಲಿ ಮನೆ ಕೊಡಲಿಕ್ಕೆ ವ್ಯವಸ್ಥೆ ಮಾಡುತ್ತಿಲ್ಲ. ಡಿ-ಸಿಲ್ಟಿಂಗ್ ವ್ಯವಸ್ಥೆ ಮಾಡುತ್ತಿಲ್ಲ. ಆ ಕೆರೆಗಳನ್ನು ಲೇಕ್ ಡೆವಲಪ್‌ಮೆಂಟ್ ಅಥಾರಿಟಿಗೆ ಕೊಟ್ಟಿದ್ದಾರೆ. ಆ ಕೆರೆಗಳನ್ನು ಅವರು ಮೀನುಗಾರಿಕೆಗೆ ಕೊಡುತ್ತಿಲ್ಲ. ಅವರು ಆ ಕೆರೆಗಳನ್ನು ಪ್ರೈವೇಟ್ ಆರ್ಗನೈಜೇಷನ್‌ಗೆ ದೊಡ್ಡ ಅಮೌಂಟ್‌ಗೆ ಲೀಸ್ ಕೊಡುತ್ತಿದ್ದಾರೆ. ಹಾಗಾದರೆ ಮೀನುಗಾರರು ಏನು ಮಾಡಬೇಕು? ಈ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಇದರ ಬಗ್ಗೆ ಸಹ ಮಾಹಿತಿಯನ್ನು ತರಿಸಬೇಕು. ಎಲ್ಲ ಮೀನುಮರಿ ಉತ್ಪಾದನಾ ಕೇಂದ್ರಗಳು defunct ಆಗಿವೆ. ಏಕೆಂದರೆ ಈ ಇಲಾಖೆಯಲ್ಲಿರುವ ಅಧಿಕಾರಿ/ ನೌಕರರುಗಳಿಗೆ ಇವುಗಳ ಬಗ್ಗೆ ಕೆಲಸ ಮಾಡುವ ಉದ್ದೇಶ ಇಲ್ಲ. ವೈಯಕ್ತಿಕ ಸಮಸ್ಯೆಗಳು ಮಾತ್ರ ಅವರ ಮುಂದೆ ಬಂದಿವೆ. ಮಾನ್ಯ ಬಾಲರಾಜುರವರು ಹೇಳುವುದನ್ನು ನಾನು ಒಪ್ಪುತ್ತಿದ್ದೇನೆ.

ಶ್ರೀ ಎಸ್. ಬಾಲರಾಜು : ಹಾಗೆಯೇ ಕೆರೆಗಳನ್ನು lease ಗೆ ಕೊಡುವ ಬಗ್ಗೆ ಒಂದು ಪಾಲಿಸಿ ಮಾಡಬೇಕು. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದ ಹಾಗೆ ಕೆಲವು ಕೆರೆಗಳು Forest Department ಗೆ ಸೇರಿಕೊಂಡಿವೆ. ಕೆಲವು ಕೆರೆಗಳು Irrigation Department ಗೆ ಸೇರಿವೆ, ಇನ್ನು ಕೆಲವು ಕೆರೆಗಳು Minor Irrigation Department ಗೆ ಸೇರಿವೆ, ಗ್ರಾಮಪಂಚಾಯತ್‌ಗಳಿಗೆ ಸೇರಿವೆ, ಯಾವುದರ ಮುಖಾಂತರ ಯಾರು ತೆಗೆದುಕೊಂಡು ಹೇಗೆ ಮಾಡಬೇಕು, ಯಾವ ರೀತಿ ಅಭಿವೃದ್ಧಿಪಡಿಸಬೇಕೆನ್ನುವುದರ ಬಗ್ಗೆ ಕೂಡ ಒಂದು ನೀತಿನಿಯಮ ಇಲ್ಲ. ಹಾಗಾಗಿ ಅದಕ್ಕೆ ಬೇಕಾದಂಥ ನೀತಿನಿಯಮವನ್ನು ಮಾಡುವ ಕೆಲಸವನ್ನು ಸರ್ಕಾರ ಮಾಡಬೇಕು. ಮತ್ತೆ ಆ ಪಾಲಿಸಿ ಸಹ ಒಂದೇ ರೀತಿಯಾಗಿರಬೇಕು. ಇಂಥ ಕೆಲಸವನ್ನು ಮಾಡಿದರೆ ಮೀನುಗಾರರಿಗೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ ಮತ್ತು ಅವರಿಗೆ ಹೆಚ್ಚಿನ ಶಕ್ತಿಯನ್ನು ನಾವು ಸಮಾಜದಲ್ಲಿ ನೀಡಿದ ಹಾಗೆ ಆಗುತ್ತದೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಸರ್ಕಾರ ಅನೇಕ ಯೋಜನೆಗಳನ್ನು ಹಾಕಿಕೊಂಡು ಕಳೆದ ಸಾಲಿನಲ್ಲಿ ೩೩೭ ಪ್ರೌಢ ಶಾಲೆಗಳನ್ನು ಈಗಾಗಲೇ ಪ್ರಾರಂಭಿಸಿದ್ದೇವೆಂದು ಹೇಳಿದ್ದಾರೆ. ಹಾಗಾಗಿ ಈ ಸಾಲಿನಲ್ಲಿ ೧೧೪ ನೂತನ ಪ್ರೌಢಶಾಲೆಗಳನ್ನು ನಂಜುಂಡಪ್ಪನವರ ಸಮಿತಿ

ಶಿಫಾರಸ್ಸು ಮೇಲೆ ಪ್ರಾರಂಭ ಮಾಡುತ್ತೇವೆನ್ನುವ ಅಂಶವನ್ನು ಸಹ ತಿಳಿಸಿದ್ದಾರೆ. ಆದರೆ ನಮ್ಮ ವ್ಯಾಪ್ತಿಗೆ ಬರತಕ್ಕಂಥ ಆ ಸಮಿತಿಗೆ ಸೇರದಿರತಕ್ಕಂಥ ಹಿಂದುಳಿದ ತಾಲ್ಲೂಕುಗಳಲ್ಲಿ ಕೂಡ ಬಡ ಮಕ್ಕಳು ಇದ್ದಾರೆ. ಅಲ್ಲಿಗೂ ಕೂಡ ಪ್ರೌಢಶಾಲೆಗಳ ಅವಶ್ಯಕತೆ ಇವೆ. ಪ್ರೌಢಶಾಲೆಗಳನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಆ ಹಿಂದುಳಿದಂಥ ತಾಲ್ಲೂಕುಗಳಿಗೆ ಹೆಚ್ಚಿನ ಒತ್ತು ಕೊಡುವುದರ ಜೊತೆಗೆ ಎಲ್ಲ ತಾಲ್ಲೂಕುಗಳಿಗೆ ಪ್ರೌಢಶಾಲೆಗಳನ್ನು ಕೊಟ್ಟರೆ, ಈ ಪ್ರಾಥಮಿಕ ಶಿಕ್ಷಣಕ್ಕೆ ನಾವು ಏನು ಅನುಕೂಲ ಮಾಡಿಕೊಟ್ಟಿದ್ದೇವೆ, 'ಸರ್ವಶಿಕ್ಷಣ ಅಭಿಯಾನಾ'ದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಟ್ಟು ಇವತ್ತು ಎಲ್ಲ ಕಟ್ಟಡಗಳು ಸಂಪೂರ್ಣವಾಗಿವೆ. ಕುಡಿಯುವ ನೀರು, ಶೌಚಾಲಯ ಹೀಗೆ ಎಲ್ಲ ಇವೆ. ಆದರೆ ಪ್ರೌಢಶಾಲೆಗೆ ಕೊಠಡಿಗಳನ್ನು ಕೊಡುತ್ತೇವೆಂದು ಸರ್ಕಾರದಿಂದ ೧೦ ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಈ ಶೌಚಾಲಯಗಳ ಕೊರತೆ ಎಷ್ಟಿದೆಯೆಂದರೆ, ಹೆಣ್ಣುಮಕ್ಕಳು ಪ್ರೌಢಶಾಲೆಗಳಿಗೆ ಹೋಗದಿರತಕ್ಕಂಥ ದುಸ್ತರ ಪರಿಸ್ಥಿತಿ ಇದೆ. ಆದ್ದರಿಂದ ಮೊಟ್ಟಮೊದಲನೆಯದಾಗಿ ಶಾಲಾ ಕೊಠಡಿಗಳನ್ನು ಕೊಡುವುದಕ್ಕೆ ಮುಂಚೆ ಶೌಚಾಲಯಗಳನ್ನು ಮಾಡಿ. ಶೌಚಾಲಯಗಳನ್ನು ಮಾಡಿಸಿದರೆ ಮಾತ್ರ ಒಂದು ಹೆಣ್ಣು ಮಗು ನೇರವಾಗಿ ಶಾಲೆಗೆ ಸೇರಿ ಅವರ ಮಾನಮರ್ಯಾದೆಯನ್ನು ಕಾಪಾಡಿಕೊಂಡು ಅಲ್ಲಿ ಓದತಕ್ಕಂಥ ವ್ಯವಸ್ಥೆ ಬರುತ್ತದೆ. ಅವಳ ಮಾನವನ್ನು ಉಳಿಸತಕ್ಕಂಥ ಜವಾಬ್ದಾರಿ ನಮಗಿದೆ ಮತ್ತು ಅತಿ ಹೆಚ್ಚು ಹೆಣ್ಣುಮಕ್ಕಳನ್ನು ಶಾಲೆಗೆ ಸೇರಿಸತಕ್ಕಂಥ ಜವಾಬ್ದಾರಿ ಬರುತ್ತದೆ. ಏಕೆಂದರೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಸಾಕ್ಷರತೆ ಪ್ರಮಾಣ ೬೭.೦೪ ಪರ್ಸೆಂಟ್ ಇದೆ. ಅದು ಗ್ರಾಮೀಣ ಪ್ರದೇಶದಲ್ಲಿ ೫೯.೬೮ ಪರ್ಸೆಂಟ್, ನಗರ ಪ್ರದೇಶದಲ್ಲಿ ೮೧.೦೫ ಪರ್ಸೆಂಟ್ ಇರುವ ಸಂದರ್ಭದಲ್ಲಿ ಗಂಡು ಮಕ್ಕಳ ಸಾಕ್ಷರತೆ ಪ್ರಮಾಣ ೭೬.೨೯ ಪರ್ಸೆಂಟ್ ಇದ್ದರೆ ಹೆಣ್ಣು ಮಕ್ಕಳ ಸಾಕ್ಷರತೆ ಪ್ರಮಾಣ ೫೫.೪೫ರಲ್ಲಿ ಇದೆಯೆಂದರೆ ಸಾಕ್ಷರತೆ ಪ್ರಮಾಣದಲ್ಲಿ ಹೆಣ್ಣುಮಕ್ಕಳು ಸುಮಾರು ೨೦ ಪರ್ಸೆಂಟ್ ಹಿಂದೆ ಇದ್ದಾರೆಂದರೆ ನಾವು ಹೆಣ್ಣುಮಕ್ಕಳಿಗೆ ಹೆಚ್ಚು ಒತ್ತು ಕೊಟ್ಟು ಅವರಿಗೆ ಸಹಾಯವನ್ನು ಮಾಡಿ ಅಥವಾ ಅವರಿಗೆ ಸರ್ಕಾರದ ಮಟ್ಟದಲ್ಲಿ ಆ ಹೆಣ್ಣುಮಕ್ಕಳಿಗೆ ಓದುವುದಕ್ಕೆ ಅನುಕೂಲ ಮಾಡುವ ಕೆಲಸವನ್ನು ನಾವು ಗುರುತರವಾಗಿ ಮಾಡುತ್ತಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಅವರ ಸಾಕ್ಷರತೆ ಪ್ರಮಾಣದ ಜೊತೆಗೆ ಜನನ ಪ್ರಮಾಣದಲ್ಲಿ ಕೂಡ ಹೆಣ್ಣು ಮಕ್ಕಳ ಜನನ ಸಂಖ್ಯೆ ಅತಿ ಹೆಚ್ಚಿನ ಸಂಖ್ಯೆ ೨೨.೩ ಪರ್ಸೆಂಟ್ ಜನನ ಪ್ರಮಾಣ ಇದೆ. ಆದರೆ ಗಂಡು ಮಕ್ಕಳ ಜನನ ಪ್ರಮಾಣ ಶೇಕಡ ೭.೬ರಲ್ಲಿದೆ. ಈ ಶಿಶು ಮರಣ ರೂಪದಲ್ಲಿ ಶೇಕಡ ೫೮ರಷ್ಟು ಮಕ್ಕಳು ಸಾಯುತ್ತಿದ್ದಾರೆ. ಏಕೆ ಸಾಯುತ್ತಿದ್ದಾರೆಂದರೆ ಹೆಣ್ಣುಮಕ್ಕಳಲ್ಲಿ ಅವರಿಗೆ ಒಳ್ಳೆಯ ಆರೋಗ್ಯವಂತ ಕುಟುಂಬವನ್ನು ಆರೋಗ್ಯವಂತ ಜೀವನವನ್ನು ನಿರ್ಮಾಣ ಮಾಡಲಿಕ್ಕೆ

ನಾವು ಸೋತಿದ್ದೇವೆ. ಅವರಿಗೆ ಒಳ್ಳೆಯ ನಿಟ್ಟಿನಲ್ಲಿ ನಾವು ಏನು ಪುರುಷರಿಗೆ ಯಾವ ತರಹದ ಅನುಕೂಲ ಮಾಡಿಕೊಡಬೇಕು. ಇವತ್ತು ತಾಯಿ ತಂದೆಗಳಲ್ಲಿ ಕುಟುಂಬವರ್ಗದಲ್ಲಿ, ಗಂಡಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡತಕ್ಕಂಥ ಸಂದರ್ಭಗಳಲ್ಲೂ ಹೆಣ್ಣುಮಕ್ಕಳಿಗೆ ಹೆಚ್ಚು ಅನ್ಯಾಯವಾಗುತ್ತದೆ ಎನ್ನುವುದನ್ನು ನಾವು ಒಪ್ಪುತ್ತಿದ್ದೇವೆ.

ಅದನ್ನು ತಪ್ಪಿಸಲು ಸರ್ಕಾರ ಏನಾದರೂ ಒಳ್ಳೆಯ ಕ್ರಮವನ್ನು ತೆಗೆದುಕೊಂಡು ಉತ್ತಮವಾದ ರೀತಿಯಲ್ಲಿ ಆ ಹೆಣ್ಣುಮಕ್ಕಳಿಗೆ ಅವರ ಭವಿಷ್ಯವನ್ನು ರೂಪಿಸತಕ್ಕ ಕೆಲಸವನ್ನು ಸರ್ಕಾರ ಮಾಡುವಂಥ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಮುಂದುವರಿಕೆ ಶಿಕ್ಷಣ ಕೇಂದ್ರಕ್ಕೂ ಇವತ್ತೂ ಪ್ರೇರಕ ಉಪಪ್ರೇರಕರಿಗೆ ಯಾವುದೇ ಗೌರವಧನವನ್ನು ಇಷ್ಟು ತಿಂಗಳಾದರೂ, ನಾವೇ ಹೋಗಿ ದೀಪವನ್ನು ಜ್ಯೋತಿಯನ್ನು ಬೆಳಗಿಸಿ ಪ್ರಾರಂಭಿಸಿದ್ದೇವೆ. ಆ ರೀತಿ ಪ್ರಾರಂಭಿಸಿದಂಥ ಕೆಲಸ ಸಮರ್ಪಕವಾಗಿ ನಡೆಯಬೇಕಾದರೆ ಅವರಿಗೆ ಕೊಡತಕ್ಕ ಸಣ್ಣಪುಟ್ಟ ಗೌರವಧನವನ್ನು ಕೂಡ ಇನ್ನೂ ಸರ್ಕಾರ ಬಿಡುಗಡೆ ಮಾಡಿಲ್ಲ, ಅದನ್ನು ಬಿಡುಗಡೆ ಮಾಡದಿದ್ದರೆ ಅವರು ಯಾವ ರೀತಿಯಲ್ಲಿ ಆ ಕೆಲಸವನ್ನು ನಿರ್ವಹಿಸಲು ಆಗುತ್ತದೆ? ಎಷ್ಟು ದಿನ ಅವರು ಧರ್ಮಕ್ಕೆ ಕೆಲಸವನ್ನು ಮಾಡಲು ಆಗುತ್ತದೆ? ಎಷ್ಟು ದಿವಸ ಕಾಯಲು ಆಗುತ್ತದೆ? ಅಲ್ಲಿರತಕ್ಕವರಲ್ಲಿ ಬಹುತೇಕ ನಿರುದ್ಯೋಗ ಯುವಕ ಯುವತಿಯರು. ಅವರಿಗೆ ಸಹಾಯ ಮಾಡತಕ್ಕ ಕೆಲಸವನ್ನು ಸರ್ಕಾರ ಕ್ರಮವಹಿಸಿ ಮಾಡಬೇಕು. ಏಕೆಂದರೆ ಇವತ್ತು ನಾವು ಏನೇನೊ ಉದ್ದೇಶಗಳನ್ನಿಟ್ಟುಕೊಂಡು ಕೆಲಸ ಮಾಡುತ್ತೇವೆ, ಆದರೆ ಗ್ರಾಮೀಣ ಪ್ರದೇಶದಲ್ಲಿರತಕ್ಕವರಿಗೆ ಉದ್ಯೋಗವೇ ಇಲ್ಲ, ಅವರು ಬಹಳಷ್ಟು ಕಷ್ಟದಲ್ಲಿದ್ದಾರೆ. ಇವತ್ತು ಅನೇಕ ಯೋಜನೆಗಳನ್ನು ಸರ್ಕಾರ ಹಾಕಿಕೊಂಡಿದೆ. ಅದರಲ್ಲಿ ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ಯೋಜನೆ ಇರಬಹುದು, ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆ ಇರಬಹುದು, ಶ್ರಮಶಕ್ತಿ ಯೋಜನೆ ಇರಬಹುದು, ಚೈತನ್ಯ ಯೋಜನೆ ಇರಬಹುದು, ಈ ರೀತಿ ಅನೇಕ ಯೋಜನೆಗಳು ಇದೆ. ಆದರೆ ಇವತ್ತು ಸರ್ಕಾರದ ಮಟ್ಟದಲ್ಲಿ ಏನಾಗುತ್ತದೆಂದರೆ, ಇವತ್ತು ಒಂದು ಲಕ್ಷ ರೂಪಾಯಿಗಳಲ್ಲಿ ಯಾರಾದರೂ ಒಬ್ಬ ಯುವಕ ತನ್ನ ಜೀವನದಲ್ಲಿ ಏನೋ ಒಂದು ಆಸೆಯನ್ನಿಟ್ಟುಕೊಂಡು ಒಂದು ಪ್ರಾಜೆಕ್ಟನ್ನು ತಯಾರು ಮಾಡಿ ಹೋದರೆ ಅವನಿಗೆ ಬ್ಯಾಂಕ್‌ನಿಂದ ಬರತಕ್ಕ ಸಂದರ್ಭದಲ್ಲಿ ಕೊನೆಗೆ ಅವನಿಗೆ ಸಿಗತಕ್ಕದ್ದು ಒಂದು ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಳ್ಳಲು ಐದರಿಂದ ಹತ್ತು ಸಾವಿರ ರೂಪಾಯಿಗಳು. ಅವನು ಮಾಡತಕ್ಕ ಪ್ರಾಜೆಕ್ಟ್ ರಿಪೋರ್ಟ್ ಒಂದು ಲಕ್ಷವಾದರೆ ಅವನ ಕೈಗೆ ಕೊಡತಕ್ಕದ್ದು, ಬ್ಯಾಂಕ್‌ನವರು ಇದನ್ನು ಕೊಡಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಅವನಿಗೆ ಕೊನೆಗೆ ಬರತಕ್ಕದ್ದು, ಒಂದು ಪೆಟ್ಟಿಗೆ ಅಂಗಡಿಯನ್ನಿಟ್ಟುಕೊಂಡು ಕೊನೆಗೆ

ಸಾಲಗಾರನಾಗಿ ಒಂದು ಊರನ್ನು ಬಿಡಬೇಕು ಇಲ್ಲದಿದ್ದರೆ ಬದುಕುವುದಕ್ಕೆ ಬೇರೆ ಹಾದಿಯನ್ನು ಹುಡುಕಿಕೊಂಡು ಹೋಗತಕ್ಕ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ಕೊಡತಕ್ಕದ್ದನ್ನು ಈಗ ಸರಿಯಾದ ರೀತಿಯಲ್ಲಿ ಸರ್ಕಾರ ಸಡಿಲಿಕೆ ಮಾಡಿ ಯುವಕರಿಗೆ ಆದ್ಯತೆ ನೀಡಿ ಅವರಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಕೆಲಸವನ್ನು ಮಾಡಿದರೆ ಮಾತ್ರ ಅವರಿಗೆ ಒಳ್ಳೆಯದನ್ನು ಬಯಸಲು ಸಾಧ್ಯವಾಗುತ್ತದೆ ಎಂಬುದನ್ನು ಕೂಡ ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ರಾಜ್ಯದಲ್ಲಿ ಈಗಾಗಲೇ ೧೧ ಲಕ್ಷ ಮನೆಗಳನ್ನು ಶೋಷಿತ ವರ್ಗದವರಿಗೆ ನಿರ್ಮಿಸುವ ಗುರಿ ಹೊಂದಿದೆ ಎನ್ನುವುದನ್ನು ಕೇಳಿದ್ದೇನೆ. ಕಳೆದ ೧೯೯೯ ರಿಂದ ೨೦೦೪ನೇ ಸಾಲಿನ ತನಕ ೯ ಲಕ್ಷದ ೯೧ ಸಾವಿರದ ೨೦೦೪ ಮನೆಗಳು ಪೂರ್ಣವಾಗಿದೆಯೆಂದು ಹೇಳುತ್ತೀರಿ. ಕೊಡತಕ್ಕದ್ದು ೨೦ ಸಾವಿರ. ಒಬ್ಬ ನಿರ್ಗತಿಕ ಬಡವ ಅವನಿಗೆ ಒಂದು ಹೊತ್ತು ಗಂಜಿಗೆ ಇಲ್ಲದಂಥ ಮನುಷ್ಯ ಫೌಂಡೇಷನ್ ಹಾಕಬೇಕು ಎಂದರೆ ಹೇಗೆ ಸಾಧ್ಯ? ಅವನು ಅಡಿಪಾಯವನ್ನು ಹಾಕಲು ಹೇಗೆ ಸಾಧ್ಯ? ಒಂದು ಅಡಿಪಾಯವನ್ನು ಹಾಕಬೇಕಾದರೆ ಕನಿಷ್ಠ ನಾಲ್ಕರಿಂದ ಐದು ಸಾವಿರ ರೂಪಾಯಿಗಳವರೆಗೆ ಹತ್ತು ಸಾವಿರದವರೆಗೆ ಅವನ ಶಕ್ತಿಗೆ ಅನುಗುಣವಾಗಿ ಆಗುತ್ತದೆ. ಎರಡು ಚದರ ಮಿನಿಮಮ್ ಇರಬೇಕೆಂದು ನಿಯಮ ಹೇಳುತ್ತದೆ. 10x20 ರಲ್ಲಿ ಒಂದು ಮನೆಯನ್ನು ಕಟ್ಟಬೇಕೆಂದರೆ ಅವನಿಗೆ ಅಷ್ಟು ಹಣವನ್ನು ಬರಿಸುವಂಥ ಶಕ್ತಿ ಇದ್ದರೆ ಅವನೇಕೆ, ಅವನೇ ಸುಮಾರಾಗಿರುವ ಒಂದು ಮನೆಯನ್ನು ಕಟ್ಟಿಕೊಳ್ಳುತ್ತಾನೆ. ಅವನು ಕೂಲಿ ಮಾಡಿ ಬರತಕ್ಕಂಥ ದಿನನಿತ್ಯದ ಜೀವನದಲ್ಲಿ ಗಂಜಿ ಕುಡಿಯತಕ್ಕ ಸಂದರ್ಭದಲ್ಲಿ ನಾವು ಅವನಿಗೆ ಒಳ್ಳೆಯ ರೀತಿಯಲ್ಲಿ ಮನೆಯನ್ನು ಕಟ್ಟಿಕೊಡಲು ಆಗುವುದಿಲ್ಲವೆಂದರೆ ನಾಚಿಕೆಯಾಗುತ್ತದೆ. ಇವತ್ತು ಬಡವರು ಬಡವರಾಗಿಯೇ ಇದ್ದಾರೆ. ಗುಡಿಸಲಿನಲ್ಲಿದ್ದವರು ಗುಡಿಸಲಿನಲ್ಲಿಯೇ ಇದ್ದಾರೆ, ಯಾರು ಗುಡಿಸಲಿನಿಂದ ಹೊರಗೆ ಇದ್ದಾರೆ ಅವರಿಗೆ ಮನೆಯಾಗುತ್ತಿದೆ. ಆದರೆ, ಗುಡಿಸಲಿನಲ್ಲಿ ವಾಸ ಮಾಡತಕ್ಕ ಜನರಿಗೆ ಮನೆ ಮಾಡಿಕೊಳ್ಳಲು ಇವತ್ತು ಸಾಧ್ಯವಾಗುತ್ತಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ದಯಮಾಡಿ ಗಮನಿಸಬೇಕು. ಮಾನ್ಯ ಸದಸ್ಯರು ಮಾತನಾಡುತ್ತಿರುವುದು ಏನೆಂದರೆ, ನಮ್ಮಲ್ಲಿ ಇಂದಿರಾಆವಾಜ್ ಮನೆ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ರಿಜಿಸ್ಟ್ರೇಷನ್ ಆಗಬೇಕೆಂದು ಹೇಳುತ್ತಾರೆ. ಅದಕ್ಕೆ ೫೦೦ ರೂಪಾಯಿ ಖರ್ಚಾಗುತ್ತದೆ. ಇಂದಿರಾ ಆವಾಜ್ ಮನೆ ಪುಕ್ಕಟೆಯಾಗಿ ಕೊಡಬೇಕೆಂದು ಕೇಂದ್ರ ಸರ್ಕಾರ ನಮಗೆ ಕೊಡುತ್ತಿದೆ. ಅದನ್ನು ನಾವು ಕೊಡುತ್ತಿದ್ದೇವೆ. ಅದರ ರಿಜಿಸ್ಟ್ರೇಷನ್‌ಗೆ ೫೦೦ ರೂಪಾಯಿ ಖರ್ಚಾಗಿದೆ. ಸ್ಟಾಪ್ ಪೇಪರ್ ಮತ್ತು ಬೇರೆ ಬೇರೆ ಫೀಗಾಗಿ. ಸ್ಟ್ಯಾಂಪ್ ಡ್ಯೂಟಿ ೧೭೫ ರೂಪಾಯಿ, ರಿಜಿಸ್ಟ್ರೇಷನ್ ಫೀ ೧೨೫ ರೂ. ಮತ್ತೊಂದು ಫೀ ೨೧೦ ರೂ. ಇ.ಸಿ. ಫೀ ೩೫ ರೂಪಾಯಿಗಳು. ೪೯೯

ರೂಪಾಯಿ ಇಂದಿರಾ ಆವಾಜ್ ಮನೆಯ ರಿಜಿಸ್ಟ್ರೇಷನ್‌ಗಾಗಿ ಖರ್ಚಾಗುತ್ತದೆ. ಆ ಬಡವರಿಗೆ ಕೊಡುವುದೇ ೨೫ ಸಾವಿರ, ಈ ೫೦೦ ರೂಪಾಯಿ ಇದರ ಖರ್ಚು ಮತ್ತು ಬೇರೆಬೇರೆ ಖರ್ಚುಗಳು ಹತ್ತಾರು ಸಲ ಅಲೆಯುವುದಕ್ಕೆ. ಆದ್ದರಿಂದ ದಯವಿಟ್ಟು ಇದನ್ನು ಏನಾದರೂ ತಪ್ಪಿಸಲು ಆಗುತ್ತದೆಯೆ? ನಾವು ಆಶ್ರಯ ಮನೆಗೆ ರಿಜಿಸ್ಟ್ರೇಷನ್ ಬೇಡವೆಂದು ರಾಜ್ಯ ಸರ್ಕಾರ ವಿನಾಯಿತಿ ಕೊಟ್ಟಿದೆ. ಅದೇ ರೀತಿ ಇಂದಿರಾ ಆವಾಜ್ ಮನೆಗೆ ವಿನಾಯ್ತಿತಿ ಕೊಟ್ಟರೆ ಮಾನ್ಯ ಸದಸ್ಯರು ಹೇಳುವಂತೆ ಬಡವರಿಗೆ ಕಟ್ಟುವಂಥ ಮನೆಗಳಿಗೆ ಈ ೫೦೦ ರೂಪಾಯಿ ಸಹ ಬಹಳ ದೊಡ್ಡ ಅಮೌಂಟ್ ಆಗುತ್ತದೆ. ಆದ್ದರಿಂದ ಇದಕ್ಕೆ ಏನಾದರೂ ವಿನಾಯಿತಿ ಕೊಡಲು ಸಾಧ್ಯವೇ ಎಂಬ ಬಗ್ಗೆ ಪರಿಶೀಲನೆ ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಮಾನ್ಯ ಶಾಸಕರು ನನ್ನ ಗಮನವನ್ನು ಈ ಹಿಂದೆ ಕೂಡ ಸೆಳೆದಿದ್ದಾರೆ. ಈ ವಿಚಾರವನ್ನು ಅವರು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಹೇಳಿರುವಂತೆ ನಾವು ಆಶ್ರಯ ಮನೆಗಳಿಗೆ ಯಾವುದೇ ನೊಂದಾವಣಿಯ ಶುಲ್ಕವನ್ನು ತೆಗೆದುಕೊಳ್ಳುವುದಿಲ್ಲ. ಆಶ್ರಯ ಯೋಜನೆ ನಮ್ಮ ರಾಜ್ಯಸರ್ಕಾರದ ಯೋಜನೆಯಾಗಿದೆ. ಇಂದಿರಾ ಆವಾಜ್ ಕೇಂದ್ರ ಸರ್ಕಾರದಿಂದ ಬರತಕ್ಕ ಯೋಜನೆಯಾಗಿದೆ. ಆದರೆ ಅವರು ಮಾತನಾಡತಕ್ಕ ಮತ್ತು ಆಶಯವನ್ನೇನು ವ್ಯಕ್ತ ಮಾಡಿದ್ದಾರೆ. ಇದರ ಬಗ್ಗೆ ಈಗಾಗಲೇ ನಾನು ಬರೆದು ಕಳಿಸಿದ್ದೇನೆ. ನಮ್ಮಲ್ಲೇನಾಗಿದೆ ಎಂದರೆ ೧೬೬೦ ಕೋಟಿ ರೂಪಾಯಿಗಳ ಗುರಿಯನ್ನು ನೊಂದಾಣಿಕೆಯ ಶುಲ್ಕ ವಿಚಾರಗಳಿಗೆ ಇಟ್ಟುಕೊಂಡಿದ್ದರು. ಈಗಾಗಲೇ ೨೧೦೦ ಕೋಟಿ ರೂಪಾಯಿಗಳನ್ನು ನಮ್ಮ ಗುರಿಯನ್ನಾಗಿ ಇಟ್ಟಿದ್ದಾರೆ. ಆದರೆ ಅನೇಕ ಕೈಗಾರಿಕೆಗಳಿಗೆ ನಾವು ಸಹಾಯ ಮಾಡುತ್ತೇವೆ. ಶೇಕಡ ೫೦ರಷ್ಟು ಅವರಿಗೆ ರಿಯಾಯಿತಿ ತೋರಿಸುತ್ತಿದ್ದೇವೆ. ಆದರೆ ಇಂಥ ವಿಚಾರದಲ್ಲಿ ರಿಯಾಯಿತಿ ತೋರಿಸಲು ತೊಂದರೆಯೇನಿದೆ ಎಂಬ ಬಗ್ಗೆ ಈಗಾಗಲೇ ನಾನು ಇಲಾಖೆಗೆ ಬರೆದಿದ್ದೇನೆ. ಪ್ರಾಯಶಃ ಈ ವಿಚಾರದಲ್ಲಿ ನಾನು ಆರ್ಥಿಕ ಇಲಾಖೆಯ ಸಹಮತವನ್ನು ತೆಗೆದುಕೊಂಡು ಇಷ್ಟರಲ್ಲೇ ಇದರ ಬಗ್ಗೆ ಪ್ರಕಟಣೆಯನ್ನು ಮಾಡುತ್ತೇನೆ.

ಶ್ರೀ ಬಾಲರಾಜ್ : ಮನೆಗಳನ್ನು ಕೊಡತಕ್ಕ ಸಂದರ್ಭಗಳಲ್ಲಿ ಮುಂದಿನ ದಿವಸಗಳಲ್ಲಿ ಇಂಥ ಒಂದು ಯೋಜನೆಗೆ ಸರ್ಕಾರ ಒಂದು ವಿಶೇಷ ಅವಕಾಶವನ್ನು ಕಲ್ಪಿಸಿಕೊಡಬೇಕು. ಆ ಬಡವರಿಗೆ ಒಳ್ಳೆಯದು ಮಾಡಬೇಕೆಂದು ಆಗ್ರಹಿಸುತ್ತೇನೆ. ಕೆರೆಗಳ ಸಮಗ್ರ ಅಭಿವೃದ್ಧಿಯ ಬಗ್ಗೆ ಈಗಾಗಲೇ ಅನೇಕ ಚರ್ಚೆಗಳನ್ನು ನಾನು ಕೇಳಿದ್ದೇನೆ. ಮಾನ್ಯ ರಮೇಶ್‌ಕುಮಾರ್‌ರವರು ಕಳೆದ ಅಧಿವೇಶನದಲ್ಲಿ ಕೂಡ ಆ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಇವತ್ತು ಬಹುತೇಕ ಕೆರೆಗಳು ಒತ್ತುವರಿಯಾಗಿದೆ. ನಮ್ಮ ಭಾಗದಲ್ಲಿ

ಸುಮಾರು ೪೦-೫೦ ಪರ್‌ಸೆಂಟ್ ಭಾಗವನ್ನು ಒತ್ತುವರಿ ಮಾಡಿಬಿಟ್ಟಿದ್ದರೆ. ಅದಕ್ಕೆ ಒಂದು ಕಾನೂನನ್ನು ಸರಿಯಾದ ರೀತಿಯಲ್ಲಿ ಕ್ರಮವಹಿಸಿ ಮಾಡದಿದ್ದರೆ ಮುಂದಿನ ದಿವಸಗಳಲ್ಲಿ ನಾವು ಕೆರೆಗಳನ್ನು ಉಳಿಸಿಕೊಳ್ಳುವುದಿರಲಿ ನಾವು ಕೆರೆ ಎಲ್ಲಿದೆ ಎಂದು ಕೇಳತಕ್ಕ ಪರಿಸ್ಥಿತಿ ಬರುತ್ತದೆ. ನಮ್ಮ ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಊರಿಗೆ ಒಂದು ಕೆರೆಯೆಂದು ಮಾಡಿದ್ದರು. ಒಂದು ಸಲ ಕೆರೆಗೆ ನೀರು ತುಂಬಿದರೆ ಹತ್ತು ಅಡಿ ನೀರು ಕೈಯಲ್ಲಿ ಹೊಡೆದ ತಕ್ಷಣ ಕೆಳಕ್ಕೆ ಬರುತ್ತಿತ್ತು, ಅಂಥ ದಿವಸಗಳನ್ನು ಹದಿನೈದು ಇಪ್ಪತ್ತು ವರ್ಷಗಳ ಹಿಂದೆ ನಾವು ಕಂಡಿದ್ದೇವೆ. ಜಾಸ್ತಿ ದಿವಸಗಳಿಂದ ಅಲ್ಲ, ಆದರೆ, ಈ ಕಾಲದಲ್ಲಿ ನಾವು ಕನಿಷ್ಠ ೧೫೦ ಅಡಿ ಕೆಳಕ್ಕೆ ಹೋಗಬೇಕು. ಅಂತರ್ಜಲ ಕುಸಿದು ಹೋಗಿದೆ. ನಾವು ನದಿಯ ಪಾತ್ರ ಸುವರ್ಣಾವತಿ ಅಥವಾ ಇತ್ಯಾದಿ ನದಿಗಳು ನಮ್ಮ ಭಾಗದಲ್ಲಿ ಹರಿಯತಕ್ಕ ನದಿ ಎಲ್ಲವನ್ನೂ ಒತ್ತುವರಿ ಮಾಡಿ ನದಿಯ ಪಾತ್ರವನ್ನು ಕಡಿಮೆ ಮಾಡಿಬಿಟ್ಟಿದ್ದಾರೆ. ಬಹುಶಃ ನದಿ ಇನ್ನು ಕೆಲವೇ ದಿವಸಗಳಲ್ಲಿ ಮುಚ್ಚಿಹೋಗಿ ಎಲ್ಲೋ ಒಂದು ಕಡೆ ಪ್ರವಾಹ ಬಂದರೆ ಮಳೆಗಾಲದಲ್ಲೇ ವ್ಯತ್ಯಾಸವಾದರೂ ಆಗಬಹುದು, ಅಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ನಮ್ಮ ನದಿಗಳು ಕೆರೆಗಳನ್ನು ಉಳಿಸತಕ್ಕ ಜವಾಬ್ದಾರಿ ಈ ಸರ್ಕಾರದ ಮೇಲಿದೆ. ಅದಕ್ಕೆ ತಾವು ಕಾನೂನು ರೀತಿಯ ಉತ್ತಮವಾದ ಕೆಲಸವನ್ನು ಮಾಡಬೇಕು ಮತ್ತು ಆದಷ್ಟು ಬೇಗನೆ ಅದನ್ನು ತೆರವುಗೊಳಿಸಿ ಕೆಲಸವನ್ನು ನಿರ್ವಹಿಸಬೇಕೆಂದು ನನ್ನ ಅಭಿಪ್ರಾಯವನ್ನು ತಮಗೆ ಸೂಚಿಸುತ್ತೇನೆ. ಹಾಗೆಯೇ, ಅರಣ್ಯ ಪ್ರದೇಶದಿಂದ ನೀರು ಹರಿಯುತ್ತದೆ. ಅದೆಲ್ಲಾ ಕಾವೇರಿ ನದಿಗೋ ಎಲ್ಲಿಗೋ ಸೇರಿಕೊಂಡು ಎಲ್ಲಿಗೋ ಹೊರಟುಹೋಗುತ್ತದೆ. ಆ ನದಿಯಲ್ಲಿ ಬರತಕ್ಕ ನೀರನ್ನು ತಡೆಯುವುದಕ್ಕೆ ಮೈನರ್ ಇರಿಗೇಷನ್ ಇಲಾಖೆಯಿಂದ ಅದಕ್ಕೆ ಅವಕಾಶ ಕೊಡಿ ಎಂದರೆ ಅರಣ್ಯ ಇಲಾಖೆಯವರು ಅವಕಾಶ ಕೊಡುವುದಿಲ್ಲ, ಆ ನೀರನ್ನು ಒಂದು ಕೆರೆಗೆ ಅಥವಾ ಡ್ಯಾಂಗೆ ಡೈವರ್ಟ್ ಮಾಡುವುದಕ್ಕೆ ಸರ್ಕಾರ ಅದನ್ನು ಸಡಿಲಿಸಬೇಕು. ಆ ನೀರನ್ನು ಬೇರೆಲ್ಲೋ ವೇಸ್ಟ್ ಆಗಿ ಹೋಗುವುದರ ಬದಲು ಯಾವುದೋ ನಮ್ಮ ಡ್ಯಾಂಗೆ ಸೇರಿಸಿದರೆ ಬಹುಶಃ ಅದರಿಂದ ಸಾವಿರಾರು ಎಕರೆ ಜಮೀನಿಗೆ ನೀರಾವರಿಯಾದರೆ ಬಡವ ಬದುಕುತ್ತಾನೆ. ರೈತರು ಬದುಕುತ್ತಾರೆ, ಅದಕ್ಕೆ ಅವಕಾಶ ಮಾಡಿಕೊಡಬೇಕು. ಆ ನಿಟ್ಟಿನಲ್ಲಿ ತಾವು ಕೆಲಸವನ್ನು ಮಾಡಿಕೊಡಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಯುವಕರಿಗೆ ಯಾವುದೇ ಒಂದು ಕೈಗಾರಿಕೆಯನ್ನು ಪ್ರಾರಂಭ ಮಾಡಲು ಆಯವ್ಯಯದಲ್ಲಿ ಎಲ್ಲೂ ನಾನು ಕಾಣಲಿಲ್ಲ, ನೀವೆಲ್ಲಾ ವಿಚಾರಗಳನ್ನು ಸಾಮಾಜಿಕ ನ್ಯಾಯವನ್ನು ಕೊಡುವ ನಿಟ್ಟಿನಲ್ಲಿ ಎಲ್ಲಾ ವರ್ಗದ ಜನರಿಗೆ ಕೊಟ್ಟರೂ ಯುವಕರಿಗೆ ಎಂದು ವಿಶೇಷವಾಗಿ ಅವಕಾಶವನ್ನು ಕಲ್ಪಿಸಿಕೊಡಬೇಕು. ಗ್ರಾಮೀಣ ಪ್ರದೇಶದಲ್ಲಿ ತಂತ್ರಜ್ಞಾನ ಬಳಸಿ ಯಾವುದಾದರೂ ಒಂದು ಕಾರ್ಖಾನೆಯನ್ನು ಈಗ ಇರುವ

ಕಾರ್ಖಾನೆಗಳನ್ನೆ ಉಳಿಸಿಲ್ಲ, ಆದರೆ, ಮಾಡತಕ್ಕ ಸಂದರ್ಭಗಳಲ್ಲಿ ಒಳ್ಳೆಯ ಉದ್ಯೋಗ ಕಲ್ಪಿಸುವ ಕೆಲಸವನ್ನು ಜವಾಬ್ದಾರಿಯುತವಾಗಿ ಮಾಡಬೇಕು ಎಂದು ಒತ್ತಾಯಪಡಿಸುತ್ತೇನೆ. ರಸ್ತೆಗಳ ಅಭಿವೃದ್ಧಿಯ ಬಗ್ಗೆ ಒಂದು ಸಣ್ಣ ವಿಷಯವನ್ನು ತಿಳಿಸುತ್ತೇನೆ. ನಮ್ಮಲ್ಲಿರತಕ್ಕ ಒಂದು ಗ್ರಾಮ, ಕಳೆದ ಅಧಿವೇಶನದಲ್ಲೂ ಮಾತನಾಡಿದ್ದೆ. ಯಡಕೂರಿ ಎಂಬ ಗ್ರಾಮ ಒಂದು ರೀತಿ ದ್ವೀಪದ ರೀತಿ ಇದೆ. ಎನ್.ಹೆಚ್. ರಸ್ತೆಗೂ ಅದಕ್ಕೂ ಇರುವ ದೂರ ಕೇವಲ ಒಂದು ಕಿಲೋ ಮೀಟರ್ ಅದು ಜಿಲ್ಲಾಪಂಚಾಯಿತಿ ರಸ್ತೆಗೆ ಸೇರಿದೆ, ಅಲ್ಲಿ ಜಿಲ್ಲಾಪಂಚಾಯಿತಿಯಿಂದ ಒಂದು ಬ್ರಿಡ್ಜನ್ನು ಮಾಡಲು ಆಗಿಲ್ಲ. ಇದುವರೆಗೆ ಅಲ್ಲಿ ಜನರು ತೆಪ್ಪದ ಮೇಲೆ ಹೋಗುತ್ತಾರೆ. ಎಷ್ಟು ಭಯಾನಕವಾಗಿರುತ್ತದೆಂದರೆ, ಆ ಪ್ರದೇಶಕ್ಕೆ ಪ್ರಯಾಣ ಮಾಡಬೇಕಾದರೆ, ಆ ತೆಪ್ಪದ ಮೇಲೆ ದೋಣಿಯ ಮೇಲೆ ಹೋಗಬೇಕಾದರೆ ಜೀವದ ಹಂಗನ್ನು ತೊರೆದು ಹೋಗಬೇಕಾಗುತ್ತದೆ, ವ್ಯತ್ಯಾಸವಾದರೆ ಅಲ್ಲಿ ಹೋಗತಕ್ಕವರೂ ಯಾರೂ ಬದುಕುವುದಿಲ್ಲ. ಒಬ್ಬರಿಗೆ ಹೆರಿಗೆ ಸಂಕಟ ಬಂತು ಎಂದರೆ ಅವಳನ್ನು ಎತ್ತಿಕೊಂಡು ಹೋಗಲು ಅಲ್ಲಿ ಅವಕಾಶ ಇಲ್ಲ. ಇಷ್ಟೆಲ್ಲವನ್ನು ತಾವು ಗಮನಹರಿಸಿ ಅದನ್ನು ಕೆ.ಆರ್.ಡಿ.ಸಿ.ಗೆ ಆದರೂ ಸೇರಿಸಿಕೊಟ್ಟು ಆದಷ್ಟು ಬೇಗ ಅಲ್ಲಿ ಬ್ರಿಡ್ಜನ್ನು ಮಾಡಿಕೊಡತಕ್ಕ ವ್ಯವಸ್ಥೆ ಮಾಡಬೇಕು. ಏಕೆಂದರೆ ಪಿ.ಡಬ್ಲ್ಯೂ.ಡಿ. ಮಿನಿಸ್ಟರ್‌ಗೆ ಕೊಟ್ಟರೆ ಅವರು ತಮ್ಮ ಇಲಾಖೆಗೆ ಕೊಟ್ಟು ಇದನ್ನು ನಾವು ಮಾಡಲು ಬರುವುದಿಲ್ಲವೆಂದು ಹೇಳುತ್ತಾರೆ. ದಯಮಾಡಿ ಆ ರೀತಿ ಯಾವ್ಯಾವುದು ಎನ್.ಹೆಚ್. ರಸ್ತೆಗೆ, ನಮ್ಮಲ್ಲಿರತಕ್ಕ ಕೆಲವಷ್ಟನ್ನು ನಾನು ಈಗಾಗಲೇ ಬೇಡಿಕೆಯನ್ನು ಸಲ್ಲಿಸಿದ್ದೇನೆ. ಆ ಗ್ರಾಮಗಳಿಗೆ ಎನ್.ಹೆಚ್.ಗೆ ಸೇರತಕ್ಕ ಒಂದೂವರೆ ಎರಡು ಕಿಲೋಮೀಟರ್ ದೂರದಲ್ಲಿರುವ ಹಳ್ಳಿಗಳಿಗೆ ನೀವು ಬ್ರಿಡ್ಜನ್ನು ಮಾಡಿಕೊಟ್ಟರೆ ಖಂಡಿತವಾಗಿ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಸಮಸ್ಯೆ ಪರಿಹಾರವಾಗುತ್ತದೆ. ನಮ್ಮ ಗಡಿಯಲ್ಲಿ ಈಗಾಗಲೇ ವೀರಪ್ಪನ್‌ನ ಅಂತ್ಯವಾಗಿದೆ. ಅನಂತರ ಅಲ್ಲಿರತಕ್ಕ ಸೋಲಿಗ ಜನಾಂಗ ಮುಕ್ತವಾದ ವಾತಾವರಣಕ್ಕೆ ಬಂದಿದ್ದಾರೆ. ಅಲ್ಲಿ ಹಿಂದಿನಿಂದ ಲ್ಯಾಂಪ್ ಸೊಸೈಟಿಗಳು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿದ್ದವು. ಅವರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಅಲ್ಲಿ ಮಿನಿಸಚಿವ ಸಂಪುಟವಾಗಿದೆ. ಇಷ್ಟೆಲ್ಲಾ ಆದರೂ ಅವರ ಸಮಸ್ಯೆಯ ಇನ್ನೂ ಬಗೆಹರಿದಿಲ್ಲ, ಸರ್ಕಾರ ಇದುವರೆಗೆ ಏನು ಮಾಡಿದೆ? ಅದನ್ನು ಪರಿಶೀಲನೆ ಮಾಡಿದೆಯೆ? ಆ ವಿಷಯವನ್ನು ಎಲ್ಲೂ ಇದುವರೆಗೆ ಪ್ರಸ್ತಾಪ ಮಾಡಿಲ್ಲ, ಆ ಮಿನಿಸಚಿವಸಂಪುಟದಲ್ಲಿ ತೆಗೆದುಕೊಂಡ ತೀರ್ಮಾನ ಏನಾಗಿದೆ? ಅದು ಇನ್ನೂ ಪ್ರಶ್ನೆಯಾಗಿಯೇ ಉಳಿದಿದೆ. ಅಲ್ಲಿರತಕ್ಕ ಸೋಲಿಗ ಜನಾಂಗದ ಯುವಕ ಬಡವರಿದ್ದಾರೆ. ಅವರೆಲ್ಲರೂ ಕೂಡ ಇವತ್ತು ಕಾಡಿನ

ಹಂಚಿನಲ್ಲಿರತಕ್ಕ ಹಣ್ಣುಹಂಪಲುಗಳನ್ನು, ನೈಸರ್ಗಿಕವಾಗಿ ಸಿಗತಕ್ಕ ಬೇರುಗಳನ್ನು ತಂದು ಲ್ಯಾಮ್ ಸೊಸೈಟಿಯ ಮೂಲಕ ಜನರಿಗೆ ಮಾರಾಟ ಮಾಡತಕ್ಕ ವ್ಯವಸ್ಥೆ ಇದೆ.

ಇವತ್ತು ಸರ್ಕಾರ ಅದನ್ನು ನಿಬಂಧಿಸಿ ಮಾಡಕೂಡದು ಎಂದು ಹೇಳಿದೆ. ನನ್ನ ಭಾಗದಲ್ಲಿರುವ ಸುಮಾರು ಎರಡೂವರೆ ಮೂರೂವರೆ ಸಾವಿರ ಯುವಕರು ನಿರುದ್ಯೋಗಿಗಳಾಗಿದ್ದಾರೆ. ಇವರು ಮುಂದಿನ ದಿವಸದಲ್ಲಿ ಏನು ಮಾಡುತ್ತಾರೆ? ಯಾವನೋ ಒಬ್ಬ ಕಾಡಿಗೆ ಕಳ್ಳ ಬಂದರೆ ಅವನಿಗೆ ಸಪೋರ್ಟ್ ಮಾಡಿಕೊಂಡು, ಅವನಿಗೆ ಅನುಕೂಲ ಮಾಡಿಕೊಂಡು ಪುನಃ ಅವರು ಕಳ್ಳರು ಆಗುತ್ತಾರೆ, ನಾವೇ ಅವರನ್ನು ಕಳ್ಳರನ್ನಾಗಿಸುವ ಕೆಲಸ ಮಾಡಿದರೆ ಬಹುಶಃ ಆ ಭಾಗದ ಜನರಿಗೆ ನಾವು ಯಾವ ನ್ಯಾಯವನ್ನು ಕೊಟ್ಟ ಹಾಗೆ ಆಗುತ್ತದೆ? ಅವರು ಕೂಡ ಮುಕ್ತವಾಗಿ ಪ್ರೀತಿ ವಿಶ್ವಾಸದಿಂದ ಜನಗಳ ಜೊತೆ ಬದುಕುವಂಥ ಬದುಕನ್ನು ಕಲಿಸಬೇಕಾದ ಜವಾಬ್ದಾರಿಯನ್ನು ಸರ್ಕಾರ ಮಾಡಬೇಕು, ಅದಕ್ಕೊಂದು ಪ್ಯಾಕೇಜನ್ನು ಮಾಡಬೇಕು, ಏಕೆಂದರೆ, ನಮ್ಮ ಚಾಮರಾಜನಗರ ಜಿಲ್ಲೆಗೆ ಇದುವರೆಗೂ ವೀರಪ್ಪನ್ ವೀರಪ್ಪನ್ ಎನ್ನುವ ಹೆಸರೇಳಿ ಇಷ್ಟೊಂದು ವರ್ಷ ನಾವು ಕಾಲ ಕಳೆದುಬಿಟ್ಟೆವು. ಈಗಲಾದರೂ ನಮ್ಮ ಕ್ಷೇತ್ರದ, ಗಡಿನಾಡಿನಲ್ಲಿರುವ ನಮ್ಮ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ವಿಶೇಷ ಅನುದಾನವನ್ನು ಕೊಟ್ಟು, ಆ ಮೂಲಕ ಸರ್ವತೋಮುಖ ಬೆಳವಣಿಗೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ಒತ್ತಾಯಿಸುತ್ತೇನೆ. ಕೊನೆಯದಾಗಿ ಹೇಳುವುದಾದರೆ, ಎಸ್‌ಟಿಎಫ್‌ನವರು ಬಹಳಷ್ಟು ಕಷ್ಟಪಟ್ಟಿದ್ದಾರೆ. ಕಷ್ಟಪಟ್ಟಿರುವ ಜನಕ್ಕೆ ನಾವು ಇನ್ನು ಏನೂ ಮಾಡಿಲ್ಲ, ಕಳೆದ ಸಾಲಿನಲ್ಲಿ ಒಂದು ವಾರದಲ್ಲಿ ಮಾಡುತ್ತೇವೆಂದು ಹೇಳಿದರು. ಆ ಎಸ್‌ಟಿಎಫ್ ಪೊಲೀಸರಿಗೆ ನಾವು ಕೊಟ್ಟಿರುವ ವಾಗ್ದಾನವನ್ನು ಉಳಿಸಿಕೊಂಡಿದ್ದೀವಾ? ನಾವು ಅವರಿಗೆ ಏನು ಭಾಷೆ ಕೊಟ್ಟು ಯಾವ್ಯಾವ ಸವಲತ್ತು ಕೊಡುತ್ತೇವೆ, ಅವರಿಗೆ ಸೈಟ್ ಕೊಡುತ್ತೇವೆ, ಅವರಿಗೆ ಬೇಕಾಗಿರುವ ಜಾಗಕ್ಕೆ ಟ್ರಾನ್ಸ್‌ಫರ್ ಕೊಡುತ್ತೇವೆ, ಅವರಿಗೆ ಪ್ರಮೋಷನ್ ಕೊಡುತ್ತೇವೆ, ಇಷ್ಟೆಲ್ಲಾ ಕೊಡುತ್ತೇವೆಂದು ತಾವು ಹೇಳಿದಿರಿ. ತಮಿಳುನಾಡಿನಲ್ಲಿ ಇನ್ಸಿಡೆನ್ಸ್ ಆದ ಕೆಲವೇ ದಿವಸಗಳಲ್ಲಿ ಎಲ್ಲಾ ಸೌಲಭ್ಯಗಳನ್ನು ಕೊಟ್ಟರು, ಆದರೆ ಕರ್ನಾಟಕ ಸರ್ಕಾರ ಇದೂವರೆಗೂ ಆ ಕಾರ್ಯ ಮಾಡುವ ನಿಟ್ಟಿನಲ್ಲಿ ಇಷ್ಟು ತಿಂಗಳಾದರೂ ಏನು ಕ್ರಮ ತೆಗೆದುಕೊಂಡಿದೆ? ನಾವು ಯಾವಾಗ ಮಾತನ್ನು ಮಾತನಾಡುತ್ತೇವೆ ಆ ಮಾತನ್ನು ಉಳಿಸಿಕೊಳ್ಳುವ ಜವಾಬ್ದಾರಿ ಸರ್ಕಾರದ ಮೇಲೆ ಇದೆ, ಆ ಕೆಲಸವನ್ನು ಸಮರ್ಪಕವಾಗಿ ಮಾಡುವುದರ ಜೊತೆಗೆ, ಅವರಿಗೆ: ಏನೇನು ಸವಲತ್ತುಗಳನ್ನು ಕೊಡಬೇಕಾಗಿದೆ ಅದನ್ನು ಕೊಟ್ಟು ಅವರಿಗೆ ಮಾನಸಿಕವಾಗಿ ಧೈರ್ಯತುಂಬಿ. ನೀವು ಈ ಕೆಲಸವನ್ನು ಮಾಡಿದರೆ ಮುಂದೆ ಯಾವುದಾದರೊಂದು ಕಾರ್ಯಕ್ಕೆ ಬೇಕಾದಂಥ ಸಂದರ್ಭದಲ್ಲಿ ನಿಯೋಜನೆ ಮಾಡಿದರೆ ಅವರು ಕಷ್ಟಪಟ್ಟು ತಮ್ಮ ಪ್ರಾಣದ ಹಂಗು ತೊರೆದು ಹೋರಾಟ ಮಾಡುತ್ತಾರೆ. ಇವತ್ತು

ಅವರಿಗೆ ಅಂಥ ಅವಕಾಶವನ್ನು ಕೊಡದೇ ಹೋದರೆ ನಾವು ಅವರಿಗೆ ಅಂಥ ವ್ಯವಸ್ಥೆ ಮಾಡದೇ ಹೋದರೆ, ನಾವು ನಮ್ಮ ಮಾತನ್ನು ಉಳಿಸಿಕೊಳ್ಳದೇ ಹೋದರೆ, ಬಹುಶಃ ಮುಂದಿನ ದಿವಸದಲ್ಲಿ ನಾವು ಯಾರಿಂದಲೂ ನಿರೀಕ್ಷೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಅವರಿಗೆ ಮಾನಸಿಕ ಧೈರ್ಯವನ್ನು ನಾವು ಕೆಲಸ ಮಾಡುವುದರ ಮೂಲಕ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಿ, ನಾನು ಈ ಒಂದು ಸಂದರ್ಭದಲ್ಲಿ ಒಂದೇ ಒಂದು ಸಣ್ಣ ವಿಚಾರವನ್ನು ಹೇಳಿ ನನ್ನ ಮಾತು ಮುಗಿಸುತ್ತೇನೆ. ಒಂದು ಶಾಲೆಯಲ್ಲಿ ಮಕ್ಕಳಿಗೆ ಶಿಕ್ಷಕರೊಬ್ಬರು ಪಾಠ ಹೇಳಿಕೊಡುತ್ತಿರುತ್ತಾರೆ. ಮಕ್ಕಳಿಗೆ ಆ ಗುರುಗಳು, ಯಾರಾದರೂ ಇನ್ಸ್‌ಪೆಕ್ಟರ್ ಬಂದು ನಿಮ್ಮನ್ನು ಕೇಳಿದರೆ ನೀವು ಏನನ್ನಾದರೂ ಹೇಳಿ ಅದನ್ನು ನಾನು ಮ್ಯಾನೇಜ್ ಮಾಡುತ್ತೇನೆಂದು ಹೇಳುತ್ತಾರೆ. ನಾನು ಅವರಿಗೆ ಅರ್ಥ ಮಾಡಿಸಿ ಸರಿಪಡಿಸುತ್ತೇನೆ, ಅವರಿಗೆ ಸಮಜಾಯಿಷಿ ಕೊಡುತ್ತೇನೆಂದು ಹೇಳುತ್ತಾರೆ. ಒಂದು ದಿವಸ ಆ ಶಾಲೆಗೆ ಇನ್ಸ್‌ಪೆಕ್ಟರ್‌ರೊಬ್ಬರು ಬರುತ್ತಾರೆ, ಬಂದವರೇ ಗುರುಗಳನ್ನು ಕುರಿತು ಏನ್ರೀ ಮಕ್ಕಳಿಗೆ ಪಾಠ ಕಲಿಸಿದಿರಾ? ಎಂದು ಕೇಳುತ್ತಾರೆ, ಆಗ ಗುರುಗಳು, ಹೌದು ಸ್ವಾಮಿ ಕಲಿಸಿದ್ದೇನೆ ಎಂದು ಹೇಳುತ್ತಾರೆ. ಆಗ ಇನ್ಸ್‌ಪೆಕ್ಟರ್, ಕೆಲವು ಮಕ್ಕಳನ್ನು ಏನು ಓದಿದಿಯೋ ಎಂದು ಕೇಳುತ್ತಾರೆ ಆಗ ಹುಡುಗರು ಅದು ಇದು ಎಂದು ಹೇಳುತ್ತಾರೆ, ಆಗ ಇನ್ಸ್‌ಪೆಕ್ಟರ್, ನಾನು ನಿಮಗೆ ಒಂದೇ ಒಂದು ಮಗ್ಗಿ ಕೇಳುತ್ತೇನೆ ಹೇಳಿ ಎಂದು ಹೇಳುತ್ತಾರೆ. ಆಗ ಮಕ್ಕಳು ಕೇಳಿ ಸಾರ್ ನಾವು ಹೇಳುತ್ತೇವೆಂದು ಹೇಳುತ್ತಾರೆ. ಆಗ ಇನ್ಸ್‌ಪೆಕ್ಟರ್‌ರವರು : 15x3 ಎಷ್ಟು ಅಂದರೆ, ಹುಡುಗರು ನಮಗೆ ಗೊತ್ತಿಲ್ಲ ಸಾರ್ ಎಂದು ಉತ್ತರ ಹೇಳುತ್ತಾರೆ, ಅದರಲ್ಲಿ ಒಬ್ಬ ಹುಡುಗ 15x3 = 150 ಎಂದು ಹೇಳುತ್ತಾನೆ. ಆಗ ಇನ್ಸ್‌ಪೆಕ್ಟರ್ ರೀ ಏನ್ರಿ ಇದು 15x3 ಎಂದರೆ ೧೫೦ ಎಂದು ಹೇಳುತ್ತಾನೆ, ಏನು ಕಲಿಸಿದಿರಿ ಎಂದು ಗದರಿಸುತ್ತಾರೆ, ಆಗ ಗುರುಗಳು, ಸಾರ್ ನಾನೇನು ಮಾಡಲಿ ಈ ಸ್ಕೂಲಿಗೆ ನಾನು ಹೊಸಬ ಬಂದು ಬರೀ ೧೫ ವರ್ಷ ಆಗಿರುವುದು, ಈ ಸ್ಕೂಲಿಗೆ ನಾನು ಮೊದಲಿಗೆ ಬಂದಾಗ 15x3 ಎಷ್ಟು ಅಂದರೆ ೧೫೦೦ ಎಂದು ಹುಡುಗರು ಹೇಳುತ್ತಿದ್ದರು, ನಾನು ಬಂದ ಮೇಲೆ ಸ್ವಲ್ಪ ಕಡಿಮೆ ಮಾಡಿಸಿಕೊಂಡು ಈಗ ೧೫೦ಕ್ಕೆ ತಂದಿದ್ದೇನೆಂದು ಹೇಳುತ್ತಾರೆ. ಮುಂದಿನ ಸಲ ತಾವು ಬನ್ನಿ ಇನ್ನೊಂದು ಸ್ವಲ್ಪ ಕಡಿಮೆ ಮಾಡಿಸಿರುತ್ತೇನೆಂದು ಹೇಳುತ್ತಾರೆ. ನಾನು ಏಕೆ ಈ ಮಾತು ಹೇಳಿದೆ ಎಂದರೆ, ನಾವು ಸತ್ಯವನ್ನು ಜನರ ಮುಂದೆ ಏಕೆ ಹೇಳಬೇಕು, ಇಲ್ಲಿರತಕ್ಕಂಥಹ ವಾಸ್ತವಿಕ ಕಟುಸತ್ಯಗಳನ್ನು ಬೀದಿನಲ್ಲಿ ಜನಕ್ಕೆ ನಾವು ಹೇಗೆ ಹೇಳಬೇಕು? ಬದುಕನ್ನು ನಾವು ಯಾವ ರೀತಿ ತೆಗೆದುಕೊಳ್ಳಬೇಕು, ನಾವು ಚುನಾವಣೆಗೆ ನಿಲ್ಲುವುದಕ್ಕೆ ಮುಂಚೆ ಬಹಳಷ್ಟು ಆಸೆ ಆಕಾಂಕ್ಷೆಗಳಿಂದ ಬಂದಿದ್ದೇವೆ, ನಾವು ಇಲ್ಲಿಗೆ ಬಂದ ಮೇಲೆ ನೋಡುತ್ತೇವೆ, ಇಲ್ಲಿರತಕ್ಕಂಥ

ಸಾಲ, ಪರಿಸ್ಥಿತಿ, ಆಯವ್ಯಯ, ಸಮಸ್ಯೆ ಜನರ ನಿರೀಕ್ಷೆಗಳು, ಇದರ ಮಧ್ಯೆ ನಾವು ಎಲ್ಲೋ ನುಗ್ಗಿ ಹೋಗುತ್ತೇವೆ ಎನ್ನುವ ಭಾವನೆ ನಮಗೆ ವ್ಯಕ್ತವಾಗುತ್ತದೆ, ಆದುದರಿಂದ ಆದಷ್ಟು ಒಳ್ಳೆಯ ರೀತಿಯಲ್ಲಿ ಸರ್ಕಾರ ಒಳ್ಳೆಯ ಕೆಲಸ ಮಾಡಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕು, ನಮಗೆ ಕೂಡ ಹೆಚ್ಚಿನ ಗೌರವ ಬರುವ ರೀತಿಯಲ್ಲಿ ಅಲ್ಲಿ ತಾವು ನಡೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಿ, ನನಗೆ ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಸಭಾಧ್ಯಕ್ಷರಿಗೆ ಹಾಗೂ ಎಲ್ಲರಿಗೂ ನನ್ನ ನಮಸ್ಕಾರ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್ : ನೆಹರೂ ಓಲೇಕರ್.... ಅವರು ಇಲ್ಲ.... ಪ್ರಭಾಕರ ಬಂಗೇರ ಅವರು ತಾವು ಮಾತನಾಡಿ.

ಶ್ರೀ ಪ್ರಭಾಕರ್ ಕೆ. ಬಂಗೇರ (ಬೆಳ್ತಂಗಡಿ) : ಮಾನ್ಯ ಛೇರ್ಮನ್ ಅವರೆ, ೨೦೦೪-೨೦೦೫ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದನೆಗಳನ್ನು ಅರ್ಪಿಸುತ್ತಾ, ಈ ವರ್ಷ ಆಯವ್ಯಯವನ್ನು ಮಾನ್ಯ ಸಿದ್ಧರಾಮಯ್ಯನವರು ಮಂಡಿಸಿದ್ದಾರೆ. ತಮಗೆ ಗೊತ್ತಿದ್ದ ಹಾಗೆ ರಾಜ್ಯದಲ್ಲಿ ಹೆಚ್ಚಾಗಿ ಕೃಷಿಯನ್ನು ಅವಲಂಬನೆ ಮಾಡಿಕೊಂಡು ಬರುತ್ತಿದ್ದೇವೆ. ಅದಕ್ಕೆ ಹೆಚ್ಚಿನ ಒತ್ತು ಕೊಡಬೇಕಾಗಿರುವುದು ಸರ್ಕಾರದ ಕರ್ತವ್ಯವಾಗಿದೆ. ನೀರಾವರಿಗೆ ಹೆಚ್ಚು ಅನುದಾನವನ್ನು ಕೊಟ್ಟರೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಇದರಿಂದ ಹೆಚ್ಚು ಪ್ರಯೋಜನವಾಗಲಿಲ್ಲ ಎಂಬ ವಿಚಾರವನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಲಿಕ್ಕೆ ಇಚ್ಛಿಸುತ್ತೇನೆ. ನಮ್ಮ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಲೆನಾಡು ಪ್ರದೇಶವಾಗಿರುವಂಥ ಆ ಭಾಗಕ್ಕೆ ಮಳೆ ಬಂದರೂ ಕೂಡ ಅಲ್ಲಿರುವ ಮಣ್ಣಿನ ಗುಣದಿಂದಾಗಿ ನೀರನ್ನು ಹಿಂಗಿಸುವ ಶಕ್ತಿ ಇಲ್ಲದೇ ಇರುವುದರಿಂದ ಅಲ್ಲಿ ಬಿದ್ದ ಮಳೆಯ ನೀರು ಎಲ್ಲಾ ಸಮುದ್ರದ ಪಾಲಾಗುವುದನ್ನು ನಾವು ಕಾಣುತ್ತಿದ್ದೇವೆ. ಹೀಗಾಗಿ ಬೇರೆ ಬೇರೆ ಕಡೆಗಳಲ್ಲಿ ನೀರಾವರಿಗೆ ಹೆಚ್ಚು ಒತ್ತನ್ನು ಕೊಟ್ಟಿದ್ದನ್ನು ನಾವು ಕಾಣುತ್ತಿದ್ದೇವೆ. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ನೀರಾವರಿಗೆ ಹೆಚ್ಚು ಒತ್ತನ್ನು ಕೊಡದಿರುವುದು ತಮಗೆಲ್ಲಾ ತಿಳಿದಿರುವ ವಿಚಾರ. ಕಳೆದ ಅವಧಿಯಲ್ಲಿ ಮಾನ್ಯ ಕುಮಾರ ಬಂಗಾರಪ್ಪನವರು ಕಿರು ನೀರಾವರಿ ಯೋಜನೆಯನ್ನು ವಹಿಸಿದ್ದರು, ಆ ಮೂಲಕ ಪಶ್ಚಿಮ ವಾಹಿನಿ ಎನ್ನುವ ಯೋಜನೆಯನ್ನು ನಾವು ತರುತ್ತೇವೆ, ಆ ಮೂಲಕ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗೆ ಅನುಕೂಲ ಮಾಡಿಕೊಡುತ್ತೇವೆ ಎಂಬ ವಿಚಾರ ಹೇಳಿದರೂ ಕೂಡ ಇದನ್ನು ಮಾಡಲಿಕ್ಕೆ ಸಾಧ್ಯವಾಗಲಿಲ್ಲ, ನಮ್ಮೆಲ್ಲರ ಬೇಡಿಕೆ ತಮಗೆಲ್ಲರಿಗೂ ಗೊತ್ತಿರುವ ಹಾಗೆ, ಈಗಾಗಲೇ ಮಾನ್ಯ ಜಯಪ್ರಕಾಶ್ ಹೆಗಡೆಯವರು ಈ ಒಂದು ಪ್ರಸ್ತಾಪವನ್ನು ಮಾಡಿದ್ದಾರೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯವರಿಗೆ ನದಿ ಜೋಡಣೆಯನ್ನು ತಾವು ಮಾಡಿದರೆ, ಈಗಾಗಲೇ ನಮ್ಮ ಮಾಜಿ ಶಾಸಕರಾದ

ಎ.ಜಿ. ಕೊಡಗಿಯವರು ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದರು. ಆ ಯೋಜನೆಯ ಪ್ರಕಾರ ನಾವು ನೀರಾವರಿಗೆ ಹೆಚ್ಚು ಒತ್ತನ್ನು ಕೊಟ್ಟಾಗ ಮಲೆನಾಡು ಪ್ರದೇಶದ ಆ ಭಾಗದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯವರಿಗೆ ಅನುಕೂಲವಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇಲ್ಲಿಯೇ ಇದ್ದಾರೆ. ಒಂದು ಪ್ರಸ್ತಾವನೆಯನ್ನು ಮಾಜಿ ಶಾಸಕರಾದ ಮಾನ್ಯ ಎ.ಜಿ. ಕೊಡಗಿಯವರು ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ ನದಿ ಜೋಡಣೆಗೆ ಸಂಬಂಧಪಟ್ಟ ಹಾಗೆ ಒಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈಗ ತಾವು ಹೇಗೆ ಸಕಲೇಶಪುರದಿಂದ ಈ ಭಾಗಕ್ಕೆ ನೀರನ್ನು ತಿರುಗಿಸಲಿಕ್ಕೆ ಒಂದು ಯೋಜನೆಗೆ ಅದರ ಬಗ್ಗೆ ಸರ್ವೇ ಮಾಡಿಸಬೇಕೆಂದು ತೀರ್ಮಾನಿಸಿ ನಿವೃತ್ತ ಇಂಜಿನಿಯರ್‌ರೊಬ್ಬರಿಗೆ ಕೊಡಬೇಕೆಂದು ಹೇಗೆ ತೀರ್ಮಾನಿಸಿದಿರಿ, ಅದೇ ರೀತಿ ಇದರ ಬಗ್ಗೆನೂ ಒಂದು ಸಭೆ ಮಾಡಿ ಅದರ ಪ್ರೋಸ್ ಅಂಡ್ ಕಾನ್ಸ್ ಬಗ್ಗೆ ಚರ್ಚೆ ಮಾಡಲಿಕ್ಕೆ ಅನುಕೂಲವಾಗುತ್ತದೆ. ಆಗ ಎಲ್ಲಾ ಭಾಗಕ್ಕೂ ಕುಡಿಯುವ ನೀರಿಗೂ ವ್ಯವಸ್ಥೆ ಮಾಡಿದ ಹಾಗೆ ಆಗುತ್ತದೆ, ರೈತರಿಗೂ ನೀರನ್ನು ಕೊಡಲಿಕ್ಕೆ ಆಗುತ್ತದೆ, ಈ ರಿವರ್ ಬೆಡ್‌ಅನ್ನು ಚೇಂಜ್ ಮಾಡದೇ ಅದನ್ನು ಒಂದು ಕಡೆಯಲ್ಲಿ ಜೋಡಣೆ ಮಾಡಲಿಕ್ಕೆ ಸಾಧ್ಯವಿದೆ ಎಂಬ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ, ನಾನು ತಮಗೆ ಆ ಮಾಹಿತಿಯನ್ನು ಕೊಡುತ್ತೇನೆ, ದಯಮಾಡಿ ಅದನ್ನು ತಾವು ಸರ್ವೇ ಮಾಡಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಏನು ಮಾಡದಿದ್ದರೂ ಚಿಂತೆಯಿಲ್ಲ ತಾವು ಈ ಸಭೆಯಲ್ಲಿ ಕುಳಿತಿದ್ದರೆ ನಮಗೆ ಅಷ್ಟೇ ಸಾಕು. ಎರಡು ದಿವಸಗಳಿಂದ ತಾವು ಇಲ್ಲಿ ಬಂದು ಕುಳಿತುಕೊಳ್ಳುತ್ತಿದ್ದೀರಿ ಅದು ನಮಗೆ ತುಂಬಾ ಸಂತೋಷ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮನ್ನು ಅಲ್ಲಿಗೆ ಕಳುಹಿಸಿ ಇಲ್ಲಿ ಪ್ರಕಟವಾಗಬೇಕು ಎಂದರೆ ಹೇಗೆ ? ಅಲ್ಲಿಗೆ ಕಳುಹಿಸಿದಿರಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಾವು ಯಾವಾಗಲೂ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇಲ್ಲಿ ಇರಬೇಕೆಂದು ಬಯಸುವವರು, ನಾವು ನಿಮ್ಮನ್ನು ಅಲ್ಲಿಗೆ ಕಳುಹಿಸಲೇ ಇಲ್ಲ, ನೀವೇ ಇವರ ಸಹವಾಸ ಬೇಡವೆಂದು ಅಲ್ಲಿಗೆ ಹೋದಿರಿ.

ಶ್ರೀ ಕೆ.ಎಸ್.ಈಶ್ವರಪ್ಪ : ಮಗಳನ್ನು ಗಂಡನ ಮನೆಗೆ ಕಳುಹಿಸಿದ ನಂತರವೇ ಮಗಳ ವಿಶೇಷತೆ ಗೊತ್ತಾಗುವುದು. ತವರೂರಿನವರು ಮಗಳನ್ನು ಗಂಡನ ಮನೆಗೆ ಕಳುಹಿಸಿದ ಮೇಲೆ ಅವರ ಬಗ್ಗೆ ಯೋಚನೆ ಮಾಡುತ್ತಾ ಕುಳಿತಿರುತ್ತಾರಂತೆ, ಆ ರೀತಿ

ನಮಗೆ ಆಗಿದೆ, ದಯವಿಟ್ಟು ತಾವು ಆವಾಗ ಆವಾಗ ಆದರೂ ಬಂದು ಹೋಗಿ.

ಶ್ರೀ ವಾಟಾಳ್ ನಾಗರಾಜ್ : ನಮಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಎಲ್ಲಿ ಇದ್ದಾರೆ, ಇಡೀ ನಮ್ಮ ಟೀಂ ಆ ಕಡೆ ಬರಬೇಕು ಎನ್ನುವಷ್ಟು ಯೋಚನೆ ನಮಗೆ ಆಗಿತ್ತು. ಆ ಸದನಕ್ಕೆ ಬರಬೇಕು ಏನೋ ಎನ್ನುವಂತಾಗಿತ್ತು. ಸಧ್ಯ ನೀವು ಎರಡು ದಿವಸಗಳಿಂದ ಇಲ್ಲಿಗೆ ಬರುತ್ತಿರುವುದು ಒಳ್ಳೆಯದು.

ಶ್ರೀ ಪ್ರಭಾಕರ ಕೆ. ಬಂಗೇರ : ನಾನು ಈಗಾಗಲೇ ಹೇಳಿದ ಹಾಗೆ ಆ ಒಂದು ಯೋಜನೆ ಪ್ರಕಾರ ಕುಡಿಯುವ ನೀರಿಗೆ ಹಾಗೂ ನೀರಾವರಿಗೆ ಮತ್ತು ವಿದ್ಯುತ್‌ಗೂ ಕೂಡ ಅದು ಸಹಕಾರಿಯಾಗುತ್ತದೆ. ಸರ್ವೇ ಕಾರ್ಯವನ್ನು ಸರ್ಕಾರ ಮಾಡಿದಾಗ ಖಂಡಿತವಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಶಾಶ್ವತವಾದ ನೀರಿನ ಪರಿಹಾರವಾಗುತ್ತದೆ. ಈಗಾಗಲೇ ತಮಗೆ ಗೊತ್ತಿರುವ ಹಾಗೆ, ಮಂಗಳೂರಿಗೆ ಕುಡಿಯುವ ನೀರಿನ ಯೋಜನೆಗೆ ಭಂಟ್ವಾಳ ತಾಲ್ಲೂಕಿನ ತುಂಗೆಯಿಂದ ನೀರು ಸರಬರಾಜು ಆಗುತ್ತಿದೆ. ಅಲ್ಲಿ ಕೂಡ ತುಂಬಾ ತೊಂದರೆಗಳು ಇವೆ. ಅಲ್ಲಿ ಕೈಗಾರಿಕೆಗಳಿಗೆ, ಎಂಸಿಎಫ್, ಪಣಂಬೂರಿಗೆ, ಎಂಆರ್‌ಪಿಎಲ್‌ಗೆ ಕೂಡ ಅಲ್ಲಿಂದ ನೀರು ಹೋಗುವುದರಿಂದ, ಮಂಗಳೂರಿಗೆ ಕೂಡ ಕುಡಿಯುವ ನೀರಿಗೆ ತೊಂದರೆಯಾಗಿರುವುದನ್ನು ನಾವೆಲ್ಲ ಕಂಡಿದ್ದೇವೆ. ಹೀಗಾಗಿ ಇದೊಂದು ನದಿ ಜೋಡಣೆ ಮಾಡಿದಾಗ ಖಂಡಿತವಾಗಿ ಕೂಡ ಶಾಶ್ವತವಾದ ಪರಿಹಾರವಾಗುತ್ತದೆ. ಕೈಗಾರಿಕೆಗಳಿಗೆ ನಾವು ಈಗಾಗಲೇ ಹೇಳಿದ ಹಾಗೆ ಅಲ್ಲಿ ನೀರನ್ನು ಸಮುದ್ರದಿಂದ ಆಗಬಹುದು ಆ ನೀರನ್ನು ಶುದ್ಧೀಕರಣ ಮಾಡಿಕೊಂಡು ಆ ಮೂಲಕ ಉಪಯೋಗ ಮಾಡಿದಾಗ ನಮಗೆ ಅಲ್ಲಿಯ ಮಂಗಳೂರಿನ ನಾಗರೀಕರೂ ಕೂಡ ಉತ್ತಮವಾದಂಥ ನೀರಿನ ಸೌಲಭ್ಯ ಸಿಗಲಿಕ್ಕೆ ಸಾಧ್ಯ ಇದೆ ಎಂದು ನಾನು ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಮತ್ತೆ ಈ ವರ್ಷ ಕಿರು ನೀರಾವರಿ ಯೋಜನೆಗಳಿಗೆ ೧೩೨ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಕಳೆದ ವರ್ಷ ಸದರಿ ಯೋಜನೆಗೆ ೧೫೫ ಲಕ್ಷ ರೂಪಾಯಿ ಇಟ್ಟಿದ್ದರು. ಈ ಯೋಜನೆಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಇವರು ಕೊಟ್ಟರತಕ್ಕಂಥ ಅನುದಾನ ನನ್ನ ಲೆಕ್ಕದಲ್ಲಿ ತುಂಬಾ ಕಡಿಮೆಯಾಯಿತು. ಈಗ ಇರತಕ್ಕಂಥ ನದಿಗಳಿಗೆ ಚೆಕ್ ಡ್ಯಾಂಗಳನ್ನು ಕಟ್ಟಿಸಿ ಆ ಮೂಲಕ ಈ ಕೆಲಸವನ್ನು ಮಾಡಿದಾಗ ಖಂಡಿತವಾಗಿಯೂ ಕೂಡ ಈ ಯೋಜನೆ ಯಶಸ್ವಿಯಾಗುತ್ತದೆ. ಇಲ್ಲದಿದ್ದರೆ ಮುಂದಿನ ೧೦ ವರ್ಷಗಳ ನಂತರ ನಮ್ಮಲ್ಲಿಯೂ ಕೂಡ ಕುಡಿಯುವ ನೀರಿನ ಬವಣೆ ಖಂಡಿತ ಬರುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕುಡಿಯುವ ನೀರಿನ ಬಗ್ಗೆ ಈಗಾಗಲೇ ಈ ಸದನದಲ್ಲಿ ಸಾಕಷ್ಟು ಪ್ರಸ್ತಾಪ ಆಗಿದೆ. ಕುಡಿಯುವ ನೀರಿನ ಸಮಸ್ಯೆಯ ನಿವಾರಣೆಗೋಸ್ಕರ ಸಧ್ಯಕ್ಕೆ

ತಾತ್ಕಾಲಿಕವಾದಂಥ ವ್ಯವಸ್ಥೆ ಮಾಡಿ ಅದಕ್ಕೆ ಹಣ ಕೂಡ ಕೊಡುತ್ತೇವೆಂದು ಹೇಳಿದ್ದೀರಿ. ಹಾಗೆಯೇ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡುತ್ತೇವೆಂಬ ವಿಚಾರ ಕೂಡ ಈಗಾಗಲೇ ಹೇಳಿದ್ದೀರಿ. ಇವತ್ತಿನ ದಿವಸ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೨೦೦ ರಿಂದ ೨೫೦ ಅಡಿಯವರೆಗೆ ಬೋರ್‌ವೆಲ್ ಡಿಗ್ ಮಾಡತಕ್ಕಂಥ ಪರಿಸ್ಥಿತಿ ಬಂದಿದೆ. ಈ ಒಂದು ಪರಿಸ್ಥಿತಿಯಲ್ಲಿ ನಾವೊಂದು ಶಾಶ್ವತವಾದ ಯೋಜನೆಯನ್ನು ಮಾಡದೇ ಇದ್ದರೆ ಮುಂದಿನ ದಿನಗಳಲ್ಲಿ ತುಂಬಾ ಕಷ್ಟವಾಗುತ್ತದೆ ಎಂಬ ವಿಷಯ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಜಲಾನಯನ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಮಳೆ ನೀರನ್ನು ಹಿಂಗಿಸುವುದಕ್ಕೋಸ್ಕರ ಹಿಂಗು ಗುಂಡಿಗಳನ್ನು ರಚನೆ ಮಾಡತಕ್ಕಂಥ ಕೆಲಸ ಕಾರ್ಯಗಳನ್ನು ಮಾಡಿದಾಗ ಖಂಡಿತವಾಗಿಯೂ ಕೂಡ ಕುಡಿಯುವ ನೀರಿನ ಒಂದು ಶಾಶ್ವತವಾದ ಯೋಜನೆ ಆಗಲಿಕ್ಕೆ ಸಾಧ್ಯವಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಸಹಕಾರ ಸಂಘಗಳಿಂದ ಪಡೆದಿರತಕ್ಕಂಥ ಸಾಲಕ್ಕೆ ೬ ಪರ್ಸೆಂಟ್ ಬಡ್ಡಿ ನಿಗದಿ ಮಾಡುತ್ತೇವೆಂದು ಕಳೆದ ಸಲವೇ ತಾವು ಘೋಷಣೆ ಮಾಡಿದ್ದೀರಿ. ಮತ್ತೆ ಈ ವರ್ಷದ ಬಜೆಟ್‌ನಲ್ಲಿ ಸುಸ್ತಿ ಬಡ್ಡಿ ಮನ್ನಾ ಮಾಡಿರುವುದನ್ನು ನಾನೂ ಕೂಡ ಸ್ವಾಗತ ಮಾಡುತ್ತೇನೆ. ಆದರೆ, ಸರಿಯಾದ ರೀತಿಯಲ್ಲಿ ಹಣ ಕಟ್ಟಿರತಕ್ಕಂಥ ರೈತರಿಗೆ ಇದರಿಂದ ಏನು ಪ್ರಯೋಜನವಾಗುತ್ತಿಲ್ಲ, ೨೦೦೧ ರಿಂದ ೨೦೦೪ರವರೆಗೆ ಅಂದರೆ ದಿನಾಂಕ ೩೧.೦೪.೨೦೦೪ರವರೆಗೆ ಸಾಲ ಪಡೆದುಕೊಂಡು ಇದರ ಅಸಲು ಮತ್ತು ಬಡ್ಡಿಯನ್ನು ಕಟ್ಟಿರತಕ್ಕಂಥವರಿಗೆ ಮಾತ್ರ ಇದರಿಂದ ಪ್ರಯೋಜನವಾಗುತ್ತಿದೆ.

ದಿನಾಂಕ ೧.೪.೨೦೦೪ರ ನಂತರ ಸಾಲ ಪಡೆದುಕೊಂಡಿರತಕ್ಕ ಸಾಲಗಾರನಿಗೆ ಮಾತ್ರ ಶೇಕಡ ೬ರ ದರದಲ್ಲಿ ಈ ಸಾಲ ಸಿಗುತ್ತದೆ ಎನ್ನತಕ್ಕಂಥ ವಿಚಾರವನ್ನು ತಮ್ಮ ಮೂಲಕ ನಾನು ತಿಳಿದುಕೊಂಡಿದ್ದೇನೆ. ಯಾರು ನಿರಂತರವಾಗಿ ಮತ್ತು ಪ್ರಾಮಾಣಿಕವಾಗಿ ಸಾಲದ ಹಣವನ್ನು ಮರುಪಾವತಿ ಮಾಡುತ್ತಾನೆಯೋ ಅಂಥವರಿಗೂ ಕೂಡ ಇದರಿಂದ ಅನುಕೂಲವಾಗಬೇಕು. ಏಕೆಂದರೆ, ಮುಂದಿನ ದಿನಗಳಲ್ಲಿ ಸರಿಯಾಗಿ ಸಾಲ ಕಟ್ಟಬೇಕಾದರೆ ಮತ್ತು ಆತನಿಗೂ ಕೂಡ ಈ ಸಂದರ್ಭದಲ್ಲಿ ಇದು ತಲುಪದಿದ್ದರೆ ಆತ ಏನು ಚಿಂತನೆ ಮಾಡುತ್ತಾನೆ ಎಂದರೆ, ನಾನೂ ಕೂಡ ಸಾಲವನ್ನು ಸರಿಯಾಗಿ ಕಟ್ಟದಿದ್ದರೆ ಮುಂದಿನ ಸರ್ಕಾರ ಅಥವಾ ಇನ್ನೊಂದು ಸರ್ಕಾರ ಬರತಕ್ಕಂಥದು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತದೆ ಎಂದು ತಿಳಿದುಕೊಳ್ಳಬಹುದು. ಇದರಿಂದ ಮುಂದಿನ ದಿನಗಳಲ್ಲಿ ೧೦೦ಕ್ಕೆ ೧೦೦ರಷ್ಟು ಜನರೂ ಕೂಡ ಸೌಲದ ಹಣವನ್ನು ಕಟ್ಟದೇ ಇರತಕ್ಕಂಥ ಸ್ಥಿತಿ ನಿರ್ಮಾಣವಾಗಬಹುದು. ಆದ್ದರಿಂದ, ಇದಕ್ಕೆ ಎಡೆಮಾಡಿ ಕೊಡದೆ ದಿನಾಂಕ ೧.೪.೨೦೦೪ರ ನಂತರವೂ ತೆಗೆದುಕೊಂಡಿರತಕ್ಕಂಥ ಸಾಲದ ಮೇಲಿನ ಬಡ್ಡಿಯನ್ನು

ಮನ್ನಾ ಮಾಡಿದರೆ ಅನಂತರ ಸಾಲ ತೆಗೆದುಕೊಂಡಿರತಕ್ಕಂಥವರಿಗೂ ಕೂಡ ಅನುಕೂಲವಾಗುತ್ತದೆ ಎನ್ನತಕ್ಕಂಥ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚಿಪಡುತ್ತೇನೆ. ಇವತ್ತಿನ ದಿವಸ ಅಡಿಕೆ ಬೆಳೆಗಾರರೆ ಹೆಚ್ಚಾಗಿರತಕ್ಕಂಥ ಕ್ಷೇತ್ರವನ್ನು ದಕ್ಷಿಣ ಕನ್ನಡ ಜಿಲ್ಲೆ ಹೊಂದಿದೆ. ಕಳೆದ ಸಲವೇ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಮಾನ್ಯ ಶಾಸಕರುಗಳು ಅಡಿಕೆಗೆ ಬೆಂಬಲ ಬೆಲೆ ನೀಡಬೇಕೆಂದು ಒತ್ತಾಯ ಮಾಡಿದ್ದೇವೆ. ಇವತ್ತಿನ ದಿವಸ ಅಡಿಕೆಗೆ ಸರಿಯಾದಂಥ ಮತ್ತು ನ್ಯಾಯವಾದಂಥ ಬೆಲೆ ಸಿಗುತ್ತಿಲ್ಲ, ಒಂದು ಕೆ.ಜಿ ಅಡಿಕೆಗೆ ೭೫ ರಿಂದ ೮೦ ರೂಪಾಯಿ ಅಂದರೆ ಒಂದು ಕೆ.ಜಿ. ಅಡಿಕೆ ಮಾರಾಟ ಮಾಡತಕ್ಕಂಥ ಸಂದರ್ಭದಲ್ಲಿ ಖರ್ಚಾಗುತ್ತದೆ. ಅಡಿಕೆ ಮಾರಾಟ ಮಾಡಿದ್ದರಿಂದ ಆತನಿಗೆ ೫೦ ರೂಪಾಯಿ ಸಿಗುವುದಾದರೆ ನಿಜವಾಗಿಯೂ ಕೂಡ ಆತ ನಷ್ಟವನ್ನು ಅನುಭವಿಸುತ್ತಾನೆ. ಆದ್ದರಿಂದ, ಅಡಿಕೆಗೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕೆಂದು ನಾವು ಸರ್ಕಾರವನ್ನು ಒತ್ತಾಯ ಮಾಡಿದರೂ ಕೂಡ ಸರ್ಕಾರ ಈ ಸಾರಿ ಏಕೋ ಮೀನಾಮೇಷ ಎಣಿಸುತ್ತಿದೆ. ಈ ಸಂದರ್ಭದಲ್ಲಿ ನನಗೆ ಅನಿಸುವುದೇನೆಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ೯ ಕ್ಷೇತ್ರವಿದ್ದು, ಇದರಲ್ಲಿ ೭ ಕ್ಷೇತ್ರದಲ್ಲಿ ಬಿ.ಜೆ.ಪಿ. ಸದಸ್ಯರು ಆಯ್ಕೆಯಾಗಿ ಬಂಧಿಸಿರುವುದರಿಂದ ಈ ರೀತಿಯಾದ ತಾರತಮ್ಯವನ್ನು ತೋರಿಸುತ್ತಿದ್ದಾರೆಂದು ನನಗೆ ಅನುಮಾನವಾಗುತ್ತಿದೆ. ನಾವೆಲ್ಲರೂ ಕೂಡ ಕೃಷಿ ಸಮಾಜದಿಂದ ಬಂದಿರತಕ್ಕಂಥ ವ್ಯಕ್ತಿಗಳಾಗಿದ್ದೇವೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಯೋಚನೆ ಮಾಡಬೇಕು. ಇವತ್ತಿನ ದಿವಸ ಕೃಷಿಕರು ಯಾವುದೇ ಒಂದು ಪಕ್ಷದಲ್ಲಿ ಇರಲಿ, ಇವರ ಜೀವನವನ್ನು ನಿರ್ವಹಣೆ ಮಾಡುವುದಕ್ಕೆ ಕಷ್ಟ ಸಾಧ್ಯವಾಗುತ್ತದೆ ಎಂಬ ದೃಷ್ಟಿಯಿಂದ ಸರ್ಕಾರ ಇದರ ಬಗ್ಗೆ ಹೆಚ್ಚಿನ ಗಮನವನ್ನು ಕೊಡುವುದರ ಜೊತೆಗೆ ಅಡಿಕೆಗೆ ಬೆಂಬಲ ಬೆಲೆಯನ್ನು ಘೋಷಣೆ ಮಾಡುವುದರ ಮೂಲಕ ಕೃಷಿಕರಿಗೆ ಅನುಕೂಲ ಮಾಡಿಕೊಡಬೇಕೆಂಬ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಈಗಾಗಲೇ ಗ್ರಾಮೀಣ ರಸ್ತೆಗಳ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ನಮ್ಮ ರಾಜ್ಯದ ಜಿಲ್ಲಾ ಪಂಚಾಯತ್ ರಸ್ತೆಗಳು ಜಿಲ್ಲೆಯ ಯಾವ ಮೂಲೆಯಲ್ಲಿದ್ದರೂ ಕೂಡ ಅದನ್ನು ಸರಿಪಡಿಸುವುದಕ್ಕೆ ಸರಿಯಾದ ಅನುದಾನವನ್ನು ಕೊಡದೇ ಇರತಕ್ಕಂಥದನ್ನು ನಾವು ನೋಡುತ್ತಿದ್ದೇವೆ. ಈ ಒಂದು ದೃಷ್ಟಿಯಲ್ಲಿ ನಾನು ಹೇಳುವುದೇನೆಂದರೆ ಮೊದಲಿಗೆ ಜಿಲ್ಲಾ ಪಂಚಾಯತ್ ರಸ್ತೆಗಳಲ್ಲಿ ಬಿದ್ದಿರತಕ್ಕಂಥ ಗುಂಡಿಗಳನ್ನು ಮುಚ್ಚತಕ್ಕಂಥ ಕೆಲಸವನ್ನು ಎಲ್ಲಾ ಕ್ಷೇತ್ರಗಳಲ್ಲಿ ಇವತ್ತಿನ ದಿವಸ ಸರ್ಕಾರ ಮಾಡಬೇಕು. ಪ್ರತಿಯೊಂದು ವಿಧಾನಸಭೆ ಕ್ಷೇತ್ರದಲ್ಲಿ ಸುಮಾರು ೧೦೦ ರಿಂದ ೧೫೦ ಕಿ.ಮಿ.ವರೆಗೆ ಜಿಲ್ಲಾ ಪಂಚಾಯತ್ ರಸ್ತೆಗಳಿವೆ. ಈ ರಸ್ತೆಗಳಿಗೆ ಒಂದು ಸಾರಿ ಡಾಂಬರೀಕರಣ ಆಗಿದೆ ಹೊರತು ಮತ್ತೆ ಮರು

ಡಾಂಬರೀಕರಣ ಕೆಲಸ ಆಗಿಲ್ಲ. ಒಂದೇ ಸಾರಿ ಎಲ್ಲ ಕಡೆ ಡಾಂಬರೀಕರಣ ಆಗಬೇಕೆಂದು ನಾನು ಒತ್ತಾಯ ಮಾಡುತ್ತಿಲ್ಲ. ಆದರೆ, ಗುಂಡಿ ಮುಚ್ಚತಕ್ಕಂಥ ಕೆಲಸಗಳು ಮಾರ್ಚ್ ಅಥವಾ ಏಪ್ರಿಲ್ ತಿಂಗಳೊಳಗಾಗಿ ಆಗದೇ ಇದ್ದಲ್ಲಿ ಮುಂದಿನ ದಿನಗಳಲ್ಲಿ ಈಗ ಇರತಕ್ಕಂಥ ರಸ್ತೆಗಳನ್ನು ನೋಡುವುದಕ್ಕೆ ನಮ್ಮಿಂದ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಒಂದು ದೃಷ್ಟಿಯಿಂದ ಸರ್ಕಾರ ಯೋಚನೆ ಮಾಡಿ ಜಿಲ್ಲಾ ಪಂಚಾಯತ್ ರಸ್ತೆಗಳ ಗುಂಡಿ ಮುಚ್ಚುವುದಕ್ಕೆ ಎಲ್ಲಾ ಕ್ಷೇತ್ರಗಳಿಗೆ ಮೊದಲು ಹಣ ಬಿಡುಗಡೆ ಮಾಡಬೇಕು. ಮತ್ತೆ ಮರು ಡಾಂಬರೀಕರಣಕ್ಕೆ ಹಂತ ಹಂತವಾಗಿ ಅಂದರೆ ನಾಲ್ಕು ಅಥವಾ ಐದು ವರ್ಷದ ಯೋಜನೆ ಮಾಡಿಕೊಂಡು ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲಿ ಕನಿಷ್ಟ ೨೫ ಕಿ.ಮೀ.ವರೆಗೆ ಡಾಂಬರೀಕರಣಕ್ಕೆ ಅನುವು ಮಾಡಿಕೊಟ್ಟಾಗ ಮಾತ್ರ ಖಂಡಿತವಾಗಿ ಕೂಡ ಗ್ರಾಮಾಂತರ ಪ್ರದೇಶದ ರೈತರು ಕೃಷಿ ಉತ್ಪನ್ನಗಳನ್ನು ಸಾಗಾಣಿಕೆ ಮಾಡುವುದಕ್ಕೆ ಸಾಧ್ಯವಾಗಬಹುದೆಂದು ನಾನು ನಿರೀಕ್ಷೆ ಮಾಡುತ್ತೇನೆ. ಇವತ್ತಿನ ದಿವಸ ನಮ್ಮಲ್ಲಿ ಕೃಷಿ ಉತ್ಪನ್ನ ಮಾರಾಟ ಸಮಿತಿಗಳಿವೆ. ೫೦ ಲಕ್ಷ ರೂಪಾಯಿಯ ಅಂದಾಜಿನ ಒಂದು ಕ್ರಿಯಾ ಯೋಜನೆಯನ್ನು ತಯಾರು ಮಾಡಿಕೊಡಿ ಎಂದು ಮಾನ್ಯ ಸಚಿವರು ಮಾರುಕಟ್ಟೆ ಸಮಿತಿಗೆ ತಿಳಿಸಿದ್ದಾರೆ. ಮತ್ತೆ ಇದರಿಂದ ಕೃಷಿ ಉತ್ಪನ್ನಗಳನ್ನು ಸಾಗಾಟ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ, ಇದಕ್ಕಾಗಿ ೫೦ ಲಕ್ಷ ರೂಪಾಯಿ ಮಂಜೂರು ಮಾಡಿಕೊಡುತ್ತೇವೆಂಬ ವಿಚಾರ ಹೇಳಿದರೂ ಕೂಡ ಇಷ್ಟರವರೆಗೆ ಕೂಡ ಈ ಹಣವನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ, ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಕೃಷಿ ಉತ್ಪನ್ನ ಮಾರಾಟ ಸಮಿತಿಗಳ ಮೂಲಕ ಆಗುವಂಥ ರಸ್ತೆಗಳಿಗೋಸ್ಕರ ೫೦ ಲಕ್ಷ ರೂಪಾಯಿಗಳನ್ನು ಆದಷ್ಟು ಶೀಘ್ರವಾಗಿ ಮಂಜೂರು ಮಾಡಬೇಕೆಂದು ಮಾನ್ಯ ಮಾರುಕಟ್ಟೆ ಸಚಿವರಲ್ಲಿ ಪಹಣಿ ಪತ್ರಗಳನ್ನು ಕಂಪ್ಯೂಟರ್ ಮೂಲಕ ಕಂದಾಯ ಇಲಾಖೆಯವರು ಕೊಡುತ್ತಿದ್ದಾರೆ. ಪಹಣಿ ಕೊಡುವುದಕ್ಕೆ ಈಗ ೧೫ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ, ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ ಇದನ್ನು ಬದಲಾವಣೆ ಮಾಡಬೇಕಾಗಿದೆ. ಇದನ್ನು ಮುಂದಿನ ದಿನಗಳಲ್ಲಿ ೫ ರೂಪಾಯಿಗೆ ಇಳಿಸುತ್ತೇನೆ ಎನ್ನತಕ್ಕಂಥ ವಿಚಾರವನ್ನು ಕಳೆದ ಸಲ ಇದ್ದಂಥ ಸರ್ಕಾರ ಹೇಳಿತ್ತು. ಆದ್ದರಿಂದ, ಇದನ್ನು ೫ ರೂಪಾಯಿಗೆ ಇಳಿಸಿ ತದನಂತರ ಪ್ರತಿ ಹೋಬಳಿ ಮಟ್ಟದಲ್ಲಿಯೂ ಕೂಡ ಈ ಪಹಣಿ ಪತ್ರಗಳು ಸಿಗುವ ಹಾಗೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ವಿನಂತಿ ಮಾಡುತ್ತೇನೆ. ಆಶ್ರಯ ಮನೆಗಳ ಬಗ್ಗೆ ತಮಗೆಲ್ಲಾ ಗೊತ್ತಿರುವ ಹಾಗೆ ಸಾಕಷ್ಟು ಪ್ರಸ್ತಾಪ ಇಲ್ಲಿ ಆಗಿವೆ. ಆಶ್ರಯ ಮನೆಗಳ ಹಂಚಿಕೆ ಸಮಿತಿಯನ್ನು ಶಾಸಕರ ಅಧ್ಯಕ್ಷತೆಯಲ್ಲಿ ಮಾಡಿಕೊಂಡು ಈ ಸಮಿತಿಯ ಮೂಲಕವಾಗಿಯೇ ಮನೆಗಳು ಹಂಚತಕ್ಕಂಥ ವ್ಯವಸ್ಥೆ ಆಗಬೇಕೆಂದು ಈಗಾಗಲೇ

ಸರ್ಕಾರವನ್ನು ಒತ್ತಾಯ ಮಾಡಿದ್ದೇವೆ. ಇದಕ್ಕೆ ನಾಳೆ ಅಥವಾ ನಾಡಿದ್ದು ತಿದ್ದುಪಡಿ ತರುತ್ತೇವೆಂದು ತಾವು ಹೇಳಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ನಾನು ಹೇಳುವುದೇನೆಂದರೆ, ಈ ಮನೆಗಳಿಗೆ ಈಗ ಕೊಡತಕ್ಕಂಥ ೨೦ ಸಾವಿರ ರೂಪಾಯಿ ಏನೇನೂ ಸಾಲದು. ಆದ್ದರಿಂದ ಇದನ್ನು ಹೆಚ್ಚಿಸಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಮತ್ತೆ ಇದರ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ, ಈಗ ಕೊಡತಕ್ಕಂಥ ೨೦ ಸಾವಿರ ರೂಪಾಯಿಗಳನ್ನು ಕನಿಷ್ಟ ೩೫ ರಿಂದ ೪೦ ಸಾವಿರ ರೂಪಾಯಿಗೆ ಏರಿಸಿದಾಗ ಮಾತ್ರ ಈಗಿನ ಪರಿಸ್ಥಿತಿಯಲ್ಲಿ ಆತನಿಗೆ ಅನುಕೂಲವಾಗುತ್ತದೆ. ಮತ್ತೆ ಈಗಾಗಲೇ ಮಾನ್ಯ ಅರಗ ಜ್ಞಾನೇಂದ್ರರವರು ಹೇಳಿದ ಹಾಗೆ ಇಂದಿರಾ ಆವಾಜ್ ಯೋಜನೆಯಲ್ಲಿ ಕಟ್ಟಿಸಿಕೊಡತಕ್ಕಂಥ ಮನೆಗಳಿಗೆ ರಿಜಿಸ್ಟ್ರೇಷನ್ ಮಾಡುತ್ತಿದ್ದೀರಿ. ಆದರೆ, ಈ ಯೋಜನೆಯಲ್ಲಿ ಪುಕ್ಕಟ್ಟೆಯಾಗಿ ಕೊಡತಕ್ಕಂಥ ಮನೆಗಳಾಗಿವೆ. ಮತ್ತೆ ಈ ಮನೆಗಳಿಗೆ ಕೊಡತಕ್ಕಂಥ ೨೦ ಸಾವಿರ ರೂಪಾಯಿ ಸಾಕಾಗುವುದಿಲ್ಲ, ಆದ್ದರಿಂದ ಈ ಹಣವನ್ನು ಹೆಚ್ಚಿಸತಕ್ಕಂಥ ಅವಶ್ಯಕತೆ ಇದೆ. ಆದ್ದರಿಂದ, ಇದನ್ನು ಕೂಡ ಮಾಡಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ತಾಲ್ಲೂಕಿಗೊಂದು ಕ್ರೀಡಾಂಗಣ ಕೊಡತಕ್ಕಂಥದರ ಬಗ್ಗೆ ಸರ್ಕಾರ ಯೋಚನೆ ಮಾಡುತ್ತಿದೆ ಎನ್ನತಕ್ಕಂಥದನ್ನು ನಾನು ಕೇಳಿದ್ದೇನೆ. ನನ್ನ ಬೆಳ್ತಂಗಡಿ ಕ್ಷೇತ್ರದಲ್ಲಿಯೂ ಕೂಡ ಒಂದು ಕ್ರೀಡಾಂಗಣ ಇದೆ. ಆದರೆ, ಇದು ಸರಿಯಾದಂಥ ವ್ಯವಸ್ಥೆಯ ಅಡಿಯಲ್ಲಿ ಆಗಲಿಲ್ಲ, ಆದ್ದರಿಂದ ಸರ್ಕಾರ ಇದಕ್ಕೆ ಹೆಚ್ಚು ಹಣವನ್ನು ಒದಗಿಸಬೇಕು. ಇವತ್ತಿನ ದಿವಸ ನಿಜವಾಗಿಯೂ ಕೂಡ ತಾಲ್ಲೂಕಿಗೆ ಒಂದು ಕ್ರೀಡಾಂಗಣ ಒಳ್ಳೆಯ ರೀತಿಯಲ್ಲಿ ಆಗಬೇಕು. ಹಾಗೆಯೇ ರಾಜ್ಯದಲ್ಲಿ ಕ್ರೀಡೆಗೆ ಹೆಚ್ಚಿನ ಆದ್ಯತೆ ಕೊಡತಕ್ಕಂಥದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಏಕೆಂದರೆ ಇವತ್ತಿನ ದಿವಸ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ಕೊಡದೆ ಇರುವುದರಿಂದ ಏನಾಗಿದೆ ಎಂದರೆ ನಮ್ಮಲ್ಲಿ ಇಷ್ಟು ಜನಸಂಖ್ಯೆ ಇದ್ದರೂ ಕೂಡ ಒಲಂಪಿಕ್ಸ್‌ನಲ್ಲಿ ಚಿನ್ನದ ಪದಕ ಗಳಿಸುವುದಕ್ಕೆ ಸಾಧ್ಯವಾಗಲಿಲ್ಲ.

ಆ ಒಂದು ದೃಷ್ಟಿಯಲ್ಲಿ ನಾವು ಯೋಚನೆಯನ್ನು ಮಾಡಿದಾಗ ಜಿಲ್ಲೆಗೊಂದು ಕ್ರೀಡೆಯ ವಸತಿಗೃಹ ಆ ಮೂಲಕವಾಗಿ ಅದಕ್ಕೆ ಬೇಕಾದಂಥ ವ್ಯವಸ್ಥೆಗಳನ್ನು ಮಾಡಿದಾಗ, ಇದರಿಂದ ನಾವು ಹೆಚ್ಚು ಕ್ರೀಡಾಪಟುಗಳನ್ನು ನಾವು ಮಾಡಿದಂತಾಗುತ್ತದೆ ಎನ್ನುವಂಥ ವಿಚಾರವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತಿದ್ದೇನೆ. ಹಾಗೆಯೆ ತಾಲ್ಲೂಕಿಗೊಂದರಂತೆ ನಾವು ಈಗಾಗಲೇ ಹೇಳಿದ ಹಾಗೆ ಎಲ್ಲಾ ಆಫೀಸ್‌ಗಳು ಒಂದೆ ಕಡೆಗಳಲ್ಲಿ ಆಗಬೇಕೆಂಬ ದೃಷ್ಟಿಯಿಂದ ಮಿನಿ ವಿಧಾನಸೌಧ ಆಗಬೇಕೆಂಬ ಬೇಡಿಕೆಯನ್ನು ನಾವು ಕೇಳುತ್ತಿದ್ದೇವೆ, ಆ ಒಂದು ಬೇಡಿಕೆ ಸರ್ಕಾರದ ಮುಂದಿದೆ. ಅದನ್ನು ಕೂಡ

ಕೊಡಿಸುವಂಥ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನಗಳನ್ನು ಮಾಡಬೇಕು. ಒಂದೇ ಸೂರಿನ ಅಡಿಯಲ್ಲಿ ಎಲ್ಲಾ ಇಲಾಖೆಗಳು ಬಂದಾಗ ಜನ ಸಾಮಾನ್ಯರಿಗೆ ಅದರಿಂದ ತುಂಬಾ ಪ್ರಯೋಜನಗಳು ಆಗುತ್ತವೆ ಎಂಬ ವಿಚಾರವನ್ನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಛೇರ್ಮನ್‌ರೆ, ಈ ಆಶ್ರಯ ಯೋಜನೆಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುತ್ತೇವೆಂದು ಹೇಳಿ ಈಗಾಗಲೇ ಬಹಳ ಹಿಂದೆಯೇ ತೀರ್ಮಾನವಾಗಿತ್ತು. ನಮ್ಮ ಸಲಹಾ ಸಮಿತಿ ಸಭೆಯಲ್ಲಿ ಮತ್ತು ಈ ಸದನದಲ್ಲಿಯೂ ಹೇಳಿದರು. ಅದರ ಬಗ್ಗೆ ಇನ್ನು ಸರ್ಕಾರ ಪ್ರಾಮಾಣಿಕವಾಗಿ ತೀರ್ಮಾನ ತೆಗೆದುಕೊಳ್ಳುತ್ತಾರೆನ್ನುವ ಬಗ್ಗೆ ನನಗೆ ನಂಬಿಕೆ ಇಲ್ಲ. ನನಗೆ ಗೊತ್ತಿರುವ ಪ್ರಕಾರ ಹೋದ ಸಲಹಾ ಸಮಿತಿ ಸಭೆಯಲ್ಲಿ ಅಷ್ಟೊಂದು ಪ್ರಗತಿದಾಯಕವಾದ ಮಾತು ಅಲ್ಲಿ ಬರಲಿಲ್ಲ. ಈಗ ಎರಡು ದಿವಸ ಮಾತ್ರ ಅಧಿವೇಶನದ ಸಮಯ ಉಳಿದಿರುವಂಥದ್ದು, ತಮಗೂ ಕೂಡ ಅದರ ಅನುಭವವಾಗಿದೆ. ಕ್ಷೇತ್ರದ ಪರಿಸ್ಥಿತಿ ಏನು ಎನ್ನುವುದರ ಬಗ್ಗೆ ತಮಗೂ ಸ್ಪಷ್ಟವಾಗಿ ಅನುಭವವಾಗಿದೆ. ಮೊದಲನೆಯದಾಗಿ ನಾವು ಶಾಸಕರುಗಳು ಎಷ್ಟೊಂದು ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದೇವೆಂದರೆ, ನಾವು ನಮ್ಮ ಕ್ಷೇತ್ರಕ್ಕೆ ಶಾಸಕರು, ಮತದಾರರು ನಮ್ಮನ್ನು ಆಯ್ಕೆ ಮಾಡಿರುವುದರಿಂದ ನಾವು ಸಂವಿಧಾನಬದ್ಧವಾಗಿ ಶಾಸಕರಾಗಿರುತ್ತೇವೆ. ನಮ್ಮ ಮೇಲೆ ಸವಾರಿ ಮಾಡುವುದಕ್ಕೆ ಇಬ್ಬರು, ಒಬ್ಬರು ಜಿಲ್ಲಾ ಮಂತ್ರಿಗಳು, ಮತ್ತೊಬ್ಬರು ಲೋಕಸಭಾ ಸದಸ್ಯರು, ಲೋಕಸಭಾ ಸದಸ್ಯರುಗಳಿಗೆ ಎರಡು ಕೋಟಿ ರೂ.ಗಳನ್ನು ಕೊಡುತ್ತಾರೆ. ರಾಜ್ಯ ಸರ್ಕಾರ ಅವರಿಗೆ ಕಾರು ಮತ್ತು ಮಂತ್ರಿ ಸ್ಥಾನ ಮತ್ತು ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಒಂದು ಕಚೇರಿ, ಲೋಕಸಭಾ ಸದಸ್ಯರುಗಳು ಎಲ್ಲಿ ಹೋದಾಗಲೂ ಸಂಪೂರ್ಣವಾಗಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲೆಯ ಅಧಿಕಾರಿಗಳು ಎಲ್ಲರೂ ಅವರ ಹಿಂದೆ ಹೋಗುತ್ತಾರೆ. ಯಾವ ಶಾಸಕರುಗಳಿಗೆ ಆ ಕ್ಷೇತ್ರದಲ್ಲಿ ಎಲ್ಲಾ ಸವಲತ್ತುಗಳು ದೊರಕಬೇಕಾಗಿತ್ತು. ಅದು ಇಲ್ಲ. ಲೋಕಸಭಾ ಸದಸ್ಯರಿಗೆ ಕೆಂಪುದ್ವೀಪ ಮತ್ತು ಅವರಿಗೆ ಎಲ್ಲಾ ರೀತಿಯ ಸವಲತ್ತುಗಳು. ಶಾಸಕರಿಗೆ ೫೦ ಲಕ್ಷ ರೂ.ಗಳನ್ನು ಕೊಡುವುದಾಗಿ ಇವರು ನಿಗದಿ ಮಾಡಿದ್ದಾರೆ. ನನಗೆ ಅನಿಸುತ್ತದೆ, ಇದು ಒಂದು ಕಡೆ, ಮತ್ತೊಂದು ಕಡೆ ಲೋಕಸಭಾ ಸದಸ್ಯರು, ಇನ್ನೊಂದು ಕಡೆ ಜಿಲ್ಲಾ ಮಂತ್ರಿಗಳು, ನಾವು ಜಿಲ್ಲಾ ಮಂತ್ರಿಗಳನ್ನು ಕರೆಯದೆ ಎಲ್ಲೂ ಸಮಾರಂಭವನ್ನು ಮಾಡುವಂತಿಲ್ಲವೆ? ಇಲ್ಲವೆ ಇಲ್ಲ, ನಾವು ಸಮಾರಂಭವನ್ನು ಮಾಡಬೇಕೆಂದರೆ, ಜಿಲ್ಲಾ ಮಂತ್ರಿಗಳ ಹೆಸರನ್ನು ಹಾಕಲೇಬೇಕು. ಲೋಕಸಭಾ ಸದಸ್ಯರ ಹೆಸರನ್ನು ಹಾಕಬೇಕು. ನನ್ನ ದೃಷ್ಟಿಯಲ್ಲಿ ಹೊರಗಡೆಯಿಂದ ಬರುವ ರಾಜ್ಯದ ಮುಖ್ಯಮಂತ್ರಿಗಳು ಬರಲಿ, ಅವರು ಉದ್ಘಾಟನೆಗೆ ಬರಲಿ ನಮಗೆ ಸಂತೋಷ, ಬೇರೆ ಯಾವುದೆ ಇಲಾಖೆಯ ಮಂತ್ರಿಗಳು ಬಂದರೂ